ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ

ಸಂಪುಟ 25 ಸಂಚಿಕೆ 29


ಜುಲೈ 20, 2003 ಬೆಲೆ ರೂ. 3.00



ಶಾಲಾ-ಕಾಲೇಜು ಪ್ರವೇಶ ವಿದ್ಯಾರ್ಥಿ-ಪೋಷಕರ ಪರದಾಟ




ವಿಲೀನದತ್ತ ಜನತಾದಳ



ಅಯೋಧ್ಯ: ಬಟ್ಟಬಯಲಾದ ದುಷ್ಟ ನಾಟಕ




ಬಿಸಿಯೂಟದ ಅವಾಂತರಗಳು



ಸಮುದ್ರ ಕೊರೆತ: ಆಚೆ-ಈಚೆ

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ 35



ಕಳೆದ ಸಂಚಿಕೆಯಲ್ಲಿ 'ಬ್ಲಿಟ್ಜ್' ಪತ್ರಿಕೆಯ ಕರಾಂಜಿಯಾರ ಭೀತಿಯಿಲ್ಲದೆ ದಿಟ್ಟತನದ ಬರವಣಿಗೆ ಮತ್ತು ರಾಜಕೀಯ ಪರಿಸ್ಥಿತಿ ಕುರಿತು ಅವರ ಪಕ್ವತೆ ಹೊಂದಿದ ನಿಲುವುಗಳು ಜಯಪಾಲ್‌ರ ಮೇಲೆ ಬೀರಿದ ಪರಿಣಾಮಗಳು; ಕರಾಂಜಿಯರನ್ನು ಭೇಟಿಯಾದ ಮೇಜರ್; ಮೀರತ್‌ನಲ್ಲಿ ಮುಂದುವರೆದಿದ್ದ ಕೋಮುಗಲಭೆ, ಕೋಮುವಾದದ ಬಗ್ಗೆ ಸ್ಪಷ್ಟ ನಿರ್ಧಾರ ಕೈಗೊಳ್ಳದೆ ಮೀರತ್ ಕಾಂಗ್ರೆಸ್ ಅಧಿವೇಶನ; ಸಮಾಜವಾದಿ ತ್ರಿಮೂರ್ತಿಗಳ ಭೇಟಿಯೋಜನೆ ಕೈಗೊಂಡ ಮೇಜರ್; ಮತ್ತು ಸೋಷಲಿಸ್ಟ್ ಪಕ್ಷಕ್ಕೆ ಯಾವುದೇ ಬಂಡಾಯದ ಯೋಜನೆಯಿಲ್ಲ ಎಂಬುದನ್ನು ಅರ್ಥೈಸಿಕೊಂಡ ಜಯಪಾಲ್ ಸಿಂಗರ ಬಗ್ಗೆ ಓದಿರುವಿರಿ. ಮುಂದೆ..

ಕನ್ನಡಕ್ಕೆ: ವಿಶ್ವ ಕುಂದಾಪುರ

ಮೇಜರ್ ಜೈಪಾಲ್ ಸಿಂಗ್ ಬಂಧನ!

ಗೆರಿಲ್ಲಾ ಯುದ್ಧದ ಆರಂಭದ ಹಂತವಾಗಿ ಗವರ್ನರ್‌ಗಳನ್ನು ಬಂಧಿಸುವ ಮಾತು ಬಹುಮಟ್ಟಿಗೆ ಕ್ರಾಂತಿಕಾರಿ ಪದಪುಂಜವಷ್ಟೇ ಆಗಿದ್ದು ಬೇಜವಾಬ್ದಾರಿ ಕೃತ್ಯವಾಗುತ್ತದೆ.

ಯಾವುದೇ ನಿರ್ದಿಷ್ಟ ಯೋಜನೆಯಿಲ್ಲದೆ ಜನರನ್ನು ಕ್ರಾಂತಿಕಾರಿ ಕಾರ್ಯಾಚರಣೆಗೆ ಇಳಿಸಿದ್ದೇ ಆದಲ್ಲಿ ಕೆಲವು ಬೀದಿದೀಪಗಳನ್ನು ಒಡೆದು ಹಾಕಿ, ಕೆಲವು ಪೋಲೀಸ್ ಠಾಣೆಗಳಿಗೆ ಬೆಂಕಿಯಿಟ್ಟು ಆನಂತರ ತಣ್ಣಗಾಗಿ ಬಿಡುತ್ತಾರೆ. ರಾಜಕೀಯ ಅಧಿಕಾರವನ್ನು ಹಿಡಿಯಬೇಕಾದರೆ ಅಧಿಕಾರದ ಕೆಲವು ನಿಜವಾದ ಆಧಾರಸ್ತಂಭಗಳನ್ನು ಹಿಡಿಯಬೇಕಾಗುತ್ತದೆ. ಹಠಾತ್ ಸಾಮೂಹಿಕ ಕಾರ್ಯಾಚರಣೆಯಿಂದ ಈ ಗುರಿಯನ್ನು ಸಾಧಿಸಲು ಯಾವತ್ತೂ ಸಾಧ್ಯವಿಲ್ಲ.

"ಜನರು ಮತ್ತು ಸಶಸ್ತ್ರ ಪಡೆಗಳು ಬಂಡಾಯವೇಳಬೇಕೆಂಬುದು ಇಡೀ ಯೋಜನೆಯ ಉದ್ದೇಶ. ಅದನ್ನು ಸಾಮೂಹಿಕ ಕಾರ್ಯಾಚರಣೆಯಲ್ಲಿ ಮಾತ್ರವೇ ನಮಗೆ ನಂಬಿಕೆಯಿದೆ' ಎಂದು ಹೇಳಿದ್ದು ಅರ್ಥ ಮಾಡಿಕೊಳ್ಳಲಾಗದ ಸಂಗತಿ. ವಾಸ್ತವವಾಗಿ, ಸೋಷಲಿಸ್ಟ್ ಪಕ್ಷಕ್ಕೆ ಬಂಡಾಯದ ಯಾವುದೇ ಯೋಜನೆಯಿಲ್ಲ ಎಂಬುದು ನನಗೆ ಅರಿವಾಯಿತು"-

ಒಳಗಿನ 'ಸಂಘಟನೆ'ಗೆ ನನ್ನ ಅಭಿಪ್ರಾಯವನ್ನು ತಿಳಿಸಿದೆ. ದೇಶಾದ್ಯಂತ ದೊಂಬಿ ವಿಸ್ತರಿಸಿತು. ಇದುವರೆಗೆ ಬಾಧಿಸದೇ ಇದ್ದ ಸಶಸ್ತ್ರ ಪಡೆಗಳನ್ನು ಕೂಡ ಕೋಮುವಾದಿ ವಿದ್ವೇಷಹೊಕ್ಕಿತು. ಲೀಗ್‌ನವರು ಮಧ್ಯಂತರ ಸರಕಾರವನ್ನು ಸೇರಿದರು. ಇಡೀ ಸರಕಾರಿ ಯಂತ್ರ ಕೋಮು ನೆಲೆಯಲ್ಲಿ ಒಡೆದು ಹೋಯಿತು. ಕೋಮುವಾದಿ ದಳ್ಳುರಿಯ ಪ್ರಬಾವಕ್ಕೆ ಸಿಕ್ಕಿ ಆರೋಗ್ಯಕರ ಹಾಗೂ ದೇಶಪ್ರೇಮಿ ಮನಸ್ಸುಗಳು ಕೂಡ ಮಲಿನಗೊಂಡವು. ಬ್ರಿಟಿಷರು ತಮ್ಮ ಗುರಿಯನ್ನು ಸಾಧಿಸಿದ್ದರು. ತಾವು ಯಾವಾಗ ದೇಶ ಬಿಟ್ಟು ಹೋಗುತ್ತೇವೆ ಎನ್ನುವುದನ್ನು ಬ್ರಿಟಿಷರು ಕೆಲವು ತಿಂಗಳುಗಳ ನಂತರ ಘೋಷಿಸಿದರು.

1947ರ ಆರಂಭದಲ್ಲಿ ಸೋಷಲಿಸ್ಟ್ ಸಮ್ಮೇಳನದಲ್ಲಿ ಪಾಲ್ಗೊಳ್ಳಲು ನಾನು ಕಾನ್ಪುರಕ್ಕೆ ತೆರಳಿದೆ. ಆ ವೇಳೆಗಾಗಲೇ ಎಲ್ಲವೂ ಕಳೆದು ಹೋಗಿತ್ತು. ಸಂಘಟನೆಯ ನನ್ನ ಸಹೋದ್ಯೋಗಿಗಳು ಕಾನ್ಪುರದಲ್ಲಿ ನನ್ನನ್ನು ಭೇಟಿಯಾದರು. ಒಳಗಡೆಯ ಸಂಘಟನೆ ಕೋಮುವಾದದ ನೆಲೆಯಲ್ಲಿ ಇಬ್ಭಾಗವಾಗ ತೊಡಗಿತ್ತು. ಕೇಂದ್ರ ಮಂಡಳಿಯಲ್ಲಿ ಒಬ್ಬ ಸಿಖ್ ಮತ್ತು ಮುಸ್ಲಿಂ ಅಧಿಕಾರಿ ತಮ್ಮ ತಮ್ಮ ಪಿಸ್ತೂಲುಗಳನ್ನು ಹೊರ ಸೆಳೆದರು. ಮಾಸ್ಟರ್ ತಾರಾ ಸಿಂಗ್ ಮತ್ತು ಜಿನ್ನಾ ಸೈನಿಕರು ಹಾಗೂ ಅಧಿಕಾರಿಗಳ ಹಿರೋಗಳಾಗತೊಡಗಿದ್ದರು. ಇವರಿಬ್ಬರೂ ಹಿಂದೆ ಸಂಕಷ್ಟಕಾಲದಲ್ಲಿ ಬಂಡೆಯಂಥ ಏಕತೆಯನ್ನು ಪ್ರದರ್ಶಿಸಿದ್ದರು. ಹಾಗೆ ಅವೆಲ್ಲವೂ ಈಗ ಕಳೆದು ಹೋಗಿತ್ತು.

ಸಂಘಟನೆಯನ್ನು ಬರ್ಖಾಸ್ತುಗೊಳಿಸಲು ನಾವು ನಿರ್ಧರಿಸಿದೆವು. ನಾನು ಕಾಯಬೇಕು ಹಾಗೂ 'ಸ್ವಾತಂತ್ರ್ಯ'ವನ್ನು ನೀಡಿದ ಮೇಲಷ್ಟೆ ನಾನು

> **"ಸ್ವಾತಂತ್ರ್ಯ ಬಂತು. 1947 ಸೆಪ್ಟೆಂಬರ್ 3 ರಂದು ನೆಹರೂಗೆ ಬರೆದ ಬಹಿರಂಗ ಪತ್ರವನ್ನು ನಾನು ಪ್ರಕಟಿಸಿದೆ. ನಮ್ಮ ಚಟುವಟಿಕೆಗಳನ್ನು ಅದರಲ್ಲಿ ವಿವರಿಸಲಾಗಿತ್ತು. ಹಾಗೂ ನನ್ನ ಬಗ್ಗೆ ಬ್ರಿಟಿಷರು ಹರಡಿದ್ದ ಅಪಪ್ರಚಾರಕ್ಕೆ ಉತ್ತರಿಸಲು, ನಾನು ಶರಣಾಗಲು ಸಿದ್ಧ ಎಂದು ತಿಳಿಸಿದ್ದೆ."**

ಬಹಿರಂಗಕ್ಕೆ ಬರಬೇಕು ಎಂದು ನನಗೆ ಸೂಚಿಸಲಾಯಿತು.

ಧೃತಿಗೆಟ್ಟ ನಾನು ಅಧ್ಯಾತ್ಮಿಕ ಶಾಂತಿಯನ್ನು ಅರಸತೊಡಗಿದೆ. ಆಟಗಾರರ ಒದೆ ತಿಂದು ತಿಂದು ನುಜ್ಜು ಗುಜ್ಜಾಗಿದ್ದ ಫುಟ್ಬಾಲ್‌ನಂತೆ 'ಗಾಳಿ' ನನ್ನನ್ನು ಯದ್ವಾತದ್ವ ಒದೆಯಿತು.

ಸಮಾಜವಾದಿಗಳಿಗೆ ಶಾಪ !

ಸಮಾಜವಾದಿಗಳಿಗೆ ಹಿಡಿಶಾಪ ಹಾಕಿ ಸುರೇಶರಿಗೆ ಒಂದು ಕೋಪೋದ್ರಿಕ್ತ ಪತ್ರ ಬರೆದೆ. ಅದರ ಫೋಟೋಸ್ಟಾಟ್ ಪ್ರತಿಯೊಂದನ್ನು ಫೋರ್ಟ್ ವಿಲಿಯಂನಲ್ಲಿ ನನಗೆ ತೋರಿಸಲಾಯಿತು. ಸ್ವತಂತ್ರ ಭಾರತದಲ್ಲಿ, ಕಾಂಗ್ರೆಸ್ ಆಡಳಿತದಲ್ಲಿ ನನ್ನನ್ನು ಇಲ್ಲಿ ಬಂಧಿಸಿಡಲಾಯಿತು. ಅತ್ಯಂತ ಸಂಕಷ್ಟಕಾಲದಲ್ಲಿ ಬ್ರಿಟಿಷರಿಂದ ನಮ್ಮನ್ನು ರಕ್ಷಿಸಿ ಆಶ್ರಯ ಕೊಟ್ಟಿದ್ದ ಸುರೇಶರಿಗೆ ನಾನೀಗ ಇನ್ನಷ್ಟು ವಿಷಯಗಳನ್ನು ವಿವರಿಸಬೇಕಿದೆ.

ಸೋಷಲಿಸ್ಟರ ವಿರುದ್ಧ ನನಗೆ ವೈಯಕ್ತಿಕ ದ್ವೇಷವೇನೂ ಇಲ್ಲ. ಜಯಪ್ರಕಾಶ ನಾರಾಯಣ ಮತ್ತು ರಾಷ್ಟ್ರೀಯ ವಿಮೋಚನೆ ಆಂದೋಲನದಲ್ಲಿ ಅವರ ಪಾತ್ರವನ್ನು ನಾನು ಗೌರವಿಸುತ್ತೇನೆ. ನಾನೀಗ ಯಾವ ಪಕ್ಷದಲ್ಲಿದ್ದೇನೋ (ಕಮ್ಯುನಿಸ್ಟ್ ಪಕ್ಷ) ಆ ಪಕ್ಷದಿಂದ ಸಮಾನ ದೂರದಲ್ಲಿರುವ ಲೋಹಿಯಾರ ಸಿದ್ಧಾಂತವನ್ನು ವಿರೋಧಿಸುವೆನಾದರೂ ಡಾ. ಲೋಹಿಯಾರನ್ನು ನಾನು ಅತಿಯಾಗಿ ಗೌರವಿಸುತ್ತೇನೆ. ರಾಜಕೀಯವಾಗಿ ನನಗೆ ಅವರಿಬ್ಬರ ಬಗ್ಗೆಯೂ ಸಿಟ್ಟಿದೆ.

ಮರೀಚಿಕೆಗಳು!

ಅವರು ಬಹುತೇಕ ಭಾರತೀಯ ಜನತೆಗೆ ಮತ್ತು ಸಶಸ್ತ್ರ ಭಾರತೀಯ ಪಡೆಗಳಿಗೆ ಅಪಾರ ಆಶ್ವಾಸನೆ ನೀಡಿದ್ದರು. ಆದರೆ ಮಾಡಿದ್ದು ಮಾತ್ರ ಅತ್ಯಲ್ಪ. ಎಲ್ಲೆಯಿಲ್ಲದ ಮರುಭೂಮಿಯಲ್ಲಿ ದಾಹದಿಂದ ಪರಿತಪಿಸುವ ಜಿಂಕೆಯಂತೆ ನಾವು ಅವರ ಸುತ್ತ ಸುತ್ತಿದೆವು. ಆದರೆ ಅವರೆಲ್ಲರೂ ಮರೀಚಿಕೆಯೆಂದು ಸಾಬೀತಾಯಿತು!

ಸೋಷಲಿಸ್ಟ್ ಪಕ್ಷದ ಕಾರ್ಯಕರ್ತರು ಹಾಗೂ ನಾಯಕರ ಬಗ್ಗೆ ನನಗೆ ಆದರವಿದೆ. ನನಗೆ ಸಹಾನುಭೂತಿ ತೋರಿದ, ಬೆಂಬಲ ನೀಡಿದ ಪಟೇಲ್ ಮತ್ತು ಮಿಸ್ ಮೆಹ್ತಾರಂಥ ಸಮಾಜವಾದಿ ತರುಣ ತರುಣಿಯರ ನೆನಪು ನನಗಿದೆ. ಅವರೆಲ್ಲ ರಾಜಕೀಯವಾಗಿ ತಪ್ಪು ಹೆಜ್ಜೆಯಿಟ್ಟವರಾದರೂ ಅವರ ಪ್ರಾಮಾಣಿಕತೆ ನಿಷ್ಠೆಯನ್ನು ಪ್ರಶ್ನಿಸುವಂತಿರಲಿಲ್ಲ. ನಾನು ಅವರೆಲ್ಲರಿಗೆ ಕೃತಜ್ಞನಾಗಿದ್ದೇನೆ.

ಸ್ವಾತಂತ್ರ್ಯ ಬಂತು. 1947 ಸೆಪ್ಟೆಂಬರ್ 3 ರಂದು ನೆಹರೂಗೆ ಬರೆದ ಬಹಿರಂಗ ಪತ್ರವನ್ನು ನಾನು ಪ್ರಕಟಿಸಿದೆ. ನಮ್ಮ ಚಟುವಟಿಕೆಗಳನ್ನು ಅದರಲ್ಲಿ ವಿವರಿಸಲಾಗಿತ್ತು. ಹಾಗೂ ನನ್ನ ಬಗ್ಗೆ ಬ್ರಿಟಿಷರು ಹರಡಿದ್ದ ಅಪಪ್ರಚಾರಕ್ಕೆ ಉತ್ತರಿಸಲು, ನಾನು ಶರಣಾಗಲು ಸಿದ್ಧ ಎಂದು ತಿಳಿಸಿದ್ದೆ.

ನನಗೆ ಆ ದಿನ ಚೆನ್ನಾಗಿ ನೆನಪಿದೆ ಅದನ್ನು ಯಾವತ್ತಾದರೂ ಮರೆತೇನೇ ? 1947 ಸೆಪ್ಟೆಂಬರ್ 3 ಆಗ ಪ್ರಥಮ ಭಾರತೀಯ ಏರಿಯಾ ಕಮಾಂಡರ್ ಆಗಿದ್ದ ಮೇಜರ್ ಜನರಲ್ ರಾಜಿಂದರ್ ಸಿಂಗ್‌ಜಿಗೆ ರಿಪೋರ್ಟ್ ಮಾಡಿಕೊಳ್ಳಲು ದೆಹಲಿ - ಆಗ್ರಾ ಕೇಂದ್ರ ಕಛೇರಿಗೆ ತೆರಳಿದ್ದೆ ಆ ವೇಳೆಯಲ್ಲಿ ಪ್ರಧಾನಿ ನೆಹರೂರ ಹಂಗಾಮಿ ಕಾರ್ಯದರ್ಶಿಯಾಗಿದ್ದ ತಾರಾಲೋಕ ಸಿಂಗ್ (ಐ.ಸಿ.ಎಸ್)ರನ್ನು ನನ್ನ ಭಾವ ಭೇಟಿಯಾಗಿದ್ದರು. ಅವರ 'ಸಲಹೆ ಮೇರೆಗೆ' ನಾನು ದೆಹಲಿ ಕಂಟೋನ್ಮೆಂಟ್‌ನ ಏರಿಯಾ ಕಮಾಂಡರ್‌ಗೆ ರಿಪೋರ್ಟ್ ಮಾಡಿಕೊಳ್ಳಬೇಕಾಗಿತ್ತು.

ಶುದ್ಧ ಆಗಸ ದೆಹಲಿಯಲ್ಲಿ ಸೂರ್ಯ ತನ್ನ ಪ್ರಭಾವಳಿ ಬೀರಿದ್ದ. ಗಾಳಿ ಬೀಸುತ್ತಿತ್ತು. ಪಾರ್ಕ್‌ನಲ್ಲಿ ಮಕ್ಕಳ ಕಲರವವಿತ್ತು. ಯುವ ಜೋಡಿಗಳು ನಿರಾಶ್ರಿತರ ಹಿಂಡಿನ ನಡುವೆ ಹಾದು ಹೋಗುತ್ತಿದ್ದರು. ಆಗಿನ ಆಳ್ವಾರ್ ರಾಜ್ಯದ ನಿಯೋಗಗಳನ್ನು ಹೊಡೆದೋಡಿಸಲಾಗಿತ್ತು. ಅವರು ನಿರಾಶ್ರೀತರಾಗಿದ್ದರು.

ವ್ಯಕ್ತಿಯೊಬ್ಬನ ಮೇಲೆ ಮಾರಕ ಹಲ್ಲೆಮಾಡಿದವನನ್ನು ಗುಂಪೊಂದು ಅಟ್ಟಿಸಿಕೊಂಡು ಹೋಯಿತು. ಹಲ್ಲೆಗೊಳಗಾದವ ರಕ್ತದ ಮಡುವಿನಲ್ಲಿ ಬಿದ್ದು ನೋವಿನಿಂದ ಚೀರಾಡುತ್ತಿದ್ದ. ಅದನ್ನು ಕಂಡು ಬ್ರಿಟಿಷ್ ಸೈನಿಕರು ಗಹಗಹಿಸಿ ನಗುತ್ತಿದ್ದರು. " ಬ್ಲಾಸ್ಟರ್ಡ್‌ಗಳಿಗೆ ಹೀಗೇ ಆಗಬೇಕು" ಎನ್ನುತ್ತಿದ್ದರು.

ನಾನು ಹಠಾತ್ತನೆ ಮ್ಲಾನವದನನಾದೆ.

ಏರಿಯಾ ಕೇಂದ್ರ ಕಚೇರಿಯಲ್ಲಿ ಕೋಪಾವಿಷ್ಟ ಜನರಲ್ ಅನ್ನು ಎದುರಿಸಿದೆ.

"ಪ್ರಧಾನಿ ಕಚೇರಿಯಿಂದ ನನಗೆ ಫೋನ್ ಬಂದಿತ್ತು. ನೀನೊಬ್ಬ ಸೈನ್ಯ ತೊರೆದವನು" ಎಂದು ಜನರಲ್ ನನ್ನನ್ನು ತರಾಟೆಗೆ ತೆಗೆದುಕೊಂಡ. ಅವರು ನಾನು ನೋಡಿದ ಪ್ರಥಮ ಭಾರತೀಯ ಜನರಲ್. 'ಇದೇನೂ ಸಾಲದು, ಜನರಲ್' ಎಂದು ನನ್ನಷ್ಟಕ್ಕೆ ನಾನು ಹೇಳಿಕೊಂಡೆ.

ಅಲ್ಲೇ ಇದ್ದ ಏರಿಯಾ ಆಡಳಿತಾತ್ಮಕ ಕರ್ನಲ್ ಇಂಗ್ಲೀಷ್ ಕರ್ನಲ್ ಜನರಲ್‌ಗೆ ಈ ರೀತಿ ಹೇಳಿದ 'ಈತ ಒಬ್ಬ ಕಮ್ಯುನಿಸ್ಟರ್ ಸರ್, ನೋಡಿ ಈತ ಸಮವಸ್ತ್ರ ಕೂಡ ಹಾಕೊಂಡಿಲ್ಲ."

"ಬಾಯಿ ಮುಚ್ಚಿಕೋ. ನಾನೇನೂ ಇಲ್ಲಿ ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳಲು ಬಂದಿಲ್ಲ" ಎಂದು ನಾನು ಕರ್ನಲ್‌ಗೆ ಕೂಗಿ ಹೇಳಿದೆ.

"ಅಟೆನ್ಶನ್! ಆತನನ್ನು ಕರೆದುಕೊಂಡು ಹೋಗಿ. ಸೇನೆ ತೊರೆದ ಆರೋಪದ ಮೇಲೆ ಇವನನ್ನು ಬಂಧಿಸಲಾಗಿದೆ" ಎಂದು ಜನರಲ್ ಪಕ್ಕದಲ್ಲೇ ನಿಂತಿದ್ದ ಆಡಳಿತಾತ್ಮಕ ಮೇಜರ್‌ಗೆ ಆದೇಶಿಸಿದ.

ಸ್ಟಾಫ್ ಕಾರಿನಲ್ಲಿ ನನ್ನನ್ನು ರಜಪುತಾನ ರೈಫಲ್ಸ್‌ನ ಅಧಿಕಾರಿಗಳ ಕ್ವಾರ್ಟರ್ಸ್‌ಗೆ ಕರೆದೊಯ್ಯಲಾಯಿತು. ಕೆಲವು ದಿನಗಳ ನಂತರ ಒಬ್ಬ ಸಿಖ್ ಮೇಜರ್ ಅಂಗರಕ್ಷಕನಾಗಿ ನನ್ನನ್ನು ಕೋಲ್ಕೊತ್ತಾಕ್ಕೆ ಕರೆದೊಯ್ದ ಈತ ನನ್ನ ತಂದೆಯ ಹಳೆಯ ಬೆಟಾಲಿಯನ್‌ನಲ್ಲಿದ್ದದ್ದು ನನಗೆ ಆತನ ಪರಿಚಯವಿತ್ತು.

ಒಂದು ವರ್ಷದಷ್ಟು ದೀರ್ಘಕಾಲ ಫೋರ್ಟ್ ವಿಲಿಯಂನ ಅಪಾರ್ಟ್‌ಮೆಂಟ್‌ಗಳು ನನ್ನನ್ನು ವಿಚಾರಣೆಯಿಲ್ಲದೆ ಕ್ರೂರವಾಗಿ ನುಂಗಿ ಹಾಕಿದವು. ಒಂದು ವರ್ಷದ ಮೇಲೆ ನಾನು ಅದರ ಗೋಡೆ ಹಾರಿ ಸ್ವತಂತ್ರ ಹಕ್ಕಿಯಾದೆ. ಹತ್ತು ವರ್ಷ ಸುದೀರ್ಘ ಕಾಲ ಭೂಗತನಾಗಿ ಜೀವನ ಸವೆಸಿದೆ. (ಈ ಬಗ್ಗೆ ನಂತರ ವಿವರಿಸುವೆ)

(ಮುಂದುವರಿಯುವುದು)

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

15-07-2003
ಜನವಾದಿ ಮಹಿಳಾ ಸಂಘಟನೆ- ಮಳವಳ್ಳಿ ತಾಲ್ಲೂಕು ಮಟ್ಟದ ಅಧ್ಯಯನ ಶಿಬಿರ
ಬೆಳಿಗ್ಗೆ 10-30 ಕ್ಕೆ
ಸ್ಥಳ: ಪೌರಕಾರ್ಮಿಕರ ಸಮುದಾಯ ಭವನ ಮಳವಳ್ಳಿ - ಮಂಡ್ಯ ಜಿಲ್ಲೆ.

16-07-2003
ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಕರೆ
ತಮಿಳುನಾಡು ರಾಜ್ಯ ಸರ್ಕಾರ 2ಲಕ್ಷ ನೌಕರರನ್ನು ಕೆಲಸದಿಂದ ತೆಗೆದುಹಾಕಿದುದರ ವಿರುದ್ಧ ದೇಶದಾದ್ಯಂತ ಪ್ರತಿಭಟನೆ


ಆಗಸ್ಟ್ 2 ಮತ್ತು 3 , 2003 ಬೆಂಗಳೂರು
ಗ್ರಾಮ ಪಂಚಾಯತಿ ನೌಕರರ ಜಿಲ್ಲಾ ಮಟ್ಟದ ತರಬೇತಿ ಶಿಬಿರ - ಸ್ಕೌಟ್ ಕ್ಯಾಂಪ್
ದೊಡ್ಡಬಳ್ಳಾಪುರ

ಆಗಸ್ಟ್ 16 ರಿಂದ 31,2003
ಕೇಂದ್ರ ಸರಕಾರದ ಅಮೇರಿಕ ಪರ ವಿದೇಶಿ ನೀತಿ, ಜನವಿರೋಧಿ ಆರ್ಥಿಕ ನೀತಿ ಹಾಗೂ ಕೋಮುವಾದೀಕರಣದ ವಿರುದ್ಧ
ಪ್ರಚಾರಾಂದೋಲನ - ಸಿಪಿಐ(ಎಂ) ಕರೆ

ಸೆಪ್ಟೆಂಬರ್1, 2003
ಕರ್ನಾಟಕ ಪ್ರಾಂತ ರೈತ ಸಂಘದ
ರೈತರ ದಿನ- ವಿಶೇಷ ರಾಜ್ಯ ಸಮಾವೇಶ
ಗುಲ್ಬರ್ಗಾ

ಜೆಡಿ(ಎಸ್)-ಜೆಡಿ(ಯು) ವಿಲೀನದತ್ತ

ಕರ್ನಾಟಕದಲ್ಲಿ ಚುನಾವಣಾ ಪೂರ್ವ ಸಿದ್ಧತೆಗಳು ಭರದಿಂದ ಸಾಗಿರುವಾಗ ಕೆಲವು ಉತ್ತಮ ಪ್ರಕ್ರಿಯೆಗಳೂ ನಡೆದಿವೆ. ಮುಖ್ಯವಾಗಿ ಜನತಾದಳದ ಬಣಗಳಲ್ಲಿನ ಹೆಚ್ಚಿನ ಒಡಕು-ಅಂತರಗಳು ವಿಪರೀತವಾದರೆ ತಮ್ಮ ಭವಿಷ್ಯ ಭದ್ರ ಎಂಬ ಲೆಕ್ಕಾಚಾರದಲ್ಲಿ ಕಾಂಗ್ರೆಸ್-ಬಿಜೆಪಿಗಳು ಲೆಕ್ಕ ಹಾಕಿ ತಂತ್ರಗಾರಿಕೆ ನಡೆಸಿವೆ. ಒಂದೆಡೆ ಮಲ್ಕರವರ ಯಾತ್ರೆ, ಸಂಕೇಶ್ವರರವರು ಪಕ್ಷದ ನೆಲೆಗೆ ಓಡಾಟ, ಬಿಎಸ್‌ಪಿಯ ರ್‍ಯಾಲಿ ಎದ್ದು ಕಂಡ ಬೆಳವಣಿಗೆ. ಹಾಗೆಯೇ ಜನತಾದಳ(ಎಸ್) ಸಂಘಟನೆ ಚೇತರಿಕೆ ಕಾರ್ಯಕರ್ತರಿಗೆ ಚೈತನ್ಯ ತರುವ ದೇವೇಗೌಡ-ಸಿದ್ಧರಾಮಯ್ಯನವರ ಪ್ರವಾಸ ಸಮಾವೇಶಗಳಿಗೂ ಹೆಚ್ಚಿನ ಸ್ಪಂದನ ದೊರೆಯುತ್ತಿದೆ.


ವಿಲೀನದ ಸಮಾಲೋಚನೆಯಲ್ಲಿ ನಿರತ

ಈ ನಡುವೆ ಜನತಾಗಳ(ಎಸ್) ಮುಖಂಡರೊಡನೆ ಜನತಾದಳ(ಎಸ್) ನ ಪ್ರಮುಖ ನಾಯಕರು ಸಮಾಲೋಚನೆ ನಡೆಸಿರುವುದು ಸ್ವಾಗತಾರ್ಹ. ಈ ಮಾತುಕತೆಯಲ್ಲಿ ದೇವೇಗೌಡ, ಸಿದ್ಧರಾಮಯ್ಯರಂತಹ ಜೆಡಿ(ಎಸ್) ನಾಯಕರು ಮತ್ತು ಜೆಡಿ(ಯು)ವಿನ ಸಿಂಧ್ಯಾ, ತಿಪ್ಪಣ್ಣ ಮುಂತಾದವರು ಒಳಗೊಂಡಿದ್ದಾರೆ. ಈ ಚರ್ಚೆಯಿಂದ ಹೊರಬಂದ ಸಂದೇಶವೆಂದರೆ ಜೆಡಿ(ಎಸ್) ನೊಂದಿಗೆ ಜೆಡಿ(ಯು) ವಿಲೀನ ಆಗುವುದರ ಅಗತ್ಯ ಮನಗಂಡಿರುವುದು. ಈ ವಿಲೀನದ ಪ್ರಕ್ರಿಯೆಯನ್ನು ಇನ್ನು ಕೆಲವು ವಾರಗಳ ನಂತರ ವಿದ್ಯುಕ್ತವಾಗಿ ಪ್ರಕಟಿಸುವುದು.

ಕರ್ನಾಟಕದಲ್ಲಿ ಕಾಂಗ್ರೆಸ್-ಬಿಜೆಪಿಗಳಿಗೆ ಪರ್ಯಾಯವಾಗಿ ಸೆಕ್ಯುಲರ್ ಮೂರನೇ ಪರ್ಯಾಯ ಕಟ್ಟುವಲ್ಲಿ ದೇಶದ ಈ ಬಣಗಳ ವಿಲೀನ ಮಹತ್ವದ್ದು. ಈ ಪ್ರಕ್ರಿಯೆ ಯಶಸ್ವಿಯಾಗಬೇಕು. ಹಾಗೆಯೇ ಅಖಿಲ ಭಾರತ ಪ್ರಗತಿಪರ ಜನತಾದಳದ ನಾಯಕರೂ ಪರಿಸ್ಥಿತಿಯ ಗಂಭೀರತೆ ಮತ್ತು ಅಗತ್ಯತೆ ಮನಗಂಡು ವಿಲೀನದ ಪ್ರಕ್ರಿಯೆಯತ್ತ ಹೆಜ್ಜೆ ಇಡಬೇಕು. ಕೃಷ್ಣ, ಅನಂತಕುಮಾರ್, ಹೆಗಡೆಯವರ ರಾಜಕೀಯ ಆಟದ ದಾಳಗಳಾಗುವುದನ್ನು ಅರಿಯಲಾರದಷ್ಟು ನಾಯಕರು ಮುಗ್ಧರಲ್ಲ.

ಬಿಜೆಪಿ ವಿರುದ್ಧ ಶ್ರೀನಿವಾಸ ಪ್ರಸಾದ್ ಮಾತು

ಕೇಂದ್ರ ಸಚಿವ ಶ್ರೀನಿವಾಸ ಪ್ರಸಾದ್‌ರವರು ಮನಬಿಚ್ಚಿ ಮಾತನಾಡತೊಡಗಿದ್ದಾರೆ. ಸಂಘ ಪರಿವಾರದ ಹುನ್ನಾರಗಳನ್ನೂ, ಹಿಂದುತ್ವದ ದಮನಕೋರ ನೀತಿಗಳನ್ನು ಖಂಡಿಸುತ್ತಿದ್ದಾರೆ. ಇದು ಆಶ್ಚರ್ಯಕರ ಬೆಳವಣಿಗೆ.

ಹಿಂದುಗಳೆಲ್ಲಾ ಒಂದೇ ಎನ್ನುವವರು ದಲಿತರು ಮಾಡಿದ ಅಡುಗೆ ಊಟ ಮಾಡುವುದಿಲ್ಲ ಎಂದು ಮಕ್ಕಳನ್ನೇ ಶಾಲೆಯಿಂದ ವಿಶ್ವಹಿಂದೂ ಪರಿಷತ್ ಏಕೆ ಕರೆದೊಯ್ಯಿತು ಎಂದು ಕಿಡಿ ಕಾರಿದ್ದಾರೆ ಪ್ರಸಾದ್. ಬಿಜೆಪಿ ಭ್ರಷ್ಟತನ, ಸ್ವಜನ ಪಕ್ಷಪಾತದ ಬಗ್ಗೆ ಮಾತನಾಡಿ, 'ಬಿಜೆಪಿ ಕತೆ ಮುಗೀತು' ಎಂದಿದ್ದಾರೆ. ಇವೆಲ್ಲಕ್ಕೂ ಮೀರಿದಂತೆ ಜೆಡಿ ಎಸ್-ಯುನ ಬಣಗಳ ವಿಲೀನದ ಬಗ್ಗೆ ಆಸಕ್ತಿ ತಳೆದದ್ದಲ್ಲದೇ ಬಿಜೆಪಿಯಲ್ಲಿರುವ ರಾಜಶೇಖರಮೂರ್ತಿಯವರು ಜೆಡಿ(ಎಸ್) ನತ್ತ ಬರುವಂತೆ ಯತ್ನಿಸುತ್ತಿದ್ದಾರೆ. ಹೀಗೆ ಶ್ರೀನಿವಾಸ ಪ್ರಸಾದ್‌ರವರು ಮತ್ತೆ ಜೆಡಿ(ಎಸ್) ನತ್ತ ಬರುವ ಮಾತುಗಳಾಡಿದ್ದಾರೆ. ಹೀಗಾದಲ್ಲಿ ಇದೊಂದು ಮಹತ್ವದ ಬೆಳವಣಿಗೆ. ಇದಕ್ಕೆ ಪೂರಕವೆಂಬಂತೆ ಜೆಡಿ(ಎಸ್) ನ ನಾಯಕರು ತೆರೆದ ಮನಸ್ಸು ತೋರುತ್ತಿದ್ದಾರೆ. ಆ ಪಕ್ಷದ ಸಮಾವೇಶಗಳಿಗೆ ಜನಸ್ಪಂದನವೂ ಉತ್ತಮವಿದೆ. ಮುಂದಿನ ಕುತೂಹಲಕಾರಿ ಬೆಳವಣಿಗೆಗೆ ಕಾಯಬೇಕು.

ಈ ವಾರ ಕರ್ನಾಟಕ ಒಂದು ನೋಟ
ಎಸ್.ವೈ.ಗುರುಶಾಂತ್

ಬಿಎಸ್‌ಪಿ ರ್‍ಯಾಲಿ: ಮೂಲಸಮಸ್ಯೆ ಮರೆತವರು

ಮೀಸಲಾತಿಯ ಶತಮಾನೋತ್ಸವದ ಸಂದರ್ಭಕ್ಕೊಂದು ಬಹುಜನ ಸಮಾಜ ಪಕ್ಷವು ರಾಜ್ಯಮಟ್ಟದ ರ್‍ಯಾಲಿಯನ್ನು ಆಯೋಜಿಸಿತ್ತು. ದಲಿತ ಸಂಘಟನೆಗಳ ಸೈದ್ಧಾಂತಿಕ-ಸಂಘಟನಾತ್ಮಕ ರಾಜಕೀಯ ಗೊಂದಲಗಳ ನಡುವಿನ ಸ್ಥಿತಿಯನ್ನು ಕಾನ್ಶಿರಾಂ ರವರ ಬಿಎಸ್‌ಪಿ ಬಳಸಲು ಯೋಚಿಸಿತು. ಬಹಿರಂಗ ಸಭೆಯಲ್ಲಿ ದೆಹಲಿಯಲ್ಲಿ ಅಧಿಕಾರ ಹಿಡಿಯಲೊಂದೇ ಅಜೆಂಡಾದ ಬಗ್ಗೆ ಕಾನ್ಶಿರಾಂ ಮಾತನಾಡಿದರಲ್ಲದೇ, ದಲಿತರ, ಅಲ್ಪಸಂಖ್ಯಾತರ, ರಾಷ್ಟ್ರದ ಜನತೆ ಎದುರಿಸುತ್ತಿರುವ ಪ್ರಶ್ನೆಗಳತ್ತ ಮಾತನಾಡಿಲ್ಲ. ಬಿಜೆಪಿ ಸರ್ಕಾರದ ಅನಾಹುತ ಅನ್ಯಾಯಗಳನ್ನು ಎತ್ತಿ ತೋರಲಿಲ್ಲ. ಕರ್ನಾಟಕದಲ್ಲಿಯೂ ಎನ್‌ಡಿಎ ರಚಿಸುವ ಅನಂತಕುಮಾರರ ಮಾತುಗಳಿಗೆ ಈ ರ್‍ಯಾಲಿಯ ಹಿಂದಿನ ಸ್ಫೂರ್ತಿ ಇರಬಹುದೇ?

ಬಿಎಸ್‌ಪಿಗೆ ಕುರ್ಚಿಯೊಂದೇ ಗುರಿ!

ದೇಶದಲ್ಲಿರುವ ದಲಿತರು, ಅಲ್ಪಸಂಖ್ಯಾತರು ಹಾಗೂ ಹಿಂದುಳಿದವರ ಗುತ್ತಿಗೆ ಹಿಡಿದಿರುವ 'ಬಹುಜನ ಸಮಾಜಪಾರ್ಟಿ'(ಬಿಎಸ್‌ಪಿ)ಯ ಬಹಿರಂಗ ಸಭೆಯೊಂದು ಕಳೆದವಾರ ಬೆಂಗಳೂರಿನ ನ್ಯಾಷನಲ್ ಕಾಲೇಜ್ ಮೈದಾನದಲ್ಲಿ ನಡೆಯಿತು.

ಸಭೆಗೆ ಬಿ.ಎಸ್.ಪಿ, ರಾಷ್ಟ್ರೀಯ ಅಧ್ಯಕ್ಷ ದಾದಾಸಾಹೇಬ! ಕಾನ್ಸಿರಾಂ ಹಾಗೂ ಉತ್ತರ ಪ್ರದೇಶದ ಮುಖ್ಯಮಂತ್ರಿ ಕುಮಾರಿ ಮಾಯಾವತಿ, ಬರುತ್ತಿದ್ದಾರೆಂದು ಪ್ರಚಾರ ನಡೆಸಲಾಗಿತ್ತಾದರೂ ಬಂದಿದ್ದು ಕಾನ್ಸಿರಾಂ ಒಬ್ಬರೆ.

'ಮೀಸಲಾತಿ ಶತಮಾನೋತ್ಸವ ಆಚರಣೆ ಹಿನ್ನೆಲೆಯಲ್ಲಿ "ಮೀಸಲಾತಿ ನೀಡಿ ಇಲ್ಲವೇ ಕುರ್ಚಿ ಖಾಲಿ ಮಾಡಿ' ಎಂಬ ಘೋಷಣೆಯೊಂದಿಗೆ ನಡೆಸಲಾದ ಈ ಬಹಿರಂಗ ಸಭೆ ಸಂಖ್ಯೆಯ ದೃಷ್ಟಿಯಿಂದ ಗಮನಾರ್ಹ ಸಭೆ. ಸುಮಾರು 20 ಸಾವಿರದಷ್ಟು ಜನರನ್ನು ಕರೆತರಲಾಗಿತ್ತು. ಆದರೆ ವಿಪರ್ಯಾಸದ ಸಂಗತಿಯೆಂದರೆ, ಬಹುಶಃ ನೆರೆದಿದ್ದ ಜನರನ್ನು ನೋಡಿ, ಬಹುತೇಕ ಬಿ.ಎಸ್.ಪಿ ರಾಜ್ಯ ನಾಯಕರುಗಳು 'ಭೂಮಿಯ ಮೇಲೆ ಇರಲೇ ಇಲ್ಲ. ಸಭೆಯನ್ನುದ್ದೇಶಿಸಿ ಮಾತನಾಡಿದ ಒಬ್ಬರು ನಮಗೆ 'ಬಿಸಿಯೂಟ' ಬೇಕಾಗಿಲ್ಲ ವಿಧಾನಸೌಧದಲ್ಲಿರುವ ಮುಖ್ಯಮಂತ್ರಿ ಕುರ್ಚಿಯೇ ಬೇಕು ಎಂದು ಡಿಮಾಂಡ್ ಮಾಡಿದರೆ, ಮತ್ತೊಬ್ಬ ಮುಖಂಡರು ನಾವೀಗಾಗಲೇ 40 ಎಂ.ಎಲ್.ಎ. ಗಳನ್ನು ಪಡೆದಿದ್ದೇವೆ. 2004 ನೇ ಇಸ್ವಿಯಲ್ಲಿ ನಮ್ಮ ನೆರವಿಲ್ಲದೆ ಯಾರೊಬ್ಬರೂ ಕರ್ನಾಟಕದಲ್ಲಿ ಅಧಿಕಾರ ನಡೆಸಲು ಸಾಧ್ಯವೇ ಇಲ್ಲ ಎಂದು ಫರ್ಮಾನು ಹೊರಡಿಸಿ ಸುಮ್ಮನಾಗಲಿಲ್ಲ, ಮುಂದುವರೆದು ಹತ್ತಾರು ಲೋಕಸಭಾ ಸ್ಥಾನಗಳನ್ನು ಗೆದ್ದು ಕಾನ್ಸಿರಾಂರನ್ನು ಮುಂದಿನ ಪ್ರಧಾನಿಯನ್ನಾಗಿಸುತ್ತೇವೆ ಎಂದು ಘೋಷಿಸಿಯೇ ಬಿಟ್ಟರು.

'ಮೀಸಲಾತಿ ನೀಡಿ' ಘೋಷಣೆಯಡಿಯಲ್ಲಿ ನಡೆದ ಸಭೆಯು 'ಮೀಸಲಾತಿಯೇ' ನಾಶಗೊಳ್ಳುತ್ತಿರುವ ಬಗ್ಗೆ ಯಾವುದೇ ಚಕಾರವೆತ್ತಲಿಲ್ಲ. ಮೀಸಲಾತಿ ರಕ್ಷಣೆಗಾಗಿ ಯಾವುದೇ ಕಾರ್ಯಕರ್ತರು ಪ್ರಶ್ನಿಸಲಿಲ್ಲ. ಮಾತ್ರವಲ್ಲ, ಕರ್ನಾಟಕದಲ್ಲಿ ದಲಿತರು, ದಲಿತ ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳ ಬಗ್ಗೆಯಾಗಲಿ, ಕೂಲಿ, ಭೂಮಿ ಪ್ರಶ್ನೆ, ಖಾಸಗೀಕರಣದದಿಂದಾಗಿ ಬೀದಿಪಾಲಾಗುತ್ತಿರುವ ದಲಿತ ಕುಟುಂಬಗಳ ಬಗ್ಗೆಯಾಗಲಿ, ಇತ್ತೀಚಿಗೆ ಸರ್ಕಾರದ ಬಿಸಿಯೂಟದಲ್ಲಿ ದಲಿತರು, ದಲಿತ ಮಕ್ಕಳನ್ನು ಬಾಧಿಸುತ್ತಿರುವ 'ಅಸ್ಪೃಶ್ಯತೆ' ಬಗ್ಗೆ ಸಭೆ ಮೌನವಾಗಿತ್ತು. ದಲಿತರ ಬದುಕನ್ನು ಹಸನುಗೊಳಿಸುವ ಕನಸಿನೊಂದಿಗೆ ಮೂವತ್ತು ವರ್ಷಗಳ ಹಿಂದೆ ಪ್ರಾರಂಭಿಸಲಾದ 'ದಲಿತ ಸಂಘರ್ಷ ಸಮಿತಿ'ಯೊಂದಿಗೆ ಗುರ್ತಿಸಿಕೊಂಡಿದ್ದು ಮತ್ತು ಅದಕ್ಕಾಗಿ ದುಡಿದ ನಾಯಕರುಗಳು ವೇದಿಕೆಯಲ್ಲಿದ್ದರು. ಅವರ್‍ಯಾರಿಗೂ ಈ ಬಗ್ಗೆ ಮಾತನಾಡುವ ಮನಸ್ಸು ಇದ್ದಂತಿರಲಿಲ್ಲ. ಅವರ 'ಏಕೈಕ ಗುರಿ' ಅಧಿಕಾರ ಗಿಟ್ಟಿಸುವುದು ಮಾತ್ರವೇ ಆಗಿತ್ತು.

ಇನ್ನು ರಾಷ್ಟ್ರೀಯ ಅಧ್ಯಕ್ಷರಾದ ಕಾನ್ಶಿರಾಂ ಭಾಷಣದ ಬಗ್ಗೆ ಹೇಳಬೇಕೆಂದರೆ, ಅವರಿಗೆ ಮಾತನಾಡುವ ಉತ್ಸಾಹವೇ ಇದ್ದಂತಿರಲಿಲ್ಲ. ಮಾತನಾಡಿದ್ದು ಕೇವಲ 30 ರಿಂದ 35 ನಿಮಿಷ ಮಾತ್ರ. ಅದೂ ಭಾಷಾಂತರ ಸೇರಿ! ಸಾವಿರಾರು ಜನರು ನೆರೆದಿದ್ದ ಸಭೆ ನಡೆದಿದ್ದು ಕೇವಲ 50 ನಿಮಿಷ ಮಾತ್ರ. ಸಭೆಗಾಗಿ ನೂರಾರು ಮೈಲು ದೂರಗಳಿಂದ ಲಾರಿ-ಬಸ್ಸು, ರೈಲುಗಳಲ್ಲಿ ದಿನವಿಡೀ ಪ್ರಯಾಣ ಮಾಡಿ ಬಂದಿದ್ದ ಜನರಿಗಂತೂ ಈ ಸಭೆ ನಿರಾಶೆಗೊಳಿಸಿದ್ದು ನಿಜ. ಯಾಕೆಂದರೆ ದೇಶ ಗಂಭೀರ ಸವಾಲುಗಳನ್ನು ಎದುರಿಸುತ್ತಿರುವ ಸನ್ನಿವೇಶ. ವಿನಾಶಕಾರಿ ಆರ್ಥಿಕ ನೀತಿಗಳು ದಲಿತರ ಬದುಕಿನ ಮೇಲೆ, ಅವರ ಉದ್ಯೋಗ, ಕೂಲಿ ಭೂಮಿ, ಶಿಕ್ಷಣ ಮೀಸಲಾತಿಗಳ ವಿರುದ್ಧ ಆಕ್ರಮಣ ಮಾಡುತ್ತಿರುವ ಈ ಸಂದರ್ಭದಲ್ಲಿ ಇಡೀ ಜನಸಮುದಾಯ ಒಂದಾಗಿ ಹೋರಾಟ ನಡೆಸಬೇಕಾದ ಅನಿವಾರ್ಯತೆ ಇರುವ ಸಂದರ್ಭ ಹಾಗೂ ಕೋಮುವಾದ, ಅಸ್ಪೃಶ್ಯತೆಗಳು ದಲಿತರ ಬದುಕನ್ನು ಸರ್ವನಾಶ ಮಾಡುತ್ತಿರುವ ನೀತಿಗಳ ವಿರುದ್ಧ ದಲಿತರಲ್ಲಿ ತೀವ್ರತರವಾದ ಜಾಗೃತಿ ಮೂಡಿಸಿ ಹೋರಾಟಕ್ಕಿಳಿಸಬೇಕಾದ ಸನ್ನಿವೇಶದಲ್ಲಿ ಬಹುಶಃ ದಾದಾಸಾಹೇಬ ಎಂಬ ಬಿರುದಾಂಕಿತ, ಈಗ ಬಿಎಸ್‌ಪಿಯವರ ಆರಾಧ್ಯ ದೈವದಂತೆ ಚಿತ್ರಿಸುತ್ತಿರುವ ದಾದಾಸಾಹೇಬ ಕಾನ್ಸಿರಾಂರವರ ಅಜೆಂಡಾದಲ್ಲಿ ಈ ಬಗ್ಗೆ ಸ್ಥಾನಗಳಿದ್ದಂತಿಲ್ಲ.

ಬದಲಾಗಿ ಅವರ ಭಾಷಣದುದ್ದಕ್ಕೂ ಶೇ. 3 ರಷ್ಟು ಜನಸಂಖ್ಯೆ ಇರುವ ಬ್ರಾಹ್ಮಣರು ಪ್ರಧಾನಿಯಾಗಬಹುದಾದರೆ ಶೇ.85 ರಷ್ಟು ಜನರ ಪ್ರತಿನಿಧಿಯಾದ ಕಾನ್ಶಿರಾಂ ಯಾಕಾಗಬಾರದು? ಇಂತಹ ಏಕೈಕ ಪ್ರಶ್ನೆಯನ್ನೇ ಉಚ್ಚರಿಸಿದ್ದು ಬಿಟ್ಟರೆ ಮತ್ತಾವ ಗಮನಾರ್ಹ ಅಂಶಗಳು ಅವರ ಬಾಯಿಂದ ಹೊರಬರಲೇ ಇಲ್ಲ. ಹಾಗಾದರೆ 'ಬಹುಜನ ಸಮಾಜ ಪಾರ್ಟಿ'ಯ ಉದ್ದೇಶವಾದರೂ ಏನು? ಹೇಗಾದರೂ ಮಾಡಿ ಅಧಿಕಾರ ಗಿಟ್ಟಿಸುವುದೇ ಏಕೈಕ ಗುರಿ. ಅದೂ ಯಾವುದೇ ಮಾರ್ಗಗಳಾದರೂ ಸರಿ. ಬೇಕಾದರೆ ಅವರನ್ನು ಬೆಂಬಲಿಸುವ, ನಂಬಿರುವ, ಲಕ್ಷಾಂತರ ಜನರ ಹಿತಾಸಕ್ತಿಯನ್ನು ಬೇಕಾದರೂ ಅವರು ನಿರ್ಲಕ್ಷಿಸಲು ಹಿಂಜರಿಯುವವರಲ್ಲ ಎನ್ನುವುದು - ಉತ್ತರ ಪ್ರದೇಶದ ಮಾಯಾವತಿ ಆಡಳಿತದಿಂದ ಸಾಬೀತಾಗಿದೆ.

ಕಳೆದ ವಿಧಾನಸಭಾ ಚುನಾವಣೆಗಿಂತ ಮೊದಲು ಇದೇ ತೆರನಾದ ರ್‍ಯಾಲಿಗಳನ್ನು, ಪ್ರಚಾರಗಳನ್ನು, ವಿವಿಧ ಗಿಮಿಕ್ಕುಗಳನ್ನು ನಡೆಸಿದ್ದರು. ಈಗ ಪುನಃ ಮಾಯಾವತಿ, ಕಾನ್ಶಿರಾಂಗಳನ್ನು ತೋರಿಸುತ್ತಾ ಅಧಿಕಾರದ ಗದ್ದುಗೆ ಏರುವ ಹಗಲುಗನಸು ಕಾಣಹೊರಟಿರುವುದು ಹಾಸ್ಯಾಸ್ಪದ.

ದೇಶವನ್ನು, ರಾಜ್ಯವನ್ನು ದಿವಾಳಿಯತ್ತ ನೂಕುತ್ತಿರುವ ಕಾಂಗ್ರೆಸ್, ಬಿಜೆಪಿಗಳ ನೀತಿಗಳ ವಿರುದ್ಧ ಪರ್ಯಾಯ ಮಾರ್ಗಗಳನ್ನು ಮುಂದಿಟ್ಟುಕೊಂಡು, ತುಳಿತಕ್ಕೊಳಗಾದ ಕೋಟ್ಯಾಂತರ ಜನಸಮುದಾಯಗಳನ್ನು ಜಾಗೃತಿಗೊಳಿಸದೇ, ಅವರ ಬೆಂಬಲ ಗಳಿಸದೇ ಕೇವಲ ಅಧಿಕಾರದ ಏಕೈಕ ಗುರಿಯೊಂದಿಗೆ ದಲಿತರ ಉದ್ಧಾರ ಮಾಡುವ ಕನಸು ಕಾಣುತ್ತಿರುವುದು ಬಿಎಸ್‌ಪಿಯವರು ವಾಸ್ತವಿಕತೆಯಿಂದ ದೂರವಿದ್ದಾರೆ ಎಂಬುದನ್ನು ತೋರಿಸುತ್ತದೆ.

ಇಲ್ಲದಿದ್ದರೆ, ಈಗಂತೂ ಬಿಜೆಪಿ, ಕಾಂಗ್ರೆಸ್, ಬಿಎಸ್.ಪಿ.ಗೆ ಏನೇನೂ ವ್ಯತ್ಯಾಸವಿಲ್ಲ. ಬಿಎಸ್‌ಪಿ ತನ್ನ ಅವಕಾಶವಾದಿ ದಾರಿಯನ್ನು ಬದಲಿಸದಿದ್ದರೆ ಅದು "ಬಹುಜನರ ಹಿತಾಸಕ್ತಿ"ಯನ್ನು ನಾಶಗೊಳಿಸುವುದಂತೂ ಸತ್ಯ. ಇದನ್ನು ಕನಸು ಕಾಣುತ್ತಿರುವ ನಾಯಕರು ಅರಿತರೆ ಒಳ್ಳೆಯದು.

- ಕೆ.ಮಹಾಂತೇಶ್

ಪ್ರಧಾನಿ ಪಟ್ಟದತ್ತ ಕಾನ್ಶಿರಾಮರ ನೋಟ!


ಸಮುದ್ರ ಕೊರೆತ : ಆಚೆ - ಈಚೆ


ಮಳೆಗಾಲ ಬಂತೆಂದರೆ ಕರಾವಳಿ ತೀರದ ಜನರಿಗೆ ನಡುಕ. ಸಮುದ್ರದ ಅಲೆಗಳಿಗೆ ಬದುಕು ಬಲಿಯಾಗುವ ಆತಂಕ. ಕಡಲ ಕೊರೆತಕ್ಕೆ ಸಿಕ್ಕಿ ಜನ ಇಲ್ಲಿ ಸಂಕಟಪಡುತ್ತಿದ್ದರೆ. ಮಂತ್ರಿಗಳು, ಅಧಿಕಾರಿಗಳು, ಸಂಭ್ರಮಿಸುತ್ತಾರೆ. ಪರಿಹಾರದ ನಾಟಕವಾಡುತ್ತಾರೆ. ವಿದೇಶ ಅಧ್ಯಯನ ಪ್ರವಾಸ ಹೊರಡುತ್ತಾರೆ. ಕಡಲ ಕೊರೆತ ರಕ್ಷಿಸಲು ಮಾರ್ಗಗಳಿಲ್ಲವೇ? ಎಲ್ಲಿದೆ ಹುಳುಕು?

ಜೂನ್ ತಿಂಗಳ ಮೂರನೇ ವಾರ ಪೂರ್ತಿ ದಕ್ಷಿಣ ಕನ್ನಡ, ಉಡುಪಿ ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಅಭೂತಪೂರ್ವ ಮಳೆ ಸುರಿಯಿತು. ಶನಿವಾರ (ಜೂ.23) ವಂತೂ 24 ಗಂಟೆಗಳ ಅವಧಿಯಲ್ಲಿ ಸುರಿದ 330 ಮಿ.ಮೀ ಮಳೆ ಒಂದು ದಾಖಲೆಯೇ ಆಗಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಒಟ್ಟು 17 ಮಂದಿ ಮೃತಪಟ್ಟು ಹಲವಾರು ಕೋಟಿ ರೂಪಾಯಿಗಳ ಸ್ವತ್ತು ನಾಶವಾಗಿ ಮನೆ ಕುಸಿತ ಮೊದಲಾದವುಗಳು ನಡೆದಿವೆ. ಸಹಜವಾಗಿಯೆ ಸಮುದ್ರ ಕೊರೆತ ತೀವ್ರ ಸ್ವರೂಪ ಪಡೆಯಿತು.

'ಸಮುದ್ರ ಕೊರೆತ' ಎಂದ ಕೂಡಲೇ ಬಹಳಷ್ಟು ಜನರಿಗೆ ಬಹಳಷ್ಟು ವಿಧದಲ್ಲಿ 'ಉಢಾಫೆ' ಮನೋಭಾವ ಬೆಳೆದುಬಂದಿದೆ. ಆಳುವ ಸರಕಾರಗಳ ಪ್ರಾಮಾಣಿಕ ಕಾಳಜಿರಹಿತ ಕಾರ್ಯಕ್ರಮವೇ ಇದಕ್ಕೆ ಮುಖ್ಯ ಕಾರಣ. ಹೌದು ಮಳೆಗಾಲವೆಂದ ಕೂಡಲೇ ಸಮುದ್ರ ಕೊರೆತ ಪ್ರಾರಂಭವಾಗಿ ಮನೆ ಮಾರುಗಳನ್ನು ಸಮುದ್ರ ತನ್ನ ವಶಪಡಿಸಿಕೊಳ್ಳುತ್ತದೆ ಒಂದಲ್ಲ ಒಂದು ದಿನ ಸಮುದ್ರದೊಳಗೆ ಲೀನವಾಗುತ್ತದೆ ಎಂದು ಗೊತ್ತಿದ್ದರೂ ಸರಕಾರದ ಪರಿಹಾರವನ್ನು ಪಡೆಯುವುದಕ್ಕಾಗಿಯೇ ಸಮುದ್ರದ ಬಳಿ ಮನೆ ಮಾಡಿಕೊಂಡಿರುತ್ತಾರೆ ಎಂದೂ ಹೇಳುವವರಿದ್ದಾರೆ. ಇನ್ನೊಂದೆಡೆ "ಪರಿಹಾರ ಪಡೆದು ಮತ್ತೆ ಅದೇ ಮನೆಯಲ್ಲಿ ವಾಸಿಸುತ್ತಾರೆ. ಆದುದರಿಂದ ಸಮುದ್ರ ಕೊರೆತದ ಬಗ್ಗೆ ಮನಮಿಡಿಯುವುದರಲ್ಲಿ ಅರ್ಥವೇ ಇಲ್ಲ ಎಂದು ಅತೀ ಸುಲಭವಾಗಿ ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಾರೆ. ಇವೆರಡು ವಾದಗಳೂ ಅರ್ಧ ಸತ್ಯ.

ಜನರಪಾಲಿಗೆ ಶಾಪ
ಆಳುವವರಿಗೆ ವರದಾನ

ಸರಕಾರದ ಅಧಿಕಾರಿಗಳಿಗೆ, ಆಳುವ ಪಕ್ಷದ ರಾಜಕಾರಣಿಗಳಿಗೆ ಇದೊಂದು ವರದಾನವಾಗಿದೆ. ಸಾಕಷ್ಟು ಬಾಚಿಕೊಳ್ಳಲು ಅವಕಾಶ ಕೊಡುತ್ತದೆ. ಇದು ವ್ಯವಸ್ಥೆಯ ಲೋಪ. ಸಮಾಜಕ್ಕೆ ಅಂಟಿರುವ ಭ್ರಷ್ಟಾಚಾರದ ಮಹಾಕೂಪ. ಇದು ಎಲ್ಲವನ್ನೂ ಸಮುದ್ರದಂತೆ ಸ್ವಾಹ ಮಾಡುತ್ತದೆ. ಅಂದ ಮಾತ್ರಕ್ಕೆ ಸರಕಾರದ ಯೋಜನೆಗಳು ತಪ್ಪಾದುದಲ್ಲ. ಅದರ ನಿರ್ವಹಣೆಯಲ್ಲಿ ಮಧ್ಯ ಪ್ರವೇಶಿಸಿ ಪೈಸೆ ಪೈಸೆಯೂ ದುರುಪಯೋಗವಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಸರ್ಕಾರದ ಸಂಸ್ಥೆಗಳು, ಜನಪ್ರತಿನಿಧಿಗಳ ಮತ್ತು ನಮ್ಮದಾಗಿದೆ. ಇನ್ನೊಂದು ಅಂಶ ಮನೆ ಮತ್ತು ಭೂಮಿ ಕಳಕೊಂಡವರಿಗೆ ಸರಕಾರದಿಂದ ಪರಿಹಾರ ದೊರೆಯುತ್ತದೆ ಎಂದು ಮಾಧ್ಯಮಗಳಲ್ಲಿ ಪ್ರಕಟಗೊಂಡ ಕೂಡಲೇ ನಾವು ಹೌಹಾರಿ ನಿಲ್ಲಬೇಕಾದ ಅವಶ್ಯಕತೆ ಯಿಲ್ಲ. ದೊರೆಯಬೇಕಾದವರಿಗೆ ಪರಿಹಾರ ದೊರೆಯುವುದಿಲ್ಲ. ಪರಿಹಾರದ ಮೊತ್ತವಂತೂ ಒಂದು ಜುಜುಬಿ ಹಣವಾಗಿದೆ. ಭೀಮನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ. ಅದನ್ನು ಪಡೆಯಲು ಹರಸಾಹಸ ಮಾಡಬೇಕಾಗಿದೆ. ಇವೆಲ್ಲವೂ ಪ್ರಾಯೋಗಿಕವಾದ ಸಮಸ್ಯೆಗಳಾಗಿವೆ. ಹೆಚ್ಚು ಕಡಿಮೆ ಸರಕಾರದ ಎಲ್ಲಾ ರೀತಿಯ ಪರಿಹಾರಗಳ ಇತಿಹಾಸ ಇದೇ ರೀತಿ ಇರುತ್ತದೆ.



ಎರಡನೆಯದಾಗಿ ಇಂದು ಸಮುದ್ರ ಕೊರೆತಕ್ಕೆ ಒಳಗಾಗುವ ಮನೆಗಳು "ನಿನ್ನೆ ಬಂದು" ಕಟ್ಟಿಕೊಂಡವುಗಳಲ್ಲ. ಮೂವತ್ತು , ನಲವತ್ತು ವರ್ಷಗಳ ಹಿಂದೆ ಸಮುದ್ರದ ದಡಕ್ಕೂ ಈ ಮನೆಗಳಿಗೂ ಅರ್ಧ ಕಿ.ಮೀ ಗೂ ಹೆಚ್ಚು ಅಂತರವಿದ್ದೇ ಇರುತ್ತದೆ. ಸಮುದ್ರ ಮೇರೆ ಮೀರಿ ಹರಿಯುವ ಸಹಜ ಸ್ವಾಭಾವಿಕ ಪ್ರಕ್ರಿಯೆಯ ಫಲ. ಅಂದು ದೂರವಿದ್ದರೂ ಇಂದು ಹತ್ತಿರವಾಗಿ ನಾಶವಾಗುತ್ತಿದೆ ಎಂಬುದು ತಿಳಿದಿರಬೇಕು. ಸಮುದ್ರದ ಅಂಚಿನಲ್ಲಿ ಇರುವ ಯಾರೂ ಸುಖದ ಸುಪ್ಪತ್ತಿಗೆಯಲ್ಲಿ ಓಲಾಡುವ ಶ್ರೀಮಂತರುಗಳಲ್ಲ. ವರ್ಷ ಪೂರ್ತಿ ಜೀವದ ಹಂಗು ತೊರೆದು ಮೀನುಗಾರಿಕೆ ನಡೆಸಿ "ಜೀವನ ಸವೆಸುವ ಬಡಪಾಯಿ ಮಾದಪ್ಪರೇ ಆಗಿರುತ್ತಾರೆ ಎಂಬುದು ಗೊತ್ತಿರಬೇಕಾದ ಅಂಶ. ಕಳೆದ ಹಲವಾರು ವರ್ಷಗಳಿಂದ ಸಿ.ಆರ್.ಝಡ್ (CRZ) ಕಾನೂನು ಜ್ಯಾರಿಯಲ್ಲಿರುವ ಕಾರಣ ಹೊಸದಾಗಿ ಆಕ್ರಮಣ ಅಥವಾ ಸೇರ್ಪಡೆ ಸಾಧ್ಯವಿಲ್ಲದಾಗಿದೆ. ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗದ ಮೀನುಗಾರಿಕೆಯನ್ನೇ ಅವಲಂಬಿಸಿರುವ ಕುಟುಂಬಗಳೇ ಇಲ್ಲಿರುವವರಾಗಿದ್ದಾರೆ.

ಮಳೆಗಾಲದ ಸಮುದ್ರ ಕೊರೆತದ ಅಪಾಯದಿಂದ ಸದಾ ಉದ್ವಿಘ್ನತೆಯಿಂದ ಬದುಕು ಸಾಗಿಸುತ್ತಿರುವ ಈ ಕುಟುಂಬಗಳನ್ನು ಎತ್ತರದ ಅಪಾಯರಹಿತ ಪ್ರದೇಶಕ್ಕೆ ಸ್ಥಳಾಂತರಿಸಿದ ಕೂಡಲೇ ಅವರ ಎಲ್ಲಾ ಸಮಸ್ಯೆಗಳು ಪರಿಹಾರವಾಗುವುದಿಲ್ಲ. ಏಕೆಂದರೆ ಅವರ "ಜೀವನಾಧಾರ ಕಸುಬು" ಇಲ್ಲವಾದಾಗ ಅಥವಾ ತಡೆಯಾದಾಗ ಬದುಕು ಸಾಗಿಸಲು ಕಷ್ಟವಾಗುತ್ತದೆ. ಆಗ ಪರ್ಯಾಯ ಉದ್ಯೋಗವೂ ಅನಿವಾರ್ಯವಾಗುತ್ತದೆ. ಮೀನುಗಾರಿಕೆ ಎಂದರೆ ವಿಶಿಷ್ಟ ಉದ್ಯೋಗವಾಗಿದೆ. ಮಧ್ಯರಾತ್ರಿ ಎದ್ದು ಸಮುದ್ರಕ್ಕೆ ಇಳಿಯುವ ವೃತ್ತಿಯಾಗಿದೆ ಏಳು. ಎಂಟು ಕಿ.ಮೀ ಸಮುದ್ರಕ್ಕಿಂತ ದೂರದಲ್ಲಿ ಮನೆಯಿದ್ದರೆ ಮೀನುಗಾರಿಕೆ ಸುಲಭ ಸಾಧ್ಯವಲ್ಲ. ಪರ್ಯಾಯ ಪರಿಹಾರ ಕಾರ್ಯಕ್ರಮಗಳು ಈ ಅಂಶವನ್ನು ಪರಿಗಣಿಸುವುದೇ ಇಲ್ಲ. "ಕೆಲವು ಸಾವಿರ ರೂಪಾಯಿ ಪರಿಹಾರ" ದಿಂದ ಏನೂ ಸಾಧಿಸಲಾಗದು.

'ಉರುಳುಸೇವೆ' ಯ
ಮಂತ್ರಿಯ ಉದ್ಧಟತನ'

ಮಳೆಗಾಗಿ ಉರುಳುಸೇವೆ' ಮಾಡಿ ಪ್ರಚಾರ ಗಿಟ್ಟಿಸಿಕೊಂಡ ಮೀನುಗಾರಿಕಾ ಮಂತ್ರಿ ವಸಂತ ಸಾಲ್ಯಾನ್‌ರವರು ಜುಲೈ ತಿಂಗಳಿನಲ್ಲಿ "ಸಮುದ್ರ ಕೊರೆತ ಶಾಶ್ವತ ತಡೆ" ಯೋಜನೆಯ ಅಧ್ಯಯನಕ್ಕಾಗಿ ಫ್ರಾನ್ಸ್ ದೇಶಕ್ಕೆ ತೆರಳುವುದಾಗಿ ಘೋಷಿಸಿ ಕೊಂಡಿದ್ದಾರೆ. ಏತನ್ಮಧ್ಯೆ ಮಂಗಳೂರಿನ ಉಳ್ಳಾಲದಲ್ಲಿ ಸಮುದ್ರ ಕೊರೆತವನ್ನು ವೀಕ್ಷಿಸಿ ಪರಿಹಾರ ಅಪೇಕ್ಷಿಸಿ ಬಂದ ಜನರನ್ನು ಅತ್ಯಂತ ಕೆಟ್ಟ ಶಬ್ದಗಳಲ್ಲಿ ನಿಂದಿಸಿ ಸರ್ವಾಧಿಕಾರಿಯಂತೆ ವರ್ತಿಸಿದ್ದಾರೆ. "ಪರಿಹಾರ ಕೊಡಬೇಕಿದ್ದರೆ ನನ್ನ ಕಾಲು ಹಿಡಿಯಬೇಕು" ಎಂದು ಹೇಳಿರುವುದು ವರದಿಯಾಗಿದೆ.. ಎಂತಹದಪ[illegible]

ಎಸ್.ಎಂ.ಕೃಷ್ಣರವರ ಮಂತ್ರಿ ಮಂಡಲ[illegible] ಅರ್ಹತೆಯೇ ಇಷ್ಟ ಎಂದು ಹೇಳಬೇಕಾಗಿದೆ[illegible] ಟಿ.ಜಾನ್, ಡಿ.ಕೆ.ಶಿವಕುಮಾರ್ ಮತ್ತು ವಸಂತ ಸಾಲ್ಯಾನ್‌ರಂತವರುಗಳು ಬಡ ಜನರ ಕೊರಳ[illegible] "ಉರುಳಾಗಿ" ಕಾಡುತ್ತಾರೆ. ಇಂತಹ ವರ್ತನೆಗಳು ಪ್ರಜಾಪ್ರಭುತ್ವದ ಅಣಕವಲ್ಲದೆ ಮತ್ತೇನು?

ವರದಿ - **ಆಯುಷ್ಯಾಮ,** ಮಂಗಳೂ[illegible]

ಹಳದಿ ಕಾರ್ಡು, ಉತ್ತಮ ಪಡಿತರಕ್ಕಾಗಿ ಒತ್ತಾಯಿಸಿ ಧರಣಿ

ಕರ್ನಾಟಕ ಪ್ರಾಂತ ರೈತ ಸಂಘ, ಜನವಾದಿ ಮಹಿಳಾ ಸಂಘಟನೆ, ಡಿ.ವೈ.ಎಫ್.ಐ ಸಂಘಟನೆಗಳ ನೇತೃತ್ವದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕು ಕಛೇರಿ ಎದುರು ಹಳದಿ ಪಡಿತರ ಕಾರ್ಡು, ಗೋಶಾಲೆ, ರೈತರ ಸಾಲ ಮನ್ನಾ ಮುಂತಾದ ಬೇಡಿಕೆಗಳಿಗಾಗಿ ಮೂರು ದಿನಗಳ ಧರಣಿ ಕಾರ್ಯಕ್ರಮ ಹಮ್ಮಿಕ್ರೊಳ್ಳಲಾಗಿತ್ತು.

ಪ್ರಾರಂಭದ ದಿನದಂದು ನಗರದ ಪುರಭವನದಿಂದ ತಾಲ್ಲೂಕು ಕಛೇರಿ ಊರಿನ ಪ್ರಮುಖ ರಸ್ತೆಗಳ ಮೂಲಕ ಮೆರವಣಿಗೆಯನ್ನು ಸಂಘಟಿಸಲಾಗಿತ್ತು. ಗಣನೀಯ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದ ಮಹಿಳೆಯರು ಮೆರವಣಿಗೆಯ ಉದ್ದಕ್ಕೂ ನಯವಂಚಕ ಕೇಂದ್ರ, ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆ ಕೂಗುತ್ತಾ ಉತ್ತಮ ಪಡಿತರಕ್ಕಾಗಿ ಆಗ್ರಹಿಸುತ್ತಿದ್ದ ದೃಶ್ಯ ನಗರದ ನಾಗರಿಕರು ಬೆರಗಾಗಿ ನಿಂತು ನೋಡುವಂತೆ ಮಾಡಿತು.

ಮೆರವಣಿಗೆಯ ನಂತರ ಪ್ರಾರಂಭಗೊಂಡ ಮೂರು ದಿನಗಳ ಧರಣಿ ಕಾರ್ಯಕ್ರಮವನ್ನು ಉದ್ಘಾಟಿಸಿದವರು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ.

ಟಿವಿ, ರೇಡಿಯೋ, ಬೈಸಿಕಲ್ಲಿದ್ದವರನ್ನು ಶ್ರೀಮಂತರ ಪಟ್ಟಿಗೆ ಸೇರಿಸಿ ರೇಷನ್ ವ್ಯವಸ್ಥೆಯಿಂದ ಲಕ್ಷಾಂತರ ಕುಟುಂಬಗಳನ್ನು ವಂಚಿಸಲು ಹೊರಟಿರುವ ಕೇಂದ್ರ ರಾಜ್ಯ ಸರ್ಕಾರಗಳು 60 ಲಕ್ಷವಿದ್ದ ಹಸಿರು ಕಾರ್ಡುಗಳನ್ನು 35 ಲಕ್ಷಕ್ಕಿಳಿಸಲು ಹೊರಟಿವೆ. ಐಎಂಎಫ್, ವಿಶ್ವಬ್ಯಾಂಕ್ ಆದೇಶಗಳಿಗೆ ಮಣಿದಿರುವ ನೀಚ ಸರ್ಕಾರಗಳು ತೀವ್ರತರವಾದ ಬರ ಪರಿಸ್ಥಿತಿಯಲ್ಲೂ ಜನ-ಜಾನುವಾರುಗಳ ಕಷ್ಟ ಕೇಳದಾಗಿವೆ ಎಂದು ಜಿ.ಸಿ.ಬಯ್ಯಾರೆಡ್ಡಿ ಆರೋಪಿಸಿದರು.

250 ರಿಂದ 300 ಮಂದಿ ಪಾಲ್ಗೊಳ್ಳುತ್ತಿದ ಮೂರು ದಿನಗಳ ಧರಣಿ ಕಾರ್ಯಕ್ರಮದಲ್ಲಿ ಕೆಪಿಆರ್‌ಎಸ್‌ನ ಚಂದ್ರುತೇಜಸ್ವಿ, ರುದ್ರಾರಾಧ್ಯ, ರೇಣುಕಾರಾಧ್ಯ, ಸಿ.ನಾರಾಯಣಸ್ವಾಮಿ, ಸಿದ್ದೇಶ್, ಜೆಎಂಎಸ್‌ನ ಎನ್.ಪ್ರಭಾ, ಅಮರಾವತಿ, ಯಶೋಧಮ್ಮ ಶಾಂತಮ್ಮ ಡಿ.ವೈ.ಎಫ್.ಐ ನ ವೆಂಕಟೇಶ್, ಅಶ್ವಥ್, ರಮೇಶ್, ಪವರ್‌ಲೂಂ ಹೋರಾಟ ಸಮಿತಿಯ ಬಿ.ಜಿ.ಹೇಮಂತರಾಜು, ಕೆ.ಸಿ.ಗೋಪಾಲ್ ಮುಂತಾದವರು ಪಾಲ್ಗೊಂಡಿದ್ದರು. ಧರಣಿ ನಿರತರನ್ನು ಬೆಂಬಲಿಸಿ ಸಿಪಿಎಂ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕೆ. ಪ್ರಕಾಶ್ ಮಾತನಾಡಿದರು. ಗ್ರಾಮ ಪಂಚಾಯತ್ ನೌಕರರ ಸಂಘದ ಜಿಲ್ಲಾ ಕಾರ್ಯದರ್ಶಿ ಗೋಪಾಲಕೃಷ್ಣ ಅರಳಹಳ್ಳಿ ಸಹ ಬೆಂಬಲಿಸಿದರು. ಕರ್ನಾಟಕ ಕೊಳೆಗೇರಿ ನಿವಾಸಿಗಳ ಹಿತರಕ್ಷಣಾ ಹೋರಾಟ ಸಮಿತಿಯ ಮುಖಂಡರಾದ ಇಗ್ನೇಷಿಯಸ್ ನೇತೃತ್ವದಲ್ಲಿ ಕಾರ್ಯಕರ್ತರು ಧರಣಿ ಬೆಂಬಲಿಸಿ ಪಾಲ್ಗೊಂಡಿದ್ದರು.

ಧರಣಿ ನಿರತರನ್ನು ಲೆಕ್ಕಿಸದೆ, ಅಹವಾಲನ್ನು ಕೇಳದೆ ತಮ್ಮ ಪಾಡಿಗೆ ತಾವಿದ್ದ ಅಧಿಕಾರಿಗಳ ಗಮನ ಸೆಳೆಯಲು 3 ನೇ ದಿನದಂದು ಧರಣಿ ನಿರತರೆಲ್ಲರೂ ತಹಶೀಲ್ದಾರ್ ಕಛೇರಿಯೊಳಗೆ ನುಗ್ಗಲಾಗಿ ಮಧ್ಯ ಪ್ರವೇಶ ಮಾಡಿದ ಪೋಲೀಸರು ಏಸಿ ಯವರನ್ನು ಸ್ಥಳಕ್ಕೆ ಕರೆಸಿ ಮನವಿ ಪತ್ರ ಸಲ್ಲಿಸಲು ನೆರವಾದರು.

- ಬಿಪಿಎಲ್ ಕುಟುಂಬಗಳ ಆದಾಯಮಿತಿಯ[illegible] 25000 ರೂಪಾಯಿಗಳಿಗೆ ನಿಗದಿಗೊಳಿಸಬೇ[illegible]
- ಎಲ್ಲಾ ಬಿಪಿಎಲ್ ಕುಟುಂಬಗಳಿಗೆ ಹ[illegible] ಪಡಿತರ ಕಾರ್ಡುಗಳನ್ನು ವಿತರಿಸಬೇಕು.
- ಕೂಡಲೇ ಗೋಶಾಲೆಗಳನ್ನು ತೆರೆ[illegible] ಜಾನುವಾರುಗಳನ್ನು ರಕ್ಷಿಸಬೇಕು.
- ಕಾರ್ಡು ಪಡೆಯಲು, ಅರ್ಜಿ ಸಲ್ಲಿಸ[illegible] ಇರುವ ಕಾಲಾವಕಾಶವನ್ನು ಮುಂದೂಡಬೇ[illegible]
- ರೈತರ ಬಡ್ಡಿ ಮನ್ನಾ, ಬಡರೈತರ ಸಾಲ ಮ[illegible] ಮಾಡಬೇಕು.
- ಸ್ತ್ರೀಶಕ್ತಿ- ಸ್ವಸಹಾಯ ಗುಂಪುಗಳಿಗೆ ಸುತ್ತು[illegible] ಬ್ಯಾಂಕ್ ಸಾಲ ಬಿಡುಗಡೆ ಮಾಡಬೇಕು
- 17 ಗಂಟೆಗಳ ವಿದ್ಯುತ್ ಕಡಿತ ಕೈಬಿಡಬೇ[illegible]

ಮುಂತಾದ ಬೇಡಿಕೆಗಳಿದ್ದ ಮನವಿ ಪತ್ರ[illegible] ಸ್ವೀಕರಿಸಿದ ಎ.ಸಿ. ಯವರು ಗೋಶಾಲೆಗ[illegible] ತೆರೆಯಲು, ಸೂಕ್ತ ಬಡವರಿಗೆ ಹ[illegible] ಕಾರ್ಡುಗಳನ್ನು ವಿತರಿಸಲು ಸಮಯಾವಕಾ[illegible] ವಿಸ್ತರಣೆಯನ್ನು ಪರಿಗಣಿಸುವು[illegible] ಒಪ್ಪಿಕೊಂಡರು.

ಅಯೋಧ್ಯಾ 'ಮಾತುಕತೆ'ಗಳು

ಅಯೋಧ್ಯಾ ವಿವಾದಕ್ಕೆ ಮಾತುಕತೆಯ ಮೂಲಕ ಇತ್ಯರ್ಥದ ಹೆಸರಲ್ಲಿ ನಡೆಸಿದ ಆಟ ಕೊನೆಗೂ ಬಯಲಾಗಿದೆ. ಈ ನಾಟಕದ ಹಿಂದಿದ್ದ ಮುಖ್ಯ ಗುರಿಯೆಂದರೆ ಈ ವಿವಾದವನ್ನು ಮತ್ತೆ ರಂಗದ ಮೇಲೆ ತಂದು ಮುಂಬರುವ ಚುನಾವಣೆಗಳ ಮೊದಲು ಭಾವೋದ್ವೇಗವನ್ನು ಹರಡುವುದು. ಕಂಚಿ ಶಂಕರಾಚಾರ್ಯರಿಗೆ ಮಾತುಕತೆಗಳು ತನ್ನ ವಾರ್ಷಿಕ ಸೇವೆಯೆನ್ನಿಸಿಬಿಟ್ಟಂತಿದೆ. ಕಳೆದ ವರ್ಷದಂತೆ ಈ ವರ್ಷವೂ ಕೊನೆಗೆ ಅವರು ಆರ್‌ಎಸ್‌ಎಸ್/ ಬಿಜೆಪಿಯ ವಕ್ತಾರರೇ ಆಗಿಬಿಟ್ಟರು. ಈ ಬಾರಿಯಂತೂ ಅದು ಬಟ್ಟಬಯಲಾಗಿದೆ.

ಇದು ಆರ್‌ಎಸ್‌ಎಸ್/ವಿಹೆಚ್‌ಪಿ ಯ ನಿಲುವನ್ನು ಪ್ರತಿಪಾದಿಸಿದ ಪತ್ರವಲ್ಲದೆ ಬೇರೇನೂ ಅಲ್ಲ.

ಹಿಂದೆ ಮಾರ್ಚ್ 10, 2002 ರಂದು ಇದೇ ಶಂಕರಾಚಾರ್ಯರು ನ್ಯಾಯಾಲಯ ತೀರ್ಪಿಗೆ ಎರಡೂ ಕೋಮುಗಳು ಬದ್ಧವಾಗಿರುತ್ತವೆ ಎಂದಿದ್ದರು. ಆ ಘಟ್ಟದಲ್ಲಿ ವಿಹೆಚ್‌ಪಿ ಕೂಡಾ ಅದನ್ನು ಒಪ್ಪಿತ್ತು. ಆದರೆ ನಂತರ ಅದನ್ನು ತಿರಸ್ಕರಿಸಿತು. ರಾಮಜನ್ಮಭೂಮಿ ನಿರ್ಧಾರ ನ್ಯಾಯಾಲಯ ವ್ಯಾಪ್ತಿಗೆ ಮೀರಿದ್ದು ಎಂಬುದು ಆರ್‌ಎಸ್‌ಎಸ್/ ವಿಹೆಚ್‌ಪಿಯ ನಿಲುವು.

ಈ ನಿಲುವನ್ನೇ ಅನುಮೋದಿಸುತ್ತಾ ಶಂಕರಾಚಾರ್ಯರು ತಮ್ಮ ಜುಲೈ 1 ರ ಪತ್ರದಲ್ಲಿ 'ಅಯೋಧ್ಯೆಯ ವಿವಾದಿತ ಪ್ರದೇಶ ಹಿಂದೂಗಳಿಗೆ ಬಹಳ ಪವಿತ್ರವಾದ ಒಂದು ಸ್ಥಳ. ಆ ಸ್ಥಳದಲ್ಲಿ ಮಹಾನ್ ಬಾಬರ ತನ್ನ ಗೆಲುವಿನ ಸ್ಮಾರಕವಾಗಿ ಒಂದು ಕಟ್ಟಡ ರಚಿಸಿದ ಎಂಬುದು ಚಾರಿತ್ರಿಕ ವಾಸ್ತವ. ಸದ್ಯಕ್ಕೆ ಕೆಲವು ತಪ್ಪಿಸಲಾಗದ ಕಾರಣಗಳಿಂದ ಆ ಸ್ಥಳದಲ್ಲಿ ಯಾವುದೇ ಕಟ್ಟಡವಿಲ್ಲ. ಈಗಿರುವ ಸ್ಥಿತಿಯೆಂದರೆ ರಾಮ ಅಲ್ಲಿ ಕೂತಿದ್ದಾನೆ..." ಎಂದು ಹೇಳುತ್ತಾರೆ.

ಅಷ್ಟೇ ಅಲ್ಲ, ಈಗಿನ ಸನ್ನಿವೇಶದಲ್ಲಿ ತೀರ್ಪು ಯಾವುದೇ ಒಂದು ಕೋಮಿಗೆ ಅಥವಾ ಎರಡೂ ಕೋಮುಗಳಿಗೆ ಅನುಕೂಲಕರವಾಗಿ

ಸೇರಿದ್ದು, ದೇಶದ ಹಿತಾಸಕ್ತಿ ಮತ್ತು ಕೋಮುಸೌಹಾರ್ದವನ್ನು ಗಮನದಲ್ಲಿಟ್ಟು ಕೊಂಡು ಇಂದಲ್ಲದಿದ್ದರೂ ಮುಂದೊಂದು ದಿನವಾದರೂ ಈ ಸ್ಥಳಗಳನ್ನು ಹಿಂದೂಗಳಿಗೆ ಕೊಡಬೇಕಾಗುತ್ತದೆ. ಮುಸ್ಲಿಮರು ಇದಕ್ಕೆ ತಮ್ಮನ್ನು ಮಾನಸಿಕವಾಗಿ ಸಿದ್ಧಗೊಳಿಸಬೇಕಾಗುತ್ತದೆ".

ಜೂನ್ 16 ರ ಶಂಕರಾಚಾರ್ಯರ ಪತ್ರದ ನಂತರ ಜೂನ್ 30 ರಂದು ಆರ್‌ಎಸ್‌ಎಸ್ ಮುಖ್ಯಸ್ಥರು ಅವರನ್ನು ಭೇಟಿ ಮಾಡಿ ತಮ್ಮ ನಿಲುವನ್ನು ಪುನರುಚ್ಚರಿಸುತ್ತಾರೆ - ಏನೆಂದರೆ, ನ್ಯಾಯಾಲಯದ ತೀರ್ಪಿಗೆ ತಾವು ಬದ್ಧರಲ್ಲ, ಕಾಶಿ, ಮಥುರಾವನ್ನು ಒತ್ತಾಯಿಸಿ ಚಳುವಳಿಯನ್ನು ತೀವ್ರಗೊಳಿಸಲಾಗುವುದು. ಅಯೋಧ್ಯೆಯೊಂದನ್ನು ಬಿಟ್ಟು ಬೇರೆಲ್ಲಾ ಧಾರ್ಮಿಕ ಸ್ಥಳಗಳಲ್ಲಿ ಆಗಸ್ಟ್ 15, 1947 ರಂದು ಏನು ಸನ್ನಿವೇಶ ಇತ್ತೋ ಆ ಯಥಾಸ್ಥಿತಿಯನ್ನು ಕಾಪಾಡಬೇಕು ಎನ್ನುವ ಸಂಸತ್ತಿನ ಶಾಸನವನ್ನು ಆರ್‌ಎಸ್‌ಎಸ್ ತಿರಸ್ಕರಿಸುತ್ತದೆ ಎಂಬುದು ಇಲ್ಲಿ ಸ್ಪಷ್ಟ.

ವಿವಾದಿತ ಸ್ಥಳದ ಬಗ್ಗೆ ಎಲ್ಲಾ ಚಾರಿತ್ರಿಕ

ಇಂತಹ ಸನ್ನಿವೇಶದಲ್ಲಿ ದೇವಸ್ಥಾನ ಕಟ್ಟಲು ಅನುಮತಿ ನೀಡುವ ಶಾಸನ ತರಬೇಕೆಂದು ಆರ್‌ಎಸ್‌ಎಸ್ ಪ್ರಚಾರ ನಡೆಸುತ್ತಿರುವುದು ಸಹಜವೇ ಆಗಿದೆ. ಚುನಾವಣೆ ಸಮೀಪಿಸುತ್ತಿದ್ದಂತೆ ಬಿಜೆಪಿ ಕೂಡಾ ಇಂತಹ ಶಾಸನಕ್ಕೆ ತನ್ನ ವಿರೋಧವೇನೂ ಇಲ್ಲ, ಆದರೆ ಸದ್ಯದ ಎನ್‌ಡಿಎ ಸರ್ಕಾರದಿಂದ ಅದಕ್ಕೆ ಅಡ್ಡಿಯಿದೆ ಎಂದು ಹೇಳಿದೆ. ಬೇರೆ



ಇತ್ಯರ್ಥವಾಗದ ಸಂಧಾನಗಳು

ಮಾತುಗಳಲ್ಲಿ ಹೇಳುವುದಾದರೆ ಶಾಸನ ತರುವುದೇ ಏಕಮಾತ್ರ ದಾರಿಯೆಂದರೆ ಬಿಜೆಪಿ ಏಕಾಂಗಿಯಾಗಿ ಅಧಿಕಾರಕ್ಕೆ ಬರಬೇಕು, ಅದಕ್ಕಾಗಿ ಮತ್ತೊಮ್ಮೆ ಆರ್‌ಎಸ್‌ಎಸ್‌ನ ಕಬಂಧ ಬಾಹುಗಳೆಲ್ಲಾ ಮತ್ತೊಮ್ಮೆ ಭಾವೋದ್ವೇಗವನ್ನು ಬಡಿದೆಬ್ಬಿಸಬೇಕು. ಹೀಗೆ ಚುನಾವಣಾ ಫಲ ಪಡೆಯಲು ಸಾಧ್ಯ

ಬಟ್ಟಬಯಲಾದ ದುಷ್ಟ ನಾಟಕ

ಮಾರ್ಚ್ 2002 ರಲ್ಲಿ ಮಾಡಿರುವಂತೆ ಈ ಪ್ರಯತ್ನಗಳ ಗುರಿ 'ಹಿಂದೂ''ಗಳು ವಿವೇಕಯುತ ನಿಲುವು ತಳೆದು ಒಂದು ಪರಿಹಾರಕ್ಕೆ ಪ್ರಯತ್ನಿಸುತ್ತಿದ್ದಾರೆ. 'ಮುಸ್ಲಿಮರು' ಹಠಮಾರಿ ನಿಲುವು ತಳೆಯುತ್ತಿದ್ದಾರೆ ಎಂದು ಬಿಂಬಿಸುವುದು. ಇದನ್ನು ಬಳಸಿ ಆರ್‌ಎಸ್‌ಎಸ್ ಆಕ್ಟೋಪಸ್ ಅಲ್ಪಸಂಖ್ಯಾತರ ವಿರುದ್ಧ ದ್ವೇಷ ಹರಡಿದರೆ ಅದರಿಂದ ಬಿಜೆಪಿಗೆ ಉತ್ತಮ ಚುನಾವಣಾ ಫಲ ಸಿಗುತ್ತದೆ ಎಂಬುದು ಅದರ ನಿರೀಕ್ಷೆ.

ಕಪಟ ಬಯಲು

ಕಂಚಿ ಶಂಕರಾಚಾರ್ಯರ ಎರಡು ಪತ್ರಗಳು ಈ ಬಾರಿ ಈ ಕಪಟವನ್ನು ಸ್ಪಷ್ಟವಾಗಿ ಬಯಲಿಗೆಳೆದಿವೆ. ಜೂನ್ 16 ರಂದು ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯ ಅಧ್ಯಕ್ಷರಿಗೆ ಬರೆದ ಪತ್ರದಲ್ಲಿ ಅವರು 'ರಾಜಸೂತ್ರ' ವನ್ನು ಕೊಡುತ್ತಾರೆ - ಅವಿವಾದಿತ/ ಸರಕಾರ ವಹಿಸಿಕೊಂಡ ಜಮೀನಿನಲ್ಲಿ ದೇವಸ್ಥಾನ ಕಟ್ಟಲು ಮಂಡಳಿ 'ಆಕ್ಷೇಪವಿಲ್ಲ' ಎಂದು ಹೇಳಿಕೆ ನೀಡಬೇಕು, ಸ್ವಲ್ಪ ಸಮಯದ ನಂತರ ವಿವಾದಿತ ಸ್ಥಳದ ಬಗ್ಗೆಯೂ ಪರಸ್ಪರ ಒಪ್ಪಿಗೆಯ ಇತ್ಯರ್ಥವನ್ನು ನ್ಯಾಯಾಲಯ ತೀರ್ಪಿಗೆ ಒಪ್ಪುವುದು ಹಾಗೂ ಈ ನಡುವೆ ವಿವಾದಿತ ಸ್ಥಳವನ್ನು ಒಂದು ಗೋಡೆ ಕಟ್ಟಿ ರಕ್ಷಿಸುವುದು.

AIMPLB ನ್ಯಾಯಾಲಯದ ತೀರ್ಪಿಗೆ ಎರಡೂ ಕೋಮುಗಳು ಬದ್ಧವಾಗಿರುತ್ತವೆಯೋ ಎಂಬ ಬಗ್ಗೆ ಸ್ಪಷ್ಟೀಕರಣ ಕೇಳಿದಾಗ ಶಂಕರಾಚಾರ್ಯರು ಜುಲೈ 1 ರಂದು ಇನ್ನೊಂದು ಪತ್ರ ಕಳಿಸಿದರು.

ಬಂದರೂ 'ಕೋಮುಸೌಹಾರ್ದವನ್ನು ನಾವು ನಿರೀಕ್ಷಿಸುವಂತಿಲ್ಲ' ಎನ್ನುತ್ತಾರೆ. ಈ ಆಧಾರದಲ್ಲಿ ಶಂಕರಾಚಾರ್ಯರು ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ಹಿಂದೂಗಳಿಗೆ ಆ ಸ್ಥಳವನ್ನು 'ದಾನವಾಗಿ ನೀಡುವುದೆ' 'ಶಾಶ್ವತ ಇತ್ಯರ್ಥಕ್ಕೆ' ಏಕೈಕ ದಾರಿ ಎನ್ನುತ್ತಾರೆ.

ಅಂದರೆ "ಮಾತುಕತೆಯ ಮೂಲಕ ಇತ್ಯರ್ಥ"ದ ಹೆಸರಲ್ಲಿ ಬೇಷರತ್ತಾಗಿ ಸಂಪೂರ್ಣವಾಗಿ ಶರಣಾಗಿ ಎಂಬ 'ಪರಿಹಾರ' ಹೇರುವ ಪ್ರಯತ್ನವಲ್ಲದೆ ಬೇರೇನೂ ಅಲ್ಲ.

ಉತ್ಖನನದಿಂದ ಅಲ್ಲಿ ಯಾವುದೇ ದೇವಸ್ಥಾನವನ್ನು ಕೆಡವಿದ ಕುರುಹು ಇತ್ತೀಚಿನವರೆಗೆ ಸಿಗದಿರುವಾಗ, ಬದಲಾಗಿ ಮುಸ್ಲಿಂ ವಸತಿಯ ಕುರುಹುಗಳು ಸಿಕ್ಕಿರುವಾಗ ಇಂತಹ ಪ್ರಯತ್ನಗಳು ನಿಜಕ್ಕೂ ಆಘಾತಕಾರಿ.



ಕಾವಿ ಪಡೆಗಳ ಅಜೆಂಡಾವಿದು

ಇನ್ನೂ ಕಾಶಿ, ಮಥುರಾ, ಅಯೋಧ್ಯೆಯ ಬಗ್ಗೆ ಶಂಕರಾಚಾರ್ಯರ ಜುಲೈ 1 ರ ಪತ್ರ ಹೀಗೆನ್ನುತ್ತದೆ "ಈ ಮೂರು ಹಿಂದೂಗಳಿಗೆ

ತನಿಖೆಗಳು, ಈಗ ನಡೆಯುತ್ತಿರುವ ಉತ್ಖನನ ಕೂಡಾ ಆರ್‌ಎಸ್‌ಎಸ್/ ವಿಹೆಚ್‌ಪಿಯ ದಾವೆಗಳೆಲ್ಲಾ ಸುಳ್ಳು ಎಂದು ತೋರಿಸುತ್ತಿರುವಾಗ ಅದರ ಅಜೆಂಡಾವನ್ನು ಮತ್ತೆ ಪ್ರತಿಪಾದಿಸಲು ಈ ಇಡೀ ನಾಟಕ ಎಂಬುದು ಸ್ಪಷ್ಟ.

ಇಂತಹ ನಾಟಕಗಳು ಆಗಾಗ ನಡೆಯುತ್ತಲೇ ಬಂದಿವೆ. ಕಂಚಿ ಶಂಕರಾಚಾರ್ಯರೇ ಸಂದರ್ಶನವೊಂದರಲ್ಲಿ ತಾನು ಹೊಸದೇನೂ ಪ್ರಸ್ತಾಪ ಮುಂದಿಟ್ಟಿಲ್ಲ ಎಂದಿದ್ದಾರೆ. 1994 ರಷ್ಟು ಹಿಂದೆಯೇ ನರಸಿಂಹರಾವ್ ಸರ್ಕಾರದ

ಸೀತಾರಾಮ ಯೆಚೂರಿ

ಆಶ್ರಯದಲ್ಲಿ ನಾಲ್ಕು ಶಂಕರಾಚಾರ್ಯರುಗಳು ಸೇರಿ ರಾಮಾಲಯ ಟ್ರಸ್ಟ್ ಆರಂಭಿಸಿದ್ದರು.

ಕುತೂಹಲದ ಸಂಗತಿಯೆಂದರೆ ಈ ಸಂಸ್ಥೆಗೆ ಮಾತ್ರವೇ ಬಹುಶಃ ಸರಕಾರ ವಹಿಸಿಕೊಂಡ ಸ್ಥಳವನ್ನು ತನಗೆ ಕೊಡಿ ಎಂದು ಕೇಳಲು ಕಾನೂನು ಪ್ರಕಾರ ಸಾಧ್ಯವಿರುವುದು. ವಿಹೆಚ್‌ಪಿಗಾಗಲೀ, ವಿಹೆಚ್‌ಪಿ ನಿಯಂತ್ರಣದ ಟ್ರಸ್ಟಿಗಾಗಲೀ ಈ ಸ್ಥಳವನ್ನು ಹಸ್ತಾಂತರಿಸಲು ಸಾಧ್ಯವಿಲ್ಲ. ಹೊಸ ಟ್ರಸ್ಟ್ ಕೂಡಾ ವಿವಾದದ ತೀರ್ಪು ಬರುವವರೆಗೆ ಏನೂ ಮಾಡುವಂತಿಲ್ಲ.

ಹೀಗಿರುವಾಗ ಅಯೋಧ್ಯಾ ವಿವಾದಕ್ಕಿರುವ ಏಕೈಕ ಸಾಂವಿಧಾನಿಕ ಪರಿಹಾರವೆಂದರೆ ನ್ಯಾಯಾಲಯದ ತೀರ್ಪನ್ನು ಸ್ವೀಕರಿಸುವುದು ಮತ್ತು ಅದುವರೆಗೆ ಯಾವುದೇ ಭಾವೋದ್ವೇಗವನ್ನು ಬಡಿದೆಬ್ಬಿಸದಿರುವುದು.

ದುಷ್ಟ ಹಂಚಿಕೆಗಳಿಗೊಂದು ಮುಸುಕು

ಎಂಬುದು ಅವರ ನಿರೀಕ್ಷೆ.

ಇನ್ನೊಂದು ವಿಷಯ ನೆನಪಿಸಿಕೊಳ್ಳಬೇಕು. ಈ ಹಿಂದೆ 1989 ರಲ್ಲಿ ಮತ್ತು 1992 ರಲ್ಲಿ 'ಮಾತುಕತೆಯ ಮೂಲಕ ಇತ್ಯರ್ಥ' ದ ಪ್ರಯತ್ನಗಳನ್ನು ಆಗಿನ ಪ್ರಧಾನಿಗಳಾದ ವಿ.ಪಿ.ಸಿಂಗ್, ಚಂದ್ರಶೇಖರ್ ಸರ್ಕಾರಗಳು ನಡೆಸಿದಾಗ ಆ ಇಡೀ ಕಸರತ್ತು ಬಾಬ್ರಿ ಮಸೀದಿಯ ಧ್ವಂಸದತ್ತ ಒಯ್ಯಿತು. 'ಮಾತುಕತೆಯ ಮೂಲಕ ಇತ್ಯರ್ಥ' ದ ಪ್ರಯತ್ನಗಳು ಆರ್‌ಎಸ್‌ಎಸ್ ನೇತೃತ್ವದ ಕಾವಿ ಪಡೆಗಳ ದುಷ್ಟ ಹಂಚಿಕೆಗಳಿಗೆ ಒಂದು ಮುಸುಕಾಗಿ ಕೆಲಸ ಮಾಡುತ್ತಿರುವುದು ಸ್ಪಷ್ಟ.

ಭಾರತೀಯ ಜನತೆ ಹಲವು ಬಾರಿ ಈ ಕಪಟ, ವಂಚನೆಗಳನ್ನು ಕಂಡಿದ್ದಾರೆ. ಚುನಾವಣೆಗಳು ಸಮೀಪಿಸುತ್ತಿರುವಂತೆ ಆರ್‌ಎಸ್‌ಎಸ್ ನ ಕಬಂಧ ಬಾಹುಗಳು ಚುನಾವಣಾ ಲಾಭಕ್ಕಾಗಿ ಕೋಮು ಭಾವನೆಗಳನ್ನು ಬಡಿದೆಬ್ಬಿಸುವ ಪ್ರಯತ್ನಗಳನ್ನು ತೀವ್ರಗೊಳಿಸುತ್ತವೆ. ಇದು ದೇಶಕ್ಕೆ, ಜನತೆಗೆ ವಿನಾಶಕಾರಿ. ಅವರು ಭಾರತೀಯ ರಾಷ್ಟ್ರೀಯತೆಯನ್ನು ಹೇಗೆ ಪ್ರತಿಪಾದಿಸುತ್ತಾರೆಂದರೆ ಭಾರತದ ಐಕ್ಯತೆ ಮತ್ತು ಸಮಗ್ರತೆಯನ್ನೇ ಧ್ವಂಸ ಮಾಡಲು, ಭಾರತೀಯ ಗಣರಾಜ್ಯದ ಆಧಾರಭೂತ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಸ್ವರೂಪವನ್ನೇ ಕೈಬಿಡಲು ಹಾಗೂ ಚುನಾವಣಾ ಪ್ರಯೋಜನಗಳಿಗಾಗಿ ಕೋಮು ಸಂಘರ್ಷಗಳನ್ನು ಹುಟ್ಟಿಸಿ ಮುಗ್ಧ ಜೀವಗಳಿಗೆ ತುಂಬಲಾರದ ನಷ್ಟವುಂಟುಮಾಡಲೂ ಅವರು ಸಿದ್ಧರಿದ್ದಾರೆ. ನಮ್ಮ ಈ ಭಾರತವನ್ನು ಕಾಪಾಡಿಕೊಳ್ಳಬೇಕಾದರೆ ಈ ದುಷ್ಟ ಹಂಚಿಕೆಗಳನ್ನು ಸೋಲಿಸಬೇಕು.

ದುಬಾರಿ ವಂತಿಗೆ-ಶುಲ್ಕ ಹೆಚ್ಚಳ-ಪ್ರವೇಶ ನಿರಾಕರಣೆ-ಪಠ್ಯ ಪುಸ್ತಕಗಳ ಅಭಾವ-ಸೀಟ ಪ್ರವೇಶ ಗೊಂದಲ..... ಹೀಗೆ ಶಿಕ್ಷಣದ ವ್ಯಾಪಾರೀಕರಣ-ಖಾಸಗೀಕರಣ-ಶಿಕ್ಷಣ ನೀಡುವ ಜವಾಬ್ದಾರಿಯಿಂದ ಜಾರಿಕೊಳ್ಳುವ ರಾಜ್ಯ-ಕೇಂದ್ರ ಸರ್ಕಾರಗಳ ಜಾಗತೀಕರಣ ಪ್ರೇರಿತ ನೀತಿಗಳು ಶಿಕ್ಷಣ ರಂಗದಲ್ಲಿ ಗಂಭೀರ ಸಮಸ್ಯೆಗಳನ್ನು ಸೃಷ್ಟಿಸುತ್ತಿದೆ. ಶೈಕ್ಷಣಿಕ ವರ್ಷದ ಆರಂಭದಲ್ಲಿ ವಿದ್ಯಾರ್ಥಿಗಳು, ಪೋಷಕರು ಅನುಭವಿಸುತ್ತಿರುವ ಸಂಕಟಗಳ ಬಗೆಗೆ, ಈ ಸಮಸ್ಯೆಗಳ ವಿರುದ್ಧ ಬೆಳೆಯುತ್ತಿರುವ ವಿದ್ಯಾರ್ಥಿ-ಪೋಷಕರ ಅತೃಪ್ತಿ-ಪ್ರತಿರೋಧದ ಬಗೆಗೆ ಎಸ್ಸೆಫೈನ ರಾಜ್ಯ ಕಾರ್ಯದರ್ಶಿ ಆರ್.ರಾಮಕೃಷ್ಣ ಈ ಲೇಖನದಲ್ಲಿ ವಿವರಿಸಿದ್ದಾರೆ. ಆಳುವ ಸರ್ಕಾರಗಳ ಎಚ್ಚರಗೇಡಿತನ, ಶಿಕ್ಷಣ ಕೋಮುವಾದೀಕರಣ-ಶೈಕ್ಷಣಿಕ ಗೊಂದಲಗಳು, ನ್ಯಾಯಾಲಯುಗಳು ವಹಿಸುತ್ತಿರುವ ಪ್ರತಿಗಾಮಿ ಪಾತ್ರದ ಬಗೆಗೆ ಈ ಲೇಖನದಲ್ಲಿ ವಿವರಿಸಲಾಗಿದೆ.

ಆರ್. ರಾಮಕೃಷ್ಣ

ಶಿಕ್ಷಣದ ವ್ಯಾಪಾರೀಕರಣ-ಪಿ

ಶಾಲಾ - ಕಾಲೇಜುಗಳು ಆರಂಭವಾಗಿವೆ. ಶಿಕ್ಷಣರಂಗ ಸಮಸ್ಯೆ ಗೊಂದಲಗಳ ಆಗರವಾಗಿದೆ. ವಿದ್ಯಾರ್ಥಿ ಪೋಷಕರ ಆತಂಕ ಪರದಾಟ ಬವಣೆಗಳು ಮುಗಿಲು ಮುಟ್ಟಿವೆ.

ಡೊನೇಷನ್ ತುಂಬಲಾರದ ಮುಗ್ದ ವಿದ್ಯಾರ್ಥಿ ಬಲಿ, ಅವ್ಯಾಹತವಾದ ಡೊನೇಷನ್ ಸುಲಿಗೆ ವಿದ್ಯಾರ್ಥಿ ಪೋಷಕರ ಆಕ್ರೋಶ ಪ್ರತಿಭಟನೆ

ಉತ್ತರ ಕನ್ನಡ ಜಿಲ್ಲೆಯ ಶಿರಸಿ ಒಂದು ಶೈಕ್ಷಣಿಕ ಕೇಂದ್ರ. ಶಿಕ್ಷಣ ವ್ಯಾಪಾರೀಕರಣದ ಛಾಯೆ ನಗರ ಪ್ರದೇಶಗಳಿಂದ ಆರಂಭವಾಗಿ ಗ್ರಾಮಾಂತರ ಪ್ರದೇಶಗಳಿಗೂ ಹಬ್ಬುತ್ತಿರುವಂತೆ ಇಲ್ಲಿಯು ಶಿಕ್ಷಣ ವ್ಯಾಪಾರದ ಭರಾಟೆ ತೀವ್ರಗೊಂಡಿದೆ. ಧನದಾಹಿ ಶಿಕ್ಷಣ ಸಂಸ್ಥೆಗಳ ಸುಲಿಗೆಕೋರ ನೀತಿಗೆ ಸುಮಾರು 20 ವರ್ಷದ ಮುಗ್ದ ವಿದ್ಯಾರ್ಥಿ ಬಲಿಯಾಗಿರುವ ಘಟನೆ ಅತ್ಯಂತ ವಿಷಾದಕರವಾಗಿದೆ.

ಶಿರಸಿಯ ಎಂ.ಎಂ. ಕಾಮರ್ಸ್ ಕಾಲೇಜು ವಿದ್ಯಾರ್ಥಿ ಗಿರೀಶ್ ಹೆಗಡೆ ಕಲ್ಲಳ್ಳಿ, ಈತ ಪ್ರಥಮ ಬಿ.ಕಾಂ. ಮುಗಿಸಿ ಈಗ ದ್ವಿತೀಯ ಬಿಕಾಂ ಕೋರ್ಸ್‌ಗೆ ಸೇರಬೇಕಿತ್ತು. ದುಬಾರಿ ಶುಲ್ಕಗಳು, ಜೊತೆಗೆ ವಂತಿಗೆ. ಅಪ್ಪ ಅಮ್ಮ ವಂತಿಗೆ ಶುಲ್ಕ ಕಟ್ಟಲು ತಮ್ಮ ಅಸಹಾಯಕತೆ ತೋಡಿಕೊಂಡು ಭಾಗಶಃ ಹಣವನ್ನು ಮಾತ್ರ ಕೊಟ್ಟಿದ್ದಾರೆ. ಉಳಿದ ಹಣಕಾಸು ಹೊಂದಿಸಲಾಗದೆ ಹತಾಶೆಗೆ ತುತ್ತಾದ ಗಿರೀಶ್ ಆತ್ಮಹತ್ಯೆದಾರಿ ಹಿಡಿದು ಸಾವಿಗೆ ಮೊರೆ ಹೋಗಿದ್ದಾನೆ. ಮೇಲ್ನೋಟಕ್ಕೆ ಇದೊಂದು ಆತ್ಮಹತ್ಯೆ. ಆದರೆ ಆಳವಾಗಿ, ವಿಚಾರ ಮಾಡಿದರೆ ಇದು ಶಿಕ್ಷಣರಂಗ ದಲ್ಲಿ ವಿಜೃಂಭಿಸುತ್ತಿ ರುವ ಕ್ಯಾಪಿಟೇಷನ್, ಡೊನೇಷನ್ ಎಂಬ ಸುಲಿಗೆಕೋರ ವ್ಯವಸ್ಥೆ ಪಡೆದ ಬಲಿಯಲ್ಲವೇ? ಇದು ಕ್ರೂರ ಶಿಕ್ಷಣ ವ್ಯವಸ್ಥೆಯು ಎಸಗಿದ ಕೊಲೆಯಲ್ಲವೇ? ವಿವೇಕ, ಮನುಷ್ಯತ್ವ ಆಧಾರ ವಿಚಾರಿಸುವವರಿಗೆ. ಇದು ಕೊಲೆಯೇ ಹೌದು ಎನಿಸದಿರದು.

ಉತ್ತರ ಕನ್ನಡ ಜಿಲ್ಲೆಯ ಅಂಕೋಲದಲ್ಲಿಯೂ ವಂತಿಗೆ ಸುಲಿಗೆಯ ಹಾವಳಿ. ಸಂತೋಷದ ವಿಷಯವೆಂದರೆ ಇಲ್ಲಿಯ ವಿದ್ಯಾರ್ಥಿಗಳು ಯಾರು ಆತ್ಮಹತ್ಯೆಗೆ ಮುಂದಾಗಲಿಲ್ಲ. ಬದಲಿಗೆ ಎಸ್‌ಎಫ್‌ಐ ಬಾವುಟ ಹಿಡಿದರು.

ಅಂಕೋಲಾ ತಾಲೂಕಿನ ಜೆ.ಸಿ. ಕಾಲೇಜಿನಲ್ಲಿ ವಂತಿಗೆ ಹೆಚ್ಚಳ ವಿರೋಧಿಸಿ ಎಸ್.ಎಫ್.ಐ.ನ ಮಧ್ಯಪ್ರವೇಶದಿಂದಾಗಿ ಕಾಲೇಜು ಆಡಳಿತ ಮಂಡಳಿಯು ವಿದ್ಯಾರ್ಥಿ ಪೋಷಕರ ಬಿಗಿಪಟ್ಟಿಗೆ ಮಣಿಯಲೇ ಬೇಕಾಯಿತು. ತಲಾ ವಿದ್ಯಾರ್ಥಿಗೆ ಐದು ನೂರು ರೂಪಾಯಿಗಳನ್ನು ಆಡಳಿತ ಮಂಡಳಿ ವಾಪಸ್ ನೀಡಬೇಕಾಯಿತು. ಸುಮಾರು 8 ಲಕ್ಷರೂಪಾಯಿಗಳು ಈ ರೀತಿಯಲ್ಲಿ ವಿದ್ಯಾರ್ಥಿ ಪೋಷಕರಿಗೆ ಮರಳಿ ದೊರೆತ ಹೋರಾಟದಿಂದ ಇಡೀ ಉತ್ತರ ಕನ್ನಡ ಜಿಲ್ಲೆಯಲ್ಲಿ ಡೊನೇಷನ್ ವಿರುದ್ಧದ ಹೋರಾಟಕ್ಕೆ ಹೊಸ ಉತ್ಸಾಹ, ಸ್ಫೂರ್ತಿ ಬಂದಿದೆ.

ಈ ವಂತಿಗೆ ಸುಲಿಗೆಯೆಂಬ ಪಿಡುಗು ಕೇವಲ ಖಾಸಗೀ ಕಾಲೇಜುಗಳಲ್ಲಿ ಮಾತ್ರ ಎಂದು ಯಾರಾದರೂ ಭಾವಿಸಿದರೆ ತಪ್ಪಾಗುತ್ತದೆ. ಈ ವಂತಿಗೆ 'ಗುಮ್ಮ' ಸರ್ಕಾರಿ ಕಾಲೇಜುಗಳಲ್ಲಿ ಸಹ ಬೇರೆ ಬೇರೆ ಹೆಸರಿನಲ್ಲಿ ವಿದ್ಯಾರ್ಥಿ ಪೋಷಕರನ್ನು ಕಾಡುತ್ತಿದೆ.

ಹಾಸನದ ಸರ್ಕಾರಿ ವಿಜ್ಞಾನ ಕಾಲೇಜು, ಇಲ್ಲಿ ಹಾಸನದ ಶಾಸಕ ಕೆ.ಎಚ್. ಹನುಮೇಗೌಡರ ನೇತೃತ್ವದಲ್ಲಿ ಕಾಲೇಜು ಅಭಿವೃದ್ಧಿ ಸಮಿತಿಯನ್ನು ರಚಿಸಲಾಗಿದೆ. ಅವರೇ ಅಧ್ಯಕ್ಷರು. ಈ ಪದವಿ ಪೂರ್ವ ಕಾಲೇಜಿಗೆ ಮಾನ್ಯತೆ ಇಲ್ಲದಿರುವುದರಿಂದ ಶಿಕ್ಷಣ ಶುಲ್ಕವಲ್ಲದೆ, ಶಿಕ್ಷಕರ ಸಂಬಳಕ್ಕೆ ತಲಾ ವಿದ್ಯಾರ್ಥಿಗಳು 500/-ರೂ ಕೊಡಬೇಕಂತೆ(ಸರ್ಕಾರಿ ಕಾಲೇಜಿಗೆ ಯಾರು ಮಾನ್ಯತೆ ನೀಡಬೇಕಾದವರು). ಇದು ಕಾಲೇಜು ಅಭಿವೃದ್ಧಿ ಸಮಿತಿ ಫರ್ಮಾನು. ಶಿಕ್ಷಕರಿಗೆ ಸಂಬಳವನ್ನು ವಿದ್ಯಾರ್ಥಿಗಳು ನೀಡಬೇಕು! ವಿದ್ಯಾರ್ಥಿಗಳು ಕೊಡಲಾಗದು ಎಂದು ಪಟ್ಟು ಹಿಡಿದರು. ಪಟ್ಟು ಹಿಡಿದ್ದದ್ದು ಮಾತ್ರವಲ್ಲ. ಅನಧಿಕೃತ ಶುಲ್ಕ ವಸೂಲಿ ನಿಲ್ಲಿಸಿ ಸಮಸ್ಯೆಗೆ ಪರಿಹಾರ ಒದಗಿಸಬೇಕೆಂದು ಇದೇ ಜೂನ್ 26 ರಂದು ಕಾಲೇಜು ಬಾಗಿಲಿಗೆ ಬೀಗ ಜಡಿದು ಕುಳಿತರು. ಜನಪ್ರತಿನಿಧಿಗಳಾದ ಶಾಸಕರು ತಮ್ಮ ಬಲ ಪ್ರಯೋಗಿಸಿ ಶಿಕ್ಷಕರ ನೇಮಕಾತಿಗೆ ಸರ್ಕಾರವನ್ನು ಒತ್ತಾಯಿಸುವ ಬದಲಿಗೆ ವಿದ್ಯಾರ್ಥಿ ಪೋಷಕರ ಸುಲಿಗೆಗೆ ನಿಂತಿದ್ದಾರೆ. ಹೋರಾಟ ಮುಂದುವರೆದಿದೆ.

ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಸರ್ಕಾರಿ ಪದವಿ ಪೂರ್ವಕಾಲೇಜು. ಇನ್ನೇನು ಕಾಲೇಜುಗಳು ಅಧಿಕೃತವಾಗಿ ಆರಂಭವಾಗಿ ಒಂದು ತಿಂಗಳಾಗುತ್ತಿದೆ. ಸುಮಾರು 650 ಜನ ವಿದ್ಯಾರ್ಥಿಗಳಿರುವ ಕಾಲೇಜಿನಲ್ಲಿ ವಿವಿಧ ವಿಭಾಗಗಳಲ್ಲಿ ಒಟ್ಟು 8 ಜನ ಶಿಕ್ಷಕರ ಕೊರತೆಯಾಗಿದೆ. ವಿಜ್ಞಾನ ವಿದ್ಯಾರ್ಥಿಗಳಿಗೆ ರಸಾಯನ ಶಾಸ್ತ್ರ ಪಾಠಮಾಡಲು, ಇತಿಹಾಸ - ರಾಜ್ಯಶಾಸ್ತ್ರ, ಎಲೆಕ್ಟ್ರಾನಿಕ್ಸ್ ವಿಷಯವಾಗಿ ವೃತ್ತಿ ಶಿಕ್ಷಣದ ಪಾಠ ಮಾಡಲು ಶಿಕ್ಷಕರಿಲ್ಲ. ಅಸಲಿಗೆ ಕಾಲೇಜಿಗೆ ಪ್ರಾಂಶುಪಾಲರ ಜಾಗವೇ ಖಾಲಿ ಇದೆ.

ದಿನ ಪತ್ರಿಕೆಗಳನ್ನು ತೆಗೆದರೆ ದುಶ್ಯಾಸನ ಸೆಳೆದ ದ್ರೌಪದಿಯ ಸೀರೆಯಂತೆ ಶಿಕ್ಷಣ ಮಂತ್ರಿಗಳ ಭರವಸೆಯೋ ಭರವಸೆ. ಆಗಸ್ಟ್ ತಿಂಗಳಿಗೆ ಸಾವಿರ ಸಾವಿರ ಶಿಕ್ಷಕ ಹುದ್ದೆಗಳನ್ನು ತುಂಬಲಾಗುವುದು, 'ತುಂಬಿಕೊಳ್ಳ'ಲಾಗುವುದು ಎಂದು. ಯಾವ ಯಾವ ಮಂತ್ರಿಗಳು ಎಷ್ಟೆಷ್ಟು 'ತುಂಬಿಕೊಂಡಿ'ದ್ದಾರೋ? ಆದರೆ ಕಾಲೇಜುಗಳಲ್ಲಿ ಶಿಕ್ಷಕರಲಿಲ್ಲ. ಕಾಲೇಜುಗಳಿಗೆ ಪಾಠ ಮಾಡುವ ಶಿಕ್ಷಕರೇ ಇಲ್ಲ ಎಂದ ಮೇಲೆ ಪ್ರಯೋಗ ಶಾಲೆ - ಗ್ರಂಥಾಲಯ ಕ್ರೀಡಾ ಸೌಲಭ್ಯಗಳ ಕತೆಯನ್ನು ಕೇಳದಿರುವುದು ವಾಸಿ.

ಶಾಲಾ ಶಿಕ್ಷಣ ಗೊಂದಲದ ಗೂಡು

ಸಮಸ್ಯೆಗಳು ಕೇವಲ ಕಾಲೇಜುಗಳಿಗೆ ಮಾತ್ರವಲ್ಲ, ಶಾಲಾ ಶಿಕ್ಷಣ ಸಮಸ್ಯೆ ಸಾಗರ, ಗೊಂದಲ ಗೋಜಲುಗಳ ಸಂತೆಯಾಗಿದೆ. ಸರ್ಕಾರಗಳು ಮಾತ್ರ ಪ್ರಾಥಮಿಕ ಶಿಕ್ಷಣಕ್ಕೆ ನಮ್ಮ ಆದ್ಯತೆ, ಹಾಗಾಗಿಯೇ ಉನ್ನತ ಶಿಕ್ಷಣವನ್ನು ಮಾರಾಟಕ್ಕೆ ಇಟ್ಟಿದ್ದೇವೆ ಎನ್ನುತ್ತವೆ. ಆದರೆ ಜನ ಸಾಮಾನ್ಯರ ಅನುಭವದ ಮಾತೆನೆಂದರೆ, ತಮ್ಮ ಇಡೀ ಜೀವನದ ಶಿಕ್ಷಣಕ್ಕೆ. ಪದವಿ ಸ್ನಾತಕೋತ್ತರವರೆಗೆ ಶಿಕ್ಷಣಕ್ಕಾಗಿ ಮಾಡಿದ ಒಟ್ಟು ವೆಚ್ಚದ ಹಲವು ಪಟ್ಟು ಇಂದು ಕೇವಲ ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕೆ ಖರ್ಚು ಮಾಡಬೇಕಾಗಿದೆ ಎಂಬುದು. ಒಂದು ಹಾಲುಗಲ್ಲದ ಹಸುಗೂಸನ್ನು ಶಾಲೆಗೆ ಸೇರಿಸಿಕೊಳ್ಳಲು ಒಂದು ಶಾಲೆ ಎಷ್ಟು ಹಣ ಕೇಳಬಹುದು. 10 ಸಾವಿರ? 20 ಸಾವಿರ? ಬೆಂಗಳೂರು ಮಹಾನಗರವೆಂಬ ಮಾಯಾನಗರಿಯಲ್ಲಿ ಎಲ್.ಕೆ.ಜಿ.ಗೆ ಸೇರಬೇಕಾದ ಮಗುವಿಗೆ ಒಂದು ಲಕ್ಷ ರೂಪಾಯಿಗಳ ವಂತಿಗೆ ಸುಲಿಯುವ ಸಂಸ್ಥೆಗಳಿವೆ. ದುಡಿಯುವ ಜನ ವಿಭಾಗವನ್ನು ವಿಧ ವಿಧವಾಗಿ ಸುಲಿಯುವ ಸುಲಿಗೆಕೋರ ವರ್ಗದವರು, ಸಮಾಜದ ಮೇಲ್‌ಸ್ತರದ ಶ್ರೀಮಂತರು ಮಾತ್ರ ಈ ಶುಲ್ಕ ಕೊಟ್ಟು ತಮ್ಮ ಬಗ್ಗೆ ತಾವೇ ಹೆಮ್ಮೆಪಟ್ಟುಕೊಳ್ಳುತ್ತಾರೆ ಎಂಬುದು ಬೇರೆ ಮಾತು. ಆದರೆ ಅದೇ ಮಾದರಿಯ ಸುಲಿಗೆಕೋರ ವ್ಯವಸ್ಥೆ- ಸಂತತಿ ಇಂದು ನಗರದಿಂದ ಗ್ರಾಮಾಂತರ ಶಾಲೆಗಳಿಗೆ ಒಂದು ಮಾರಕ ರೋಗದಂತೆ, ಸಮೂಹ ಸನ್ನಿಯಂತೆ ಹರಡುತ್ತಾ ಮಧ್ಯಮ, ಕೆಳ ವರ್ಗದ ಬಡ ಜನರ ಜೀವ ಹಿಂಡುತ್ತಿದೆ. 'ಶಿಸ್ತು-ಉತ್ತಮ ಶಿಕ್ಷಣ'ದ ಕಾಳಜಿಯಿಂದ (ಬಹಳಸಾರಿ ಭ್ರಮೆಯಿಂದ) ಇಂದು ಪೋಷಕರು ತಮ್ಮ ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕೆ ಹತ್ತಾರು ಸಾವಿರ ರೂಪಾಯಿಗಳನ್ನು ಕಕ್ಕುವಂತಹ

ಜುಲೈ 25, 2003 : ರಾ

ಜುಲೈ 25, 2003 ರಂದು ಎಸ್ಸೆಫೈ ರಾ
ವಿದ್ಯಾರ್ಥಿಗಳ ಅಗಣಿತ ಸಮಸ್ಯೆಗಳ ವಿರುದ್ಧ
ರಾಜ್ಯ ಸರ್ಕಾರ ತನ್ನ ಬಜೆಟ್‌ನಲ್ಲಿ ಶೇ 2.
ಶಿಕ್ಷಣಕ್ಕೆ ಮೀಸಲಿಡಬೇಕೆಂದು
ಜೂನ್-ಜುಲೈ-ಆಗಸ್ಟ್-ಸೆಪ್ಟೆಂಬರ್ ತಿಂಗ
ಮಾಸ' ಎಂದು ಘೋಷಿಸಿ ಈಗಾಗಲೇ


ಸ್ಥಿತಿ ನಿರ್ಮಾಣವಾಗಿದೆ. ದಿನೇ ದಿನೇ ಈ ಪ್ರವೃ... ಏರುತ್ತಿದೆ. ರಾಜ್ಯ ಸರ್ಕಾರ ಎಂಬುದೊಂದು ... ವಿದ್ಯಾರ್ಥಿ ಪೋಷಕರನ್ನು ಸುಲಿಗೆ ಮಾಡು... ಸುಲಿಗೆಕೋರರ ವಿರುದ್ಧ ಎಲ್ಲಾದರ... ಯಾರಾದರೂ ಒಂದು ದಾಳಿ ಮಾಡಿದ ಬಂಧಿಸಿ ... ಶಿಕ್ಷಿಸಿದ ಕ್ರಮ ಕೈಗೊಂಡ ಸುದ್ದಿ ವರದಿ ಕೇಳಿದ್ದೀರಾ ... ಹಿಂದೆ ಗೋವಿಂದೇಗೌಡರು ಶಿಕ್ಷಣ ಮಂ... ಯಾಗಿದ್ದಾಗ ಕೆಲವಾದರೂ ದಾಳಿಗಳು ನಡೆ... ಕ್ರಮ ಕೈಗೊಂಡ ವರದಿ ಅಲ್ಲಿ ಇಲ್ಲಿ ಇದ್ದವು. ಆದ... ಈಗ ಶಿಸ್ತು ಕ್ರಮ ಕೈಗೊಳ್ಳಬೇಕಾದವರ ಸದ್ದಡಗಿ... ಕ್ರಮ ಕೈಗೊಳ್ಳುವುದು ಒತ್ತಟ್ಟಿಗಿರಲಿ ಖಾ... ಬಾಯುಪಚಾರದ ಮಾತಾದರೂ ಇಲ್ಲ ಎಂಬು... ವಿಷಾದನೀಯ ಪರಿಸ್ಥಿತಿಯ ದ್ಯೋತಕವಾಗಿದೆ.

ಶಾಲೆಗೆ ಮಕ್ಕಳನ್ನು ಸೇರಿಸುವ ಪೋಷ... ಪರದಾಟ ಅಲೆದಾಟದ ಬವಣೆ ಹೇಳತೀರದ... ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ... ಪೋಷಕರೆ ಬೀದಿಗಿಳಿದಿದ್ದಾರೆ.

ಶಾಲೆಯ ಪೋಷಕರ ಅತೃಪ್ತಿ ಬುಗಿಲೆದ್ದ... ದುಬಾರಿ ಡೊನೇಷನ್ ವಸೂಲಿ ವಿರುದ್ಧ ತಿರ... ಬಿದ್ದು ಶಾಲೆಗೆ ಮುತ್ತಿಗೆ ಹಾಕಿ ಚಳು... ಆರಂಭಿಸಿದ್ದಾರೆ.







ಜ್ಯ ಸರ್ಕಾರ ಸರ್ಕಾರದ ಪ್ರಾಥಮಿಕ
ಳಲ್ಲಿ 5ನೇ ತರಗತಿಯವರೆಗೆ ಬಿಸಿ ಊಟದ
ಜನೆಯನ್ನು ಜಾರಿ ಮಾಡಿದೆ. ಕಳೆದ
ದೇ ಈಶಾನ್ಯ ಭಾಗದ 8 ಜಿಲ್ಲೆಗಳಲ್ಲಿ ಈ
ಜನೆ ಜಾರಿಯಾಗಿತ್ತು. ಒಂದು ಉತ್ತಮ
ಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಲು
ಾದ ಪೂರ್ವ ಸಿದ್ಧತೆ ಇಲ್ಲದೆ ಬಿಸಿಊಟದ

ಪೋಷಕರ ಬವಣೆ

ಜನೆ ಗೊಂದಲದ ಗೂಡಾಗಿತ್ತು. ಕಳೆದ
ಊಟದ ತಟ್ಟೆಗಳಿಲ್ಲದೆ ವಿದ್ಯಾರ್ಥಿಗಳು
ಫ್ ಮೇಲೆ 'ಬಿಸಿ ಊಟ' ತಿನ್ನುವ
ಷ್ಟಕರ ಸನ್ನಿವೇಶವನ್ನು ಎಸ್.ಎಫ್.ಐ.ನ
ಗ ಬೀದರ್ ಜಿಲ್ಲೆಯಲ್ಲಿ ಕಣ್ಣಾರೆ ಕಂಡು
ಷಯವಾಗಿ ಪ್ರತಿಭಟನೆ ನಡೆಸಿತ್ತು. ಈ
ಮತ್ತೂ 12 ಜಿಲ್ಲೆಗಳಿಗೆ ಯೋಜನೆಯನ್ನು
ಾಗಿದೆ. ರಾಜ್ಯದ ಹಲವು ಭಾಗಗಳಿಂದ

ಸಂಘರ್ಷ ದಿನ

ಸಮಸ್ಯೆಗಳು ಹಾಗೂ ಹಾಸ್ಟೆಲ್
ರದ್ಧತಿ ಇತ್ಯಾದಿ ಬೇಡಿಕೆಗಳಿಗಾಗಿ
ನ್ನ ಬಜೆಟ್‌ನಲ್ಲಿ ಶೇ 10 ರಷ್ಟನ್ನು
ಪ್ರತಿಭಟನೆ ನಡೆಸಲಿದೆ.
ಳ ವಿರುದ್ಧ ವಿದ್ಯಾರ್ಥಿ ಸಂಘರ್ಷ

ಗಳು, ಶಿಕ್ಷಕರು ಬಿಸಿ ಊಟ ತಿಂದು
ದ ಸುದ್ದಿಗಳು ಬರುತ್ತಿವೆ. ಒಂದು ಕಡೆ
ರುದ ವರದಿಗಳಲ್ಲಿ ಉತ್ಪ್ರೇಕ್ಷೆ ಇದೆ
ತ್ತಿದೆಯಾದರೂ ಯೋಜನೆ ಜಾರಿ
ಬೇಕಾದ ಪೂರ್ವ ಸಿದ್ಧತೆಯ ಕೊರತೆ,
ಹಿಡಿದ ಅಕ್ಕಿ, ಕಳಪೆ ಆಹಾರ ವಿದ್ಯಾರ್ಥಿ
ೋಗ್ಯಕ್ಕೆ, ಒಟ್ಟಾರೆ ಶಾಲೆಗಳ ಶೈಕ್ಷಣಿಕ
ರಣಕ್ಕೂ ಆತಂಕವನ್ನು ತಂದೊಡ್ಡಿದೆ.
ಆಳುವ ಜನ ಅನುಭವದಿಂದ ಏನನ್ನೂ
ತ್ತಿದಿಲ್ಲ ಎಂಬುದಕ್ಕೆ ಈ ಘಟನೆ ಜೀವಂತ
ಗಿದೆ. ಏನೆಲ್ಲಾ ಸಮಸ್ಯೆಗಳು, ಭಯ
ಳ ನಡುವೆಯೂ ಬಿಸಿ ಊಟದ
ಂದ ಶಾಲೆಗಳಲ್ಲಿ ಹಾಜರಾತಿಯು
ಪ್ರಮಾಣದಲ್ಲಿ ಹೆಚ್ಚಿದೆ ಎಂಬ ವರದಿ
ನಮ್ಮ ಜನರು ಬದುಕುತ್ತಿರುವ ದುರ್ಬರ
ತುತ್ತು ಕೂಳಿಗೂ ತತ್ವಾರವಾಗಿರುವ
ರ ಪರಿಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ.

ಕಗಳ ಕೊರತೆಯ ಅವಾಂತರ
ಾದಿಕರಣದ ಗುಮ್ಮ

-ಕಾಲೇಜುಗಳು ಸರಿ ಸುಮಾರು
ಆರಂಭವಾಗುತ್ತವೆ, ರಾಜ್ಯದಲ್ಲಿ ಸರಿ

ಸುಮಾರು ಎಷ್ಟು ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ... ಶಿಕ್ಷಣ ರಂಗಕ್ಕೆ ವಿದ್ಯಾರ್ಥಿಗಳ ಒಳ ಬರುವಿಕೆ (inflow) ಯಾವ ರೀತಿ ಇದೆ ಎಂಬೆಲ್ಲಾ ಮಾಹಿತಿಗಳು ಸ್ಪಷ್ಟವಾಗಿದ್ದಾಗಲೂ ಪ್ರತಿ ವರ್ಷವೂ ಇದೇ ಗೋಳು. ಶಾಲೆಗಳು ಆರಂಭವಾಗಿ ಸುಮಾರು ಒಂದುವರೆ ತಿಂಗಳು ಕಳೆದಿದೆ, ವಿದ್ಯಾರ್ಥಿಗಳಿಗೆ ಹಲವು ಪಠ್ಯ ಪುಸ್ತಕಗಳು ಲಭ್ಯವಿಲ್ಲ. ಶಿಕ್ಷಕರು ಪಾಠ ಮಾಡುವುದು ಹೇಗೆ? ಮಕ್ಕಳು ಕಲಿಯುವುದು ಹೇಗೆ? ಒಂದು ಕಡೆ ಸರ್ಕಾರ 'ಮರಳಿ ಬಾ ಶಾಲೆಗೆ' ಎನ್ನುತ್ತದೆ ಮಗುವಿಗೆ. ಬಸ್ ಪಾಸ್ ದರ ತೆರಲಾರದೇ ಮಗು ಉರುಳಿ ಬರಬೇಕಾಗುತ್ತದಷ್ಟೆ. ಬಂದ ಮೇಲೆ ಶಾಲೆಗಳಲ್ಲಿ ಪಠ್ಯ ಪುಸ್ತಕವಿಲ್ಲ. ಮರಳಿ ಮನೆಗೆ ಹೋಗಬೇಕೇ? ಇಲ್ಲ ಕೆರಳಿ ಕಂಡ ಕಂಡ ಅನ್ಯ ಧರ್ಮಿಯರ ಮೇಲೆ, ಇಲ್ಲವೇ ಅವರ ಪೂಜಾ ಮಂದಿರಗಳ ಮೇಲೆ ದಾಳಿಗೆ ಏರಿ ಹೋಗಬೇಕೋ? ಸರಕಾರ ಉತ್ತರ ಹೇಳಬೇಕಿದೆ. ಏಕೆಂದರೆ ತರಗತಿ 5,6, 8,9 ನೂತನ ಶಾಲಾ ಪಠ್ಯಗಳು ಸಂಪೂರ್ಣ ಕೋಮುವಾದೀಕರಣ ಗೊಂಡಿವೆ ಎಂದು ಕಳೆದ ವರ್ಷ ಶಿಕ್ಷಣ ತಜ್ಞರು ಇತಿಹಾಸಕಾರರು, ತಜ್ಞರು ಬೊಬ್ಬೆ ಹೊಡೆದರೂ ಕೂಡ 'ಹಾವನ್ನು ಬಿಟ್ಟು ಹುತ್ತವನ್ನು ಬಡಿದಂತೆ' ಸರ್ಕಾರ ಅದೇ ಕೋಮುವಾದಿ ಪಠ್ಯವನ್ನು ಮುಂದುವರಿಸಿದೆ. ಅಷ್ಟೇನೂ ಮುಖ್ಯವೇ ಅಲ್ಲದ ಕೆಲವು ಶಬ್ದಗಳನ್ನು ಪದಗಳನ್ನು ತೆಗೆದಿದೆಯಷ್ಟೇ. ಈಗ ಹೊಸ ಪಠ್ಯಗಳು ಲಭ್ಯವಿಲ್ಲವಾದ್ದರಿಂದ ಶಾಲೆಯ ಮಕ್ಕಳು ಕಳೆದ ವರ್ಷದ ಸಂಪೂರ್ಣ ಕೋಮುವಾದೀಕರಣಗೊಂಡ ಪಠ್ಯಗಳನ್ನು ಶಾಲೆಗಳಲ್ಲಿ ವ್ಯಾಪಕವಾಗಿ ಬಳಸುತ್ತಿದ್ದಾರೆ. ಹೊಸ ಪುಸ್ತಕಗಳು ಲಭ್ಯವಾದರೂ ಹಳೆಯ ಪಠ್ಯಗಳನ್ನು ಬಳಸುವ ಬಡ ಜನರು ವ್ಯಾಪಕವಾಗಿರುವ ನಮ್ಮ ಸಮಾಜದಲ್ಲಿ ಕೋಮುವಾದಿ ಪಠ್ಯ ಪುಸ್ತಕಗಳು ಸಮಗ್ರವಾಗಿ ಬದಲಾಗಬೇಕೆಂಬ ಆಗ್ರಹಕ್ಕೆ ಗಮನ ನೀಡಲಾರದಷ್ಟು ರಾಜ್ಯ ಕಾಂಗ್ರೆಸ್ ಸರ್ಕಾರ ಬೌದ್ಧಿಕ ದಿವಾಳಿಯನ್ನು ಎದುರಿಸುತ್ತಿದೆ.

ಬಸ್ ಪಾಸ್ ದರ ಏರಿಕೆಯ ಹೊರೆ ಶುಲ್ಕ ಏರಿಕೆಗಳ ಬರೆ

ರಾಜ್ಯದಲ್ಲಿ ಹಲವು ಜಿಲ್ಲೆಗಳಲ್ಲಿ ಕಳೆದೆರಡು ಮೂರು ವರ್ಷಗಳಿಂದ ಬರ ಬಂದು, ರಾಜ್ಯ ಕೇಂದ್ರ, ಸರ್ಕಾರಗಳು ಬರ ಪರಿಹಾರ (ಯಾರ ಬರ ಪರಿಹಾರ?) ಯೋಜನೆಗಳು, ಕಾಮಗಾರಿಗಳೂ ಯಾವುದರ ಫಲವೂ ಜನತೆಯ ಕೈಗೆ ಬರದೆ ಜನತೆ ಕಂಗೆಟ್ಟಿರುವಾಗ, ಇನ್ನೊಂದುಕಡೆ ನಮ್ಮ ಸರ್ಕಾರಗಳು 'ಬೆಂದ ಮನೆಯಲ್ಲಿ ಗಳ ಇರಿ'ಯುವಂತೆ ಶಿಕ್ಷಣ ಶುಲ್ಕಗಳನ್ನು, ಬಸ್ ಪಾಸ್ ದರಗಳನ್ನು ಹಿಗ್ಗಾಮುಗ್ಗಾ ಏರಿಸುತ್ತಾ ಜನರ ಬೆನ್ನ ಮೇಲೆ ಬರೆ ಹಾಕಲು ಹೊರಟಿವೆ. ರಾಜ್ಯದ ಕಾಂಗ್ರೆಸ್, ಕೇಂದ್ರದ ಬಿಜೆಪಿ ನೇತೃತ್ವ ಎನ್.ಡಿ.ಎ. ಎರಡೂ ಸರ್ಕಾರಗಳು ಈ ವಿಷಯದಲ್ಲಿ ಪರಸ್ಪರ ಪೈಪೋಟಿಗೆ ಇಳಿದಿವೆ.

ವಿದ್ಯಾರ್ಥಿ ಬಸ್ ಪಾಸ್ ಎಂಬ 'ದೇವರ ಪ್ರಸಾದ'

ರಾಜ್ಯ ಸರ್ಕಾರವು ವಿದ್ಯಾರ್ಥಿಗಳಿಗೆ ನೀಡುತ್ತಿರುವ ರಿಯಾಯತಿ ಬಸ್ ಪಾಸ್ ಯೋಜನೆ ಎಂಬುದು ದೇವಸ್ಥಾನಗಳಲ್ಲಿ ಸಂಪ್ರದಾಯ - ಶಾಸ್ತ್ರಕ್ಕೆಂದು ನೀಡುವ 'ಪ್ರಸಾದ' ದಂತಾಗಿದೆ. ಹಸಿದು ಕಂಗೆಟ್ಟವರ ಹೊಟ್ಟೆ ತುಂಬಿಸದ ಈ 'ಪ್ರಸಾದ' ಕಾಟಾಚಾರದ್ದಾಗಿದೆ. ಬಸ್ ಪಾಸ್ ದರಗಳನ್ನು ತೀವ್ರವಾಗಿ ಏರಿಸಲಾಗಿದೆ ಮಾತ್ರವಲ್ಲ. ಬಸ್ ಪಾಸ್ ಬಳಸುವ ವಿದ್ಯಾರ್ಥಿಗಳಿಗೆ ವಿಧಿಸಲಾಗಿರುವ ಹಲವು ಷರತ್ತುಗಳು, ರಿಯಾಯತಿ ಬಸ್ ಪಾಸ್ ಎಂಬ ವ್ಯವಸ್ಥೆಯೇ ಅರ್ಥಹೀನ ಎನ್ನುವಂತೆ ಮಾಡುತ್ತಿದೆ.


ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಇದುವರೆಗೆ ಇದ್ದ ವಾರ್ಷಿಕ ಬಸ್ ಶುಲ್ಕ 190ರೂ ಈಗ ಇದನ್ನು 270ರೂ ಗೆ ಏರಿಸಲಾಗಿದೆ. ಕಾಲೇಜು ವಿದ್ಯಾರ್ಥಿಗಳಿಗೆ 380ರೂನಿಂದ 470ರೂ. ತಾಂತ್ರಿಕ ವೈದ್ಯಕೀಯ ವಿದ್ಯಾರ್ಥಿಗಳಿಗೆ 480 ರೂ ನಿಂದ 700 ರೂಗಳಿಗೆ, ಹೊಟ್ಟೆ ಪಾಡಿಗಾಗಿ ಹಗಲು ದುಡಿದು ಸಂಜೆ ಓದಲು ಬರುವ ಬಡಪಾಯಿ ಸಂಜೆ ಕಾಲೇಜು ವಿದ್ಯಾರ್ಥಿಗಳಿಗೆ ವಾರ್ಷಿಕ680 ರೂಗಳಿಂದ 880 ರೂಗಳಿಗೆ ಶುಲ್ಕಗಳನ್ನು ಏರಿಸಲಾಗಿದೆ.

ಪ್ರಾಥಮಿಕ ಶಾಲೆಯ ಮಕ್ಕಳಿಗೇನೋ ಬಸ್ ಪಾಸ್ ದರಗಳಲ್ಲಿ ಸ್ವಲ್ಪ ಇಳಿಸಲಾಗಿದೆ. ತಮಾಷೆ ಎಂದರೆ ಬಸ್‌ಗಳನ್ನು, ಬಸ್ ಪಾಸ್‌ಗಳನ್ನು ಬಳಸಿ ಶಾಲೆಗಳಿಗೆ ಹೋಗುವ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳ ಪ್ರಮಾಣ ಬಹಳ ಕಡಿಮೆ ಎನ್ನುವುದು. ಸನಿಹದಲ್ಲಿಲ್ಲದ ದೂರ ದೂರದ ಶಾಲೆ ಕಾಲೇಜುಗಳಿಗೆ ಹೋಗಿ ಕಲಿಯಬೇಕಾದ ಅಗತ್ಯ ಪ್ರೌಢಶಾಲೆ ಹಾಗೂ ಕಾಲೇಜು ಹಂತದಲ್ಲೇ ಬಹಳ ವ್ಯಾಪಕ. ಆದರೆ ಈ ಹಂತದಲ್ಲಿ ಈ ಪರಿಯ ಶುಲ್ಕ ಏರಿಕೆ.

ಇದು ಸಾಲದೆಂದು ಸಂಜೆ ಕಾಲೇಜು ವಿದ್ಯಾರ್ಥಿಗಳು ಹಗಲು ಓಡಾಡಬಾರದು (ಸದ್ಯ ಹಗಲು ಓದಲೂ ಬಾರದು ಎಂದು ಹೇಳಿಲ್ಲ). ಹಗಲು ಕಾಲೇಜು ವಿದ್ಯಾರ್ಥಿಗಳು ಸಂಜೆ ಓಡಾಡಬಾರದು, ಕ್ರೀಡಾ ಸಾಂಸ್ಕೃತಿಕ ಚಟುವಟಿಕೆ, ಗ್ರಂಥಾಲಯ ಬಳಕೆ ಯಾವುದೇ ಕಾರಣಕ್ಕೆ ಇರಲಿ ಭಾನುವಾರದಂದು ವಿದ್ಯಾರ್ಥಿಗಳಿಗೆ ಬಸ್ ಪಾಸ್ ಸೌಲಭ್ಯ ಸಿಗಬಾರದು. ಮನೆಯಿಂದ ಕಾಲೇಜುವರೆಗೆ ಮಾತ್ರ ಪಾಸ್ ಸೌಕರ್ಯ. ಕಾಲೇಜಿನಿಂದ ಗ್ರಂಥಾಲಯ, ಕ್ರೀಡಾಂಗಣ ಇತ್ಯಾದಿ ಇರುವ ಜಿಲ್ಲಾ ಕೇಂದ್ರವೊ, ತಾಲ್ಲೂಕು ಕೇಂದ್ರವೊ ಒಂದೋ ಎರಡೋ ಕಿ.ಮಿ. ದೂರದಲ್ಲಿದ್ದರೆ ಅಲ್ಲಿಗೆ ಪಾಸ್ ಬಳಸಬಾರದು. ಹೀಗೆ ನೂರೆಂಟು ನಿರ್ಬಂಧ ವಿಘ್ನಗಳು.

ಬಡವರೇ ದುಡಿಯುವ ಜನರೇ ನೀವು ತಾಂತ್ರಿಕ, ವೈದ್ಯಕೀಯ ಕಾಲೇಜುಗಳತ್ತ ತಲೆ ಹಾಕಿ ಮಲಗಲೂ ಬಾರದು!

ದೇಶದ ಖಾಸಗಿ ಇಂಜನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಇದುವರೆಗೆ ಇದ್ದ ಕಡಿಮೆ ಶುಲ್ಕದ 'ಉಚಿತ ಸೀಟು' ಇನ್ನು ಮುಂದೆ ಇಲ್ಲ. ಎಲ್ಲವೂ ಪಾವತಿ ಸೀಟು.



ನೀವು 4 ಎಕರೆ ಹೊಲದ ಸಣ್ಣ ರೈತರೇ, 2 ಎಕರೆ ಗದ್ದೆಯನ್ನು ಗೇಣಿಗೆ ಮಾಡುವವರೇ, ಕೂಲಿಕಾರರೇ, ಸಣ್ಣ ಪುಟ್ಟ ನೌಕರಿ, ವ್ಯಾಪಾರ ಮಾಡುವವರೇ ಕಾರ್ಮಿಕರೇ, ಎಂದಾದರೂ ನಿಮ್ಮ ಮಕ್ಕಳು ತಾಂತ್ರಿಕ ವೈದ್ಯಕೀಯ ಶಿಕ್ಷಣಕ್ಕೆ ಹೋಗಬೇಕೆಂದು ಕನಸು ಕಂಡಿದ್ದೀರಾ? ಈಗ ಹಾಗೇ ಯೋಚಿಸಲೂ ಹೋಗಬೇಡಿ. ಏಕೆಂದರೆ, ತಾಂತ್ರಿಕ ವೈದ್ಯಕೀಯ ಶಿಕ್ಷಣಕ್ಕೆ ನಿಗದಿಪಡಿಸಿರುವ ಶುಲ್ಕ ಕೇಳಿದರೆ ನಿಮ್ಮ ಹೃದಯ ಒಡೆದೀತು. ನೀವು ಈ ಕಾಲೇಜುಗಳ ಕಡೆ ತಲೆ ಹಾಕಿ ಮಲಗಲೂ ಬೇಡಿ.

ವೈದ್ಯಕೀಯಕ್ಕೆ ವಾರ್ಷಿಕ 1.90 ಲಕ್ಷ ರೂ. ಶುಲ್ಕ, ದಂತ ವೈದ್ಯಕೀಯಕ್ಕೆ ವಾರ್ಷಿಕ 1.10 ಶುಲ್ಕ, ತಾಂತ್ರಿಕ ವಿಭಾಗಕ್ಕೆ ವಾರ್ಷಿಕ 36 ಸಾವಿರ.


ರೈತ ಕೂಲಿಕಾರರ ಮಕ್ಕಳಿರಲಿ, ಅವರು Class I ದರ್ಜೆಯ ಅಧಿಕಾರಿಯೇ ಇರಲಿ, ಬ್ಯಾಂಕ್ ಮೇನೇಜರ್, ಕಾಲೇಜು ಪ್ರಾಂಶುಪಾಲರೇ ಇರಲಿ, ಅವರಿಗೆ ಸಂಬಳವಲ್ಲದೆ ಇತರ ಮೂಲದ ದೊಡ್ಡ ಆದಾಯವಿಲ್ಲದಿದ್ದಲ್ಲಿ ತಮ್ಮ ಮಕ್ಕಳನ್ನು ವೈದ್ಯಕೀಯ, ದಂತ ವೈದ್ಯಕೀಯ ಕಾಲೇಜಿಗೆ ಕಳಿಸಲಾಗದು. ಇನ್ನು ಸಾಮಾನ್ಯ ಜನರ ಪಾಡೇನು? ಈ ದೇಶದ ಜನರ ಬದುಕು ಬವಣೆ, ದೇಶದ ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳ ಪರಿವೇ ಇಲ್ಲದೆ, ನ್ಯಾಯಾಲಯಗಳೆಂಬ ದಂತ ಗೋಪುರಗಳಲ್ಲಿ ಕುಳಿತು ಪುಂಖಾನು ಪುಂಖವಾಗಿ ತೀರ್ಪುಗಳನ್ನು ಬರೆಯುತ್ತಿರುವ ನಮ್ಮ ಘನ ನ್ಯಾಯಾಂಗದ ಪಂಡಿತೋತ್ತಮ ನ್ಯಾಯವೇತ್ತರುಗಳು, ಖಾಸಗಿ ಶಿಕ್ಷಣ ಸಂಸ್ಥೆಗಳು ಹೀಗೆ ವಿದ್ಯಾರ್ಥಿ ಪೋಷಕರ ಚರ್ಮ ಸುಲಿಯಬಹುದೆಂಬ ತೀರ್ಪು ಬರೆಯುತ್ತಿದ್ದಾರೆ. ಆಳುವ ನಮ್ಮ ಪ್ರಭುಗಳು ಹರ್ಷಚಿತ್ತರಾಗಿ ಫರ್ಮಾನುಗಳನ್ನು ಹೊರಡಿಸುತ್ತಿದ್ದಾರೆ. ಸುಪ್ರಿಂ ಕೋರ್ಟ್ ಖಾಸಗಿ ಕಾಲೇಜುಗಳನ್ನು ನಿಯಂತ್ರಿಸುವ ಹಕ್ಕು ಸರ್ಕಾರಕ್ಕಿಲ್ಲ ಎಂದಿದೆ. ಬಿಜೆಪಿ ನೇತೃತ್ವ ಕೇಂದ್ರ ಸರ್ಕಾರ ಖಾಸಗಿ ಕಾಲೇಜುಗಳ ಸಾಮಾಜಿಕ ನಿಯಂತ್ರಣಕ್ಕೆ ಪೂರಕವಾಗಿ ಕೇಂದ್ರೀಯ ಶಾಸನ ತರುವ ಬದಲು, ಖಾಸಗಿ ಕಾಲೇಜುಗಳಲ್ಲಿ ಉಚಿತ ಸೀಟು ಕಿತ್ತೆಸೆಯಿರಿ, ಸಮಾನ ಶುಲ್ಕ ಸ್ವರೂಪ ನಿಗದಿ ಮಾಡಿ ಎಂದು ಎಲ್ಲಾ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ಹೊರಡಿಸಿದೆ. ನಮ್ಮ ರಾಜ್ಯ ಸರ್ಕಾರದ ಮಂತ್ರಿವರ್ಯರು ಪ್ರಸನ್ನವದನರಾಗಿ ಅದನ್ನೇ ಮಾಡಿದ್ದಾರೆ. ಚುನಾಯಿತ ಸರ್ಕಾರಗಳು ಮಾಡಬೇಕಾದ ಕೆಲಸವನ್ನು ಇಂದು ನ್ಯಾಯಾಲಯಗಳು ಆಕ್ರಮಿಸುತ್ತಾ 'ನ್ಯಾಯಾಂಗ ಆಡಳಿತ'ದ ಮಜಲು ಆರಂಭವಾದಂತಿದೆ. ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯಕ್ಕೆ ಕುತ್ತು ಬರುತ್ತಿದೆ.

ರಾಜ್ಯದಲ್ಲಿ ಮೇಲೆ ಹೇಳಿದ ವೃತ್ತಿಶಿಕ್ಷಣ ಶುಲ್ಕ ಸ್ವರೂಪವನ್ನು ನಿಗದಿಪಡಿಸಿದ್ದು ರಾಜ್ಯದ ಉಚ್ಚ ನ್ಯಾಯಾಲಯ. ಅದನ್ನು ರಾಜ್ಯ ಸರ್ಕಾರ ಜಾರಿಗೊಳಿಸಲು ಹೊರಟಿದೆ. ತಾಂತ್ರಿಕ-ವೈದ್ಯಕೀಯ ಶಿಕ್ಷಣದ ಶುಲ್ಕ ನಿಗದಿಪಡಿಸುವ ಅಧಿಕಾರ ಮತ್ತು ಅರ್ಹತೆ ನ್ಯಾಯಾಲಯಕ್ಕಿದೆಯೇ? ಈ ವಿಚಾರವನ್ನು ನಿರ್ಣಯಿಸುವ ನಮ್ಮ ನ್ಯಾಯಾದೀಶರುಗಳ ಶೈಕ್ಷಣಿಕ ಹಾಗೂ ಸಂವಿಧಾನಿಕ ಅರ್ಹತೆ ಏನು ಎಂಬ ಮೂಲಭೂತ ಪ್ರಶ್ನೆ ಈಗ ಎದುರಾಗಿದೆ.

ಎಸ್‌ಎಫ್‌ಐ ಪ್ರತಿಭಟನೆ - ಎಬಿವಿಪಿ ಕಪಟ ನಾಟಕ

ಸಂಘ ಪರಿವಾರದ ವಿದ್ಯಾರ್ಥಿ ರಂಗ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಪ್ರತಿಭಟನೆಯ ಕಪಟ ನಾಟಕವನಾಡುತ್ತಿದೆ. ಸಮಾನ ಶಿಕ್ಷಣ ಶುಲ್ಕ ಎಂಬ ಕೇಂದ್ರ ಸರ್ಕಾರದ ನಿರ್ದೇಶನದ ಆಧಾರದಲ್ಲಿ ಈ ದುಬಾರಿ ಶುಲ್ಕ ನಿಗದಿಯಾಗಿದೆ. ಆದರೆ ಎಬಿವಿಪಿ, ಈ ಬಗ್ಗೆ ಚಕಾರವೆತ್ತದೆ ಬರಿಯ ರಾಜ್ಯ ಸರ್ಕಾರವನ್ನು ದೂರುತ್ತಿದೆ. ಜುಲೈ 10 ರಂದು ಬೆಂಗಳೂರಿನ ಸಿಇಟಿ ಕೇಂದ್ರದ ಮುಂದೆ ಸೇರಿ ಎಂದಿನ ತಮ್ಮ ಗೂಂಡಾ ಸಂಸ್ಕೃತಿ ಆಧಾರದಲ್ಲಿ ಕಛೇರಿಗೆ ಕಲ್ಲುತೂರಿ, ದಾಂಧಲೆ ಮಾಡಿ ವಿದ್ಯಾರ್ಥಿಗಳ ಮೇಲೆ ಲಾಠಿ ಚಾರ್ಜ್ ಮಾಡಿಸಿ ಪ್ರಚಾರ ಗಿಟ್ಟಿಸಿಕೊಳ್ಳುವ ತಂತ್ರ ನಡೆಸಿದ್ದಾರೆ. ಬೆಂಗಳೂರು ನಗರದಲ್ಲಿ ಜೂನ್ 25, ರಂದು ಹಾಗೂ ಜುಲೈ 10 ರಂದು ಈ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಶಿಕ್ಷಣ ವಿರೋಧಿ ನಿಲುವನ್ನು ಖಂಡಿಸಿ ಮುಖ್ಯಮಂತ್ರಿಗಳ ಮನೆ ಮುಂದೆ ಎಸ್.ಎಫ್.ಐ. ಪ್ರತಿಭಟನೆ ನಡೆಸಿದೆ. ಮಂಡ್ಯ-ಕೋಲಾರ ತುಮಕೂರು-ಹಾಸನ-ಹಾವೇರಿ- ಗದಗ್ ಬಳ್ಳಾರಿ -ಉತ್ತರ ಕನ್ನಡ-ಕೊಪ್ಪಳ- ಗುಲ್ಬರ್ಗಾ-ಬೀದರ್ ಹೀಗೆ ರಾಜ್ಯದ ಮೂಲೆ ಮೂಲೆಗಳಲ್ಲಿ ಸಹಸ್ರಾರು ಮಂದಿ ವಿದ್ಯಾರ್ಥಿಗಳು ಶುಲ್ಕ ಏರಿಕೆ ಬಸ್ ದರ

ಪುಟ 10 ಕ್ಕೆ



ಬಿಸಿಯೂಟದ ಅವಾಂತರಗಳು

ಕರ್ನಾಟಕ ಸರಕಾರ ಅಕ್ಷರದಾಸೋಹದ ಜೊತೆಗೆ ಸರಕಾರಿ ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಹೆಚ್ಚಿಸಲು, ಆಕರ್ಷಿಸಲು ಅನ್ನದಾಸೋಹ ಜಾರಿಗೆ ತಂದಿದೆ. ಈ ಯೋಜನೆ 1 ರಿಂದ 5 ನೇ ತರಗತಿಗಳ ಮಕ್ಕಳಿಗೆ ಮಾತ್ರ, ಈ ಹಿಂದೆ ತಿಂಗಳಿಗೆ 3 ಕೆ.ಜಿ ಅಕ್ಕಿ ನೀಡಲಾಗುತ್ತಿತ್ತು. ಕಳೆದ ವರುಷವೇ ಹೈದ್ರಾಬಾದ್ ಕರ್ನಾಟಕದ ಜಿಲ್ಲೆಗಳಾದ ಬೀದರ್, ಗುಲಬರ್ಗಾ, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ಮುಂಬೈ ಕರ್ನಾಟಕದ ಜಿಲ್ಲೆಗಳಾದ ಬೀಜಾಪುರ, ಬಾಗಲಕೋಟೆ ಜಿಲ್ಲೆಗಳಲ್ಲಿ ಜಾರಿಗೆ ತಂದಿದೆ. ಸದ್ಯ ಈ ವರ್ಷ ಉಳಿದ 20 ಜಿಲ್ಲೆಗಳಲ್ಲಿ ಈ ಯೋಜನೆ ಜಾರಿಗೆ ಬಂದಿದೆ.

ಈ ಯೋಜನೆ ಎಸ್.ಎಂ.ಕೃಷ್ಣರವರ ಮಹತ್ವಾಕಾಂಕ್ಷೆ ಯೋಜನೆ ಎಂದು ಹೇಳಲಾಗುತ್ತಿದೆ. ಆದರೆ ಇದು ಜಾರಿಯಾಗುತ್ತಿರುವ ಪರಿಯಾದರೂ ಎಂತಹದ್ದು. ಇದಕ್ಕೆ ಒದಗಿಸುತ್ತಿರುವ ಹಣದ ಮೂಲವಾದರೂ ಎಂತಹದ್ದು, ಇದಕ್ಕೆ ಬೇಕಾದ ಧವಸ ಧಾನ್ಯ, ಗ್ಯಾಸ್, ಒಲೆ, ಪಾತ್ರೆಗಳು ಅಡುಗೆ ಮಾಡುವವರ ನೇಮಕಾತಿ, ನೀರಿನ ವ್ಯವಸ್ಥೆ. ಇದರಲ್ಲಿ ನಡೆದಿರುವ ಭ್ರಷ್ಟಾಚಾರ, ಇವುಗಳನ್ನು ಸರಬರಾಜು ಮಾಡುವ ಗುತ್ತಿಗೆದಾರರು ಕೊಡುವ ಕೋಟಿಗಟ್ಟಲೆ ಕಮಿಷನ್, ಏಕೆಂದರೆ ಈ ಯೋಜನೆಗೆ ಮೀಸಲಿಟ್ಟ ಹಣ 200 ಕೋಟಿ. ಮಂತ್ರಿಗಳಿಗೆ, ಅಧಿಕಾರಿಗಳಿಗೆ ಹಬ್ಬ ಅಲ್ಲವೆ, ಬಿಸಿ ಊಟ ಮಾಡಿ ವಾಂತಿಭೇದಿಯಿಂದ ಆಸ್ಪತ್ರೆ ಸೇರಿದ ಮಕ್ಕಳ ಪಾಲಕರ, ಶಿಕ್ಷಕರ ಪ್ರತಿಕ್ರಿಯೆಗಳು ಈ ವರದಿಯಲ್ಲಿವೆ.

ಕೃಷ್ಣರವರ ಮಹಾತ್ವಾಕಾಂಕ್ಷೆ ಯೋಜನೆಯಂತೆ!

ಮಧ್ಯಾಹ್ನದ ಬಿಸಿ ಊಟದ ಯೋಜನೆ ಕೃಷ್ಣಾರವರ ಮಹಾತ್ವಾಕಾಂಕ್ಷೆ ಯೋಜನೆ ಯಂತೆ. ಇದಕ್ಕೆ ಹಣ ಒದಗಿಸುತ್ತಿರುವ ಮೂಲವಾದರೂ ಎಂತಹದ್ದು. ಬಡವರನ್ನು ಜೂಜಾಟ ಆಡಲು ಹಚ್ಚಿ ಹಣ ಕಳೆದುಕೊಂಡ ಪ್ಲೇವಿನ್ ಆನ್‌ಲೈನ್‌ಲಾಟರಿ ಆದಾಯದಿಂದ ಇದಕ್ಕೆ ಖರ್ಚು ಮಾಡಲಾಗುತ್ತದೆ.

ಬಡವರ ಹಣ ಕಸಿದುಕೊಂಡು ಅವರ ಮಕ್ಕಳಿಗೆ ಊಟ ಹಾಕುವುದು ಕೃಷ್ಣರವರ ಮಹಾತ್ವಾಕಾಂಕ್ಷೆ ಯೋಜನೆ ಹೇಗಿದೆ ನೋಡಿ. ಶ್ರೀಮಂತರು, ಬಂಡವಾಳಿಗರು ತೆರಿಗೆ ವಂಚಿಸಿ ಬಚಾವ್ ಮಾಡಿಟ್ಟ, ಕಪ್ಪುಹಣಕ್ಕೆ ರಿಯಾಯತಿ ಕೊಟ್ಟು ಕಾಂಗ್ರೆಸ್ ಪಕ್ಷದ ಮೂಲ ಸಂಸ್ಕೃತಿಗೆ ಅಪಚಾರವೆಸಗದಂತೆ ಹಾಗೂ ಬಂಡವಾಳಶಾಹಿ, ಭೂಮಾಲಿಕರ ಪಕ್ಷಪಾತಿ ಎಂಬ ಆಶಯ ಎತ್ತಿಹಿಡಿದಿದ್ದಾರೆ. ಇದು ಒಂದು ಕಡೆಯ ಕಥೆ!

ಯೋಜನೆಯ ಅಗತ್ಯ

ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದರೆ ರಾಜ್ಯದಲ್ಲಿ ಶೇ.70 ರಷ್ಟಿರುವ ಗ್ರಾಮೀಣ ಪ್ರದೇಶದ ಕೃಷಿ ಕಾರ್ಮಿಕರ, ಬಡರೈತರ ಮಕ್ಕಳಿಗೆ ತುಂಬಾ ಉಪಯೋಗವಾಗಲಿದೆ. ಬೆಳಿಗ್ಗೆಯಿಂದ ಸಂಜೆವರೆಗೆ ಹೊಲಗದ್ದೆಗಳಲ್ಲಿ ದುಡಿಯಲಿಕ್ಕೆ ಹೋದಾಗ ಅವರ ಮಕ್ಕಳಿಗೆ ಮಧ್ಯಾಹ್ನ ಊಟ ಸಿಗುವುದಿಲ್ಲ. ಬಡತನದ ಕಾರಣದಿಂದ ಶಾಲೆ ಬಿಡಿಸುವ ಪ್ರಕರಣಗಳೇ ಜಾಸ್ತಿ. ತಮ್ಮ ಜೊತೆ ಕೂಲಿನಾಲಿ ಮಾಡಿಕೊಂಡಿರಲು ತಮ್ಮ ಆದಾಯ ಹೆಚ್ಚಿಸಿಕೊಳ್ಳಲು ಸಾವುಕಾರರ ಮನೆಗಳಲ್ಲಿ ದನಕಾಯುವ ಕೆಲಸಕ್ಕೆ ಕಳಿಸುವ ಪ್ರಕರಣಗಳು ಜಾಸ್ತಿ. ಹೀಗಿರುವಾಗ ಮಕ್ಕಳಿಗೆ ಮಧ್ಯಾಹ್ನದ ಊಟ ಶಾಲೆಯಲ್ಲೇ ಸಿಗುತ್ತದೆ ಎಂಬ ವಿಶ್ವಾಸದಿಂದ ಮಕ್ಕಳನ್ನು ಕಳಿಸುತ್ತಾರೆ.

ಬಿಸಿಯೂಟದ ಯೋಜನೆ ವಿಷದೂಟವಾದಾಗ, ನರಗುಂದಕ್ಕೆ ಮುಖ್ಯಮಂತ್ರಿ ಕೃಷ್ಣ ಓಡಿದರು. ಈ ಭೇಟಿಯ ನಿಜ ಉದ್ದೇಶ ಮತ್ತು ಯೋಜನೆಯ ಅವಾಂತರಗಳನ್ನು ಅಲ್ಲಿಗೆ ಭೇಟಿ ನೀಡಿ, ವರದಿ ಮಾಡಿದ್ದಾರೆ

ಅಬ್ದುಲ್ ರಜಾಕ್ ಮುಲ್ಲಾ

ವಸ್ತುಗಳನ್ನು ಸರಬರಾಜು ಮಾಡಲು ಖಾಸಗಿಯವರಿಗೆ ಗುತ್ತಿಗೆ.

ಅಡುಗೆ ತಯಾರಿಸಲು ಬೇಕಾದ ಗ್ಯಾಸ್, ಒಲೆ, ಪಾತ್ರೆಗಳನ್ನು ಎಲ್ಲಾ ಶಾಲೆಗಳಿಗೆ ಒದಗಿಸಲು ಮತ್ತು ರೇಷನ್ ಒದಗಿಸಲು ಖಾಸಗೀಯವರಿಗೆ ಗುತ್ತಿಗೆ ನೀಡಲಾಗಿದೆ. ಇದರಿಂದ ಮಂತ್ರಿಗಳು, ಅಧಿಕಾರಿಗಳು ಲಕ್ಷಗಟ್ಟಲೆ ಕಮಿಷನ್ ಪಡೆಯಲಿದ್ದಾರೆ.

ಗ್ಯಾಸ್ ಒದಗಿಸಲು ಒಬ್ಬರಿಗೆ, ಒಲೆ ಒದಗಿಸಲು ಒಬ್ಬರಿಗೆ ಪಾತ್ರೆಗಳನ್ನು ಒದಗಿಸಲು ಇನ್ನೊಬ್ಬರಿಗೆ, ಪಾತ್ರೆಗಳು ಗುಜರಾತ್‌ದಿಂದ ಬರಲಿವೆ ಯಂತೆ. ಇನ್ನೂ ರೇಷನ್ ಒದಗಿಸಲು ಸ್ವಯಂ ಸೇವಾ ಸಂಸ್ಥೆಗಳಿಗೆ ಕೊಡಲಾಗಿದೆ. ಈ ಸಂಸ್ಥೆಗಳು ಸರಕಾರದ ಹಣ ನುಂಗುವ ಉದ್ದೇಶದಿಂದಲೇ ಹುಟ್ಟಿಕೊಂಡಿವೆ ಎಂಬುದು ಜಗಜ್ಜಾಹೀರು.


ಈ ಯೋಜನೆಗೆ ಒದಗಿಸಲಾಗುತ್ತಿರುವ ಅಕ್ಕಿ ಬಹಳ ಕಳಪೆ ಮಟ್ಟದ್ದಾಗಿದೆ. ಕೇಂದ್ರ ಸರಕಾರ 6-7 ವರ್ಷಗಳಿಂದ ಸಂಗ್ರಹಿಸಿ ಇಟ್ಟಿರುವುದನ್ನು ಹಾಗೂ ವಿಷಪೂರಿತವಾಗಿರುವುದನ್ನು ಒದಗಿಸುತ್ತಿದೆ. ಇದನ್ನು ರಾಜ್ಯ ಸರಕಾರ ಪ್ರಸಾದವೆಂದು ಕಣ್ಣು ಮುಚ್ಚಿ ಸ್ವೀಕರಿಸುತ್ತಿದೆ. ಇದನ್ನೇ ಎಲ್ಲಾ ಶಾಲೆಗಳಿಗೆ ಒದಗಿಸುತ್ತಿದೆ. ಕಳೆದ ಮೂರ್‍ನಾಲ್ಕು ವರ್ಷಗಳಿಂದ ಪಡಿತರ ಬೆಲೆಯನ್ನು ಕೇಂದ್ರ ಸರಕಾರ ಏರಿಸಿದ್ದರಿಂದ ಜನ ಕೊಂಡುಕೊಳ್ಳುವುದನ್ನೇ ನಿಲ್ಲಿಸಿದ್ದಾರೆ. ಲಕ್ಷಗಟ್ಟಲೆ ಟನ್ ಆಹಾರ ಧಾನ್ಯ ಗೋಡೌನ್‌ಗಳಲ್ಲಿ ಕೊಳೆಯುತಿದೆ. ಇದನ್ನೇ ಅರಬ್ ದೇಶಕ್ಕೆ ಅಗ್ಗದರದಲ್ಲಿ ಕಳಿಸಿ ಅವರಿಂದ ತಿರಸ್ಕರಿಸಿ ಮುಖಕ್ಕೆ ಉಗಿಸಿಕೊಂಡ ನಂತರ ಬೇರೆ ದಾರಿ ಕಾಣದೆ ನಮ್ಮ ದೇಶದಲ್ಲಿ ಕೆಳಮಟ್ಟದ ಜೀವನ ಸಾಗಿಸುತ್ತಿರುವ ಬಡ ಮಕ್ಕಳಿಗೆ ಏಕೆ ಒದಗಿಸಬಾರದೆಂದು ವಿಚಾರ ಹೊಳೆದಿದ್ದೇ ತಡ, ಹೆಸರು, ಓಟು ಎಲ್ಲಾ ಬರುತ್ತದೆ ಎಂದು ಭ್ರಮಿಸಿ ಒದಗಿಸಲಾಗುತ್ತಿದೆ. ಆದರೆ ಇಂತಹ ಯೋಜನೆಯನ್ನು ಇದರ ಅವಾಂತರವನ್ನು ಪ್ರತಿಭಟಿಸಲು, ತಿರಸ್ಕರಿಸಲು ಪ್ರಾರಂಭಿಸಿದ್ದಾರೆ. ಇಂತಹ ಅಕ್ಕಿ ಸರಬರಾಜನ್ನು ಸಚಿವ ಅನಂತಕುಮಾರ್ ಹೆಗ್ಗಳಿಕೆಯಿಂದ ಹೇಳುತ್ತಿದ್ದಾರೆ.

ಯೋಜನೆಯ ರೂಪರೇಷೆ

ರಾಜ್ಯದ 1 ರಿಂದ 5ನೇ ತರಗತಿಯವರೆಗೆ ಓದುತ್ತಿರುವ ಪ್ರತಿ ಮಗುವಿಗೆ 100 ಗ್ರಾಂ ಅಕ್ಕಿ, 20 ಗ್ರಾಂ ಬೇಳೆ, 2 ಗ್ರಾಂ ಎಣ್ಣೆ ಇದಕ್ಕೆ ತಕ್ಕಹಾಗೆ ತರಕಾರಿ ಎಂದು ಸರಕಾರ ಆದೇಶ ಹೊರಡಿಸಿದೆ. ಆಯಾ ಶಾಲೆಯ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಅಡುಗೆ ಮಾಡುವವರನ್ನು ನೇಮಿಸಿಕೊಳ್ಳಲಾಗುತ್ತದೆ. ಒಂದು ನೂರು ಮಕ್ಕಳಿಗೆ ಇಬ್ಬರು ಎರಡು ನೂರು ಮಕ್ಕಳಿಗೆ ಮೂರು ಜನ, ಮೂರುನೂರಕ್ಕೆ ಮೇಲ್ಪಟ್ಟ ಮಕ್ಕಳ ಸಂಖ್ಯೆಗೆ ನಾಲ್ಕು ಜನವೆಂದು ನೇಮಿಸಲಾಗುತ್ತದೆ. ಇವರಲ್ಲಿ ಒಬ್ಬರನ್ನು ಸೂಪರ್‌ವೈಜರ್ ಎಂದು ನೇಮಿಸಲಾಗುತ್ತದೆ. ಇವರಿಗೆ ಯಾವದೇ ತರಬೇತಿ ಅಥವಾ ಅನುಭವ ಬೇಕಾಗಿಲ್ಲ. ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಗ್ಯಾಸ್, ಒಲೆ, ಪಾತ್ರೆಗಳನ್ನು ಒದಗಿಸಲಾಗುತ್ತದೆ.

ಅಸ್ತವ್ಯಸ್ತತೆ - ಅವಾಂತರಗಳು :

ಅಡುಗೆ ಮಾಡು ವವರನ್ನು ಸ್ಥಳೀಯವಾಗಿ ಗ್ರಾಮಪಂಚಾಯತ್, ಶಾಲಾ ಸುಧಾರಣಾ ಸಮಿತಿ (S.D.M.C) ಈ ನೇಮಕಾತಿಗಳನ್ನು ಮಾಡಿಕೊಳ್ಳುತ್ತದೆ. ಇವರಲ್ಲಿ ಒಬ್ಬರಾದರೂ ಎಸ್.ಸಿ. ಅಥವಾ ಎಸ್.ಟಿ ಗುಂಪಿನವರಾಗಿರ ಬೇಕು. ಗ್ರಾಮ ಪಂಚಾಯತ್ ಸದಸ್ಯರ ಮತ್ತು ಎಸ್.ಡಿ.ಎಂ.ಸಿ. ಸದಸ್ಯರ ಮಧ್ಯ ತಮಗೆ ಬೇಕಾದವರನ್ನು ನೇಮಕಾತಿ ಮಾಡಿಕೊಳ್ಳಲು, ತಮ್ಮತಮ್ಮ ಸ್ವಹಿತಾಸಕ್ತಿ ಕಾಪಾಡಿಕೊಳ್ಳಲು, ಸಂಘರ್ಷಗಳು ಗಲಾಟೆಗಳು ನಡೆಯುತ್ತಿವೆ. ಇತ್ತೀಚೆಗೆ ಪತ್ರಿಕೆಗಳ ವರದಿಯಂತೆ ಕಡೂರು ತಾಲೂಕಿನಲ್ಲಿ ಇದಕ್ಕಾಗಿ ಬಡಿದಾಡಿ ಕೊಲೆಯಾಗಿ ಹೋಗಿದೆ. ಇನ್ನೂ ಸರಕಾರದ ನಿರ್ದೇಶನದಂತೆ ಎಸ್.ಸಿ. ಅಥವಾ ಎಸ್.ಟಿ ಗುಂಪಿನವರನ್ನು ಆಯ್ಕೆ ಮಾಡುವುದು ದೂರವೇ ಉಳಿಯಿತು. ಗ್ರಾಮಾಂತರ ಪ್ರದೇಶಗಳಲ್ಲಿ ಇನ್ನೂ ಬಲವಾಗಿರುವ ಕ್ರೂರ ಅಸ್ಪೃಶ್ಯತೆ ಆಚರಣೆ ಇರುವಾಗ ಇವರು ತಯಾರಿಸುವ ಅಡುಗೆಯನ್ನು ಊಟ ಮಾಡಲು ಮೇಲ್ಜಾತಿಯ ಮಕ್ಕಳ ಪಾಲಕರು ನಿರಾಕರಿಸಿದ್ದಾರೆ. ಸುಮಾರು ಕಡೆ ಈ ವರ್ಗದ ಜನ ಆಯ್ಕೆಯಾಗಿರುವುದಿಲ್ಲ ಕೆಲವು ಕಡೆ ಅಧಿಕಾರಿಗಳು ನೇಮಪಾಲನೆಗಾಗಿ ಒತ್ತಾಯ ಪೂರ್ವಕವಾಗಿ ಈ ಜನರನ್ನು ಆಯ್ಕೆ ಮಾಡಿದ್ದರಿಂದ



ಅಲ್ಲಿಯ ಜನ ಈ ಯೋಜನೆಯನ್ನೇ ಬಹಿಷ್ಕರಿಸಿದ್ದಾರೆ.

ಒಂದೇ ಗ್ರಾಮದಲ್ಲಿರುವ ಎರಡು, ಮೂರು ಶಾಲೆಗಳನ್ನು ಸೇರಿಸಿ ಒಂದೇ ಕಡೆ ಅಡುಗೆ ತಯಾರಿಸಲಾಗುತ್ತದೆ. ಊಟಕ್ಕಾಗಿ ಮಕ್ಕಳನ್ನು ಒಂದೇ ಕಡೆ ಸೇರಿಸುವ, ಊಟ ಬಡಿಸುವ ... ನಡೆದಿದೆ. ಇದನ್ನು ಜಾರಿಗೆ ತರಲು ಕೆಲ... ಶಿಕ್ಷಕರು ಪರದಾಡುತ್ತಿದ್ದಾರೆ. ಕೆಲವು ಶಾಲೆ... ಕಿಲೋಮಿಟರ್ ಕೆಲವು ಒಂದು ಕಿಲೋಮಿ... ವ್ಯಾಪ್ತಿ ಒಳಗೆ ಬರುತ್ತಿರುವಲ್ಲಿ ಒಂದೇ ಕಡೆ ... ವ್ಯವಸ್ಥೆ ನಡೆದಿದೆ. ಇದಕ್ಕಾಗಿ ಗಂಟೆಗಟ್ಟಲೆ ಸ... ವ್ಯರ್ಥವಾಗುತ್ತಿದೆ. 30 ನಿಮಿಷದ ಊ... ವಿರಾಮ ಒಂದು ಗಂಟೆಗೆ ಮಿಕ್ಕು ... ವ್ಯಯವಾಗುತ್ತಿದೆ.

ಶುದ್ಧವಾದ ನೀರಿನ ವ್ಯವಸ್ಥೆ ಇರುವ... ಸರಕಾರ ಇದಕ್ಕಾಗಿ ಪ್ರತಿ ಗ್ರಾಮ ಪಂಚಾ... ಸಾವಿರ ರೂಪಾಯಿ ಬಿಡುಗಡೆ ಮಾಡಿದೆ ಹೇಳುತ್ತಿದೆ. ಆದರೆ ಅದು ... ತಲುಪಿರುವುದಿಲ್ಲ. ಬಿಸಿ ಊಟ ಮಾಡಿದ ... ಅಸ್ವಸ್ಥತೆಗೆ ವಿಷಪೂರಿತ ಧಾನ್ಯ ಪೂರೈಕೆ ... ಶುದ್ಧವಾದ ನೀರಿನ ವ್ಯವಸ್ಥೆ ಇರಲಾರದ್ದು ... ಕಾರಣವಾಗಿದೆ.


ಬಿಸಿ ಊಟದ ಯೋಜನೆ ಪ್ರಾರಂ... ಒಂದು ವಾರ ಕಳೆದರೂ ಗ್ಯಾಸ್, ಒಲೆ, ಪಾ... ಸುಮಾರು ಶಾಲೆಗಳಿಗೆ ಪೂರೈಕೆಯಾಗಿರು... ಇನ್ನೂ ಶುದ್ಧವಾದ ನೀರಿನ ವ್ಯವಸ್ಥೆಯ... ಕೇಳುವುದೇ ಬೇಡ, ಹೇಗಿದೆ ನೋಡಿ ಕೃ... ಮಹತ್ವಾಕಾಂಕ್ಷೆ ಯೋಜನೆ.

ಬಿಸಿ ಊಟ ಮಾಡಿದ ಮಕ್ಕಳು ಆಸ್ಪ...

ಇಷ್ಟೆಲ್ಲಾ ಅವಾಂತರದ ಮಧ್ಯ ಪ್ರಾರಂ... ಬಿಸಿ ಅನ್ನ ತಿಂದ 10 ವರುಷದ ... ಸಾವಿರಾರು ಮಕ್ಕಳು ವಾಂತಿಬೇದಿಯಿಂದ ... ಸೇರಿದ್ದಾರೆ. ನರಗುಂದ, ನವಲಗುಂದ, ... ರೋಣ, ದಾವಣಗೆರೆ, ಕಡೂರು ಮ... ನೂರಾರು ಶಾಲೆಗಳಲ್ಲಿ ಊಟ ಮಾಡಿ... ವಾಂತಿಬೇದಿಗೆ ಒಳಗಾಗುತ್ತಿದ್ದಾರೆ. ರೊಚ್ಚಿ... ಪ್ರತಿಭಟನೆಗೆ ಇಳಿದಿದ್ದಾರೆ. 3-6-200... ನರಗುಂದ 2ನೇ ನಂಬರ್ ಶಾಲೆಯಲ್ಲಿ ... ಮಾಡಿದ ನೂರಾರು ಮಕ್ಕಳು ಆಸ್ಪತ್ರೆ ಸೇ... ವಿಷಯ ತಿಳಿದ ಪಾಲಕರು, ಸಾರ್ವ... ಸುಮಾರು 4 ಸಾವಿರದಷ್ಟಿದ್ದ ಜನ ರೊ... ಅಡುಗೆ ಮಾಡುವವರನ್ನು, ಮುಖ್ಯೋಪಾ... ರನ್ನು ಥಳಿಸಿದ್ದಾರೆ. ಅಡುಗೆ ಮಾಡಿದ ಪಾ... ಹೊತ್ತೊಯ್ದು ತಹಶೀಲ್ದಾರ ಕಚೇರಿ ... ಪ್ರತಿಭಟಿಸಿ ತಹಶೀಲ್ದಾರರಿಗೆ ಈ ... ತಿನ್ನಿಸಿದ್ದಾರೆ. ಊಟ ಮಾಡಿದ ತಹಶೀ... ನಿಮಿಷಗಳಲ್ಲೇ ಅಸ್ವಸ್ಥಗೊಂಡ... ತಹಶೀಲ್ದಾರರನ್ನು ಜನ ಥಳಿಸಿದ್ದಾರೆ. ... ಧಾವಿಸಿದ ಪೊಲೀಸ್ ಪೇದೆಗಳನ್ನು ಇ... ಗಳನ್ನು ಥಳಿಸಿದ್ದಾರೆ. ಜನರನ್ನು ಚದುರಿಸ... ಚಾರ್ಜ್ ನಡೆದಿದೆ. 144 ಕಲಂ ಜಾರಿ... ನೂರಾರು ಜನರನ್ನು ಬಂಧಿಸಿ ಜೈಲಿಗೆ ...

ಇದೇ ರೀತಿ ರಾಜ್ಯದ ಇತರೆಡೆಗ... ಪ್ರತಿಭಟಿಸುತ್ತಿ ದ್ದಾರೆ. ಪ್ರತಿದಿನ ... ಮುಖ ಪುಟದ ಸುದ್ದಿಯಾ... ಟಿ.ವಿ.ಗಳಲ್ಲಿ ಬರುವ ... ವರದಿಗಳನ್ನು ನೋಡಿ... ಭಯಭೀತರಾಗಿ ತಮ್ಮ ಮ... ಬಿಸಿ ಊಟವೇ ಬೇಡ... ಹೇಳುತ್ತಿದ್ದಾರೆ. ಸರಕಾರದ... ಯಂತ್ರವೂ ಕೂಡಾ ಆದೇಶ ... ಘಟನೆ ನಡೆದ ಸ್ಥಳ, ತಾ... ಜಿಲ್ಲೆಗಳಲ್ಲಿ ತಾತ್ಕಾಲಿಕವಾಗಿ ಊಟ... ನಿಲ್ಲಿಸಲು ಆದೇಶಿಸುತ್ತಿದ್ದಾರೆ. ನರಗುಂ... ನೀಡಿದ್ದ ಕೃಷ್ಣರವರು ಬೇಕ... ಮುಂದುವರೆಸಲು ಬೇಡವಾದವರು ... ಸೂಚಿಸಿದ್ದಾರೆ. ಯಾರಿಗೂ ಒತ್ತಾಯ... ತಿಳಿಸಿದ್ದಾರೆ.

ಮುಂದಿ...



ಪತ್ರಿಕೋದ್ಯಮದ ವಂಚಕತನ

ಜಗತ್ತಿನ ವಿದ್ಯಮಾನಗಳನ್ನೆಲ್ಲಾ ಅಮೇರಿಕಾದ ಳುವ ವರ್ಗದ ದೃಷ್ಟಿಕೋನದಿಂದಲೇ ಚಿತ್ರಿಸುವ ನ್ಯೂಯಾರ್ಕ್ ಟೈಮ್ಸ್' ಪತ್ರಿಕೆ ಇತ್ತೀಚೆಗೆ ತಾನೇ ುದ್ದಿಗೆ ಗ್ರಾಸವಾಯಿತು. ಅದರ ವರದಿಗಳು ಸತ್ಯಕ್ಕೆ ೂರ ಮತ್ತು ಕಲ್ಪಿತವಾದಂತಹವು ಎಂಬ ವಾಸ್ತವ ಹಿರಂಗವಾಯಿತು. ಇದರಿಂದ ದೊಡ್ಡ ಾದ್ಧಾಂತವೇ ನಡೆಯಿತು. ಸಂಪಾದಕ ಮಂಡಳಿಯ ರಿಷ್ಠರು ರಾಜೀನಾಮೆ ನೀಡಬೇಕಾಯಿತು. ದರ ಬಗ್ಗೆ ಈಗಲೂ ಪುಟಗಟ್ಟಲೆ ಲೇಖನಗಳು, ಶ್ಲೇಷಣೆಗಳು ವಿಶ್ವದ ಮಾಧ್ಯಮಗಳಲ್ಲಿ ದಿನನಿತ್ಯ ಂಬಂತೆ ಪ್ರಕಟವಾಗುತ್ತಿವೆ. ಈ ನಡುವೆ ನ್ಯೂಯಾರ್ಕ್ ಟೈಮ್ಸ್' ಪತ್ರಿಕೆ ಸುಳ್ಳು ಮತ್ತು ಧಾರರಹಿತ ವರದಿಗಳಿಗೆ ಸಂಬಂಧಪಟ್ಟ ರದಿಗಾರರು/ ಅಂಕಣಕಾರರೇ ಕಾರಣ ಎಂದು ೆರಳು ತೋರಿಸಿ ನುಣುಚಿಕೊಳ್ಳುವ ಪ್ರಯತ್ನ ಡೆಸಿದೆ.

ಇರಾಕ್ ಕದನದ ಸಂದರ್ಭದಲ್ಲಿ ಪಾಶ್ಚಾತ್ಯ, ದರಲ್ಲೂ ಅಮೇರಿಕದ ಮಾಧ್ಯಮಗಳ ಪಾತ್ರ, ಶ್ವದಾದ್ಯಂತ ಟೀಕೆಗೆ ಗುರಿಯಾಗಿದೆ. ಭಾರತದ ತ್ರಿಕಾ ಮಾಧ್ಯಮ ಕೂಡಾ ಇದಕ್ಕಿಂತ ನ್ನವಾಗೇನಿಲ್ಲ. ಪಕ್ಷಪಾತರಹಿತ ಹಾಗೂ ವಸ್ತುನಿಷ್ಠ ತ್ರಿಕಾ ಧರ್ಮ ಪಾಲಿಸುವ ಸೋಗು ಹಾಕುತ್ತಲೇ ಳುವ ಜನರ ಮುಖವಾಣಿಗಳಾಗಿ ಮಾಧ್ಯಮಗಳು ರ್ತಿಸುತ್ತಿರುವುದು ಇಂದು ಗುಟ್ಟಾಗಿ ಉಳಿದಿಲ್ಲ.

ಮೈನ್‌ಸ್ಟ್ರೀಮ್ ಪತ್ರಿಕೆಯಲ್ಲಿ ಪ್ರಕಟವಾದ ತಮ್ಮ ೇಖನವೊಂದರಲ್ಲಿ ಮಾಧ್ಯಮಗಳ, ಅದರಲ್ಲೂ ತ್ರಿಕಾ ಮಾಧ್ಯಮದ, ಎಡಬಿಡಂಗಿತನವನ್ನು, ನವಿರೋಧಿ ನಿಲುವುಗಳನ್ನು, ಆಳುವ ವರ್ಗದ ರವಾದ ಚಿಂತನೆಗಳನ್ನು ಎಳೆಎಳೆಯಾಗಿ ಚ್ಚಿಡುವ ಅಮರ್ ಫರೂಕಿ, ಆಧಾರ ರೂಪದಲ್ಲಿ ನೇಕ ಘಟನೆಗಳು ಹಾಗೂ ಅವುಗಳನ್ನು ಮಾಧ್ಯಮ ತ್ರಿಸಿದ ರೀತಿಯನ್ನು ವಿವರಿಸುತ್ತಾ ಹೋಗುತ್ತಾರೆ.

ಈ ವರ್ಷದ ಪ್ರಾರಂಭದಲ್ಲಿ ದೇಶದ ಎರಡು ಮುಖ ಆಂಗ್ಲ ಪತ್ರಿಕೆಗಳಾದ 'ಹಿಂದೂಸ್ತಾನ್ ಮ್ಸ್' ಮತ್ತು 'ಟೈಮ್ಸ್ ಆಫ್ ಇಂಡಿಯಾ'ದ ಡುವೆ ಒಂದು ಸಮರವೇ ನಡೆಯಿತು. ಜವಾಬ್ದಾರಿ ಡವಳಿಕೆ ಎಂದರೆ ಹೇಗಿರಬೇಕು ಎಂಬ ಷಯದಲ್ಲಿ ಒಂದು ಇನ್ನೊಂದಕ್ಕೆ ಪಾಠ ಹೇಳುವ ಯಕ ನಡೆಸಿದವು. ಈ ಪ್ರಕ್ರಿಯೆಯಲ್ಲಿ ಒಳ್ಳೆಯ ಪತ್ರಿಕಾ ಧರ್ಮ ಎಂಬುದನ್ನು ವಿವರಿಸುವ ಪ್ರಯತ್ನವನ್ನೂ ಅವು ನಡೆಸಿದವು. ಅದರ ಜತೆಗೆ ತಾನೇ ಸರಿಯೆಂದು, ತಾನೇ ಶ್ರೇಷ್ಠ ಎಂದು ಎರಡೂ ಪತ್ರಿಕೆಗಳು ವಾದಿಸಿದವು. ಪರಿಣಾಮವಾಗಿ ಒಬ್ಬರ ಮೇಲೊಬ್ಬರು ಕೆಸರೆರಚುವ, ಹುಳುಕು ಬಯಲಿಗೆಳೆಯುವ ಕ್ರಿಯೆ ತೀವ್ರಗೊಂಡಿತು. 25-2-03 ರ 'ಟೈಮ್ಸ್ ಆಫ್ ಇಂಡಿಯಾ'ದ ಸಂಪಾದಕೀಯ ಅಂಕಣದಲ್ಲಿ ಬರೆಯುತ್ತಾ ಸಬೀನಾ ಸಹಗಲ್ ಸೈಕಿಯಾ ('ದೆಹಲಿ ಟೈಮ್ಸ್'ನ ಪುರವಣಿಯ ಸಂಪಾದಕಿ) 'ಹಿಂದೂಸ್ತಾನ್ ಟೈಮ್ಸ್' ಮೇಲೆ ಕೃತಿ ಚೌರ್ಯದ ಆಪಾದನೆ ಹೊರಿಸಿದ್ದೇ ಅಲ್ಲದೇ ಸಂಪಾದಕೀಯದ ವಿಶ್ವಾಸಾರ್ಹತೆ ಮತ್ತು ಉತ್ತಮ ಗುಣಮಟ್ಟದಿಂದಾಗಿಯೇ 'ಟೈಮ್ಸ್ ಆಫ್ ಇಂಡಿಯಾ' 'ಹಿಂದುಸ್ತಾನ್ ಟೈಮ್ಸ್'ನ್ನು ಮೀರಿ ಅಗ್ರಸ್ಥಾನಕ್ಕೆ ಬಂದಿದೆ. ಸತತ ಆವಿಷ್ಕಾರ ಮತ್ತು ಓದುಗರು ಏನನ್ನು ಬಯಸುತ್ತಾರೋ ಅದನ್ನು ಉಣ ಬಡಿಸುವ ಸಾಮರ್ಥ್ಯವೇ ನಮ್ಮ ವಿಶಿಷ್ಟವಾದ ವ್ಯವಹಾರಿಕ ಪ್ರತಿಪಾದನೆ" ಎಂದು ಘೋಷಿಸಿದರು. ಸಾಂದರ್ಭಿಕವಾಗಿ ಅವರ ಲೇಖನದ ತಲೆಬರಹವೇ "ನಕಲು ಮಾಡುವವರು ಬೆರಳು ತೋರಿಸಬಾರದು" ಎಂಬುದಾಗಿತ್ತು.

ಮರುದಿನವೇ (26 ಫೆಬ್ರವರಿ) ತನ್ನ ಸಂಪಾದಕೀಯದ ಮೂಲಕ ಮಾರುತ್ತರ ನೀಡಿದ ಹಿಂದುಸ್ತಾನ್ ಟೈಮ್ಸ್, ಟೈಮ್ಸ್ ಆಫ್ ಇಂಡಿಯಾ ವಿವಾದದ ಮುಖ್ಯ ಅಂಶದಿಂದಲೇ ಹೊರಳುವ ಪ್ರಯತ್ನ ನಡೆಸಿದೆಯೆಂದೂ, ವಾಸ್ತವಿಕವಾಗಿ ಅದು ತನ್ನ ಸಂಪಾದಕೀಯ ಅಂಕಣವನ್ನು ಸಹಾ 'ಮೀಡಿಯಾನೆಟ್' ಎಂಬ ಒಂದು ಕಂಪನಿಯ ಮೂಲಕ ಮಾರುತ್ತಿದೆಯೆಂದೂ ಮತ್ತು ಆ ಮೂಲಕ ಜಾಹೀರಾತುಗಳು ಹಾಗೂ ಸಂಪಾದಕೀಯ ಲೇಖನಗಳ ನಡುವಿರಬೇಕಾದ ಅಂತರವನ್ನು ಕ್ಷೀಣಗೊಳಿಸಿದೆ ಎಂದು ದೂರಿತು. ಜಾಹೀರಾತಿನಂತೆಯೇ, ಸಂಪಾದಕೀಯ ಲೇಖನಗಳನ್ನು ಸಹಾ ಹಣಕ್ಕಾಗಿ ಪ್ರಕಟಿಸುವ ಟೈಮ್ಸ್ ಆಫ್ ಇಂಡಿಯಾದ 'ಪತ್ರಿಕಾಧರ್ಮ' ಜಗಜ್ಜಾಹೀರಾಯಿತು.

ಯಾವುದು ಸುದ್ದಿಯಾಗಬೇಕು, ಯಾವ ಸುದ್ದಿಗೆ ಮಹತ್ವ ನೀಡಬೇಕು ಎಂಬುದರ ಬಗ್ಗೆ ಕಳಕಳಿ ಎಲ್ಲೂ ವ್ಯಕ್ತವಾಗದಿದ್ದ ಈ ಸಮರದ ನಂತರ, ನಿಚ್ಚಳವಾಗಿ ಕಂಡುಬಂದ ಅಂಶವೆಂದರೆ ನಗಣ್ಯ ಶಕ್ತಿಗಳು, ವ್ಯಕ್ತಿಗಳು ಮತ್ತು ಸುದ್ದಿಗಳಿಗೆ ಈ ಎರಡೂ ಪತ್ರಿಕೆಗಳಲ್ಲಿ ಲಭ್ಯವಾಗುತ್ತಿರುವ ಪ್ರಾಶಸ್ತ್ಯ. ಸಮಾಜದ ಅಥವಾ ದೇಶದ ಬಗ್ಗೆ ಚಿಂತನೆಯೇ ಇಲ್ಲದ, ಕೇವಲ ತಮ್ಮ ಬೇಳೆ ಬೇಯಿಸುವುದರಲ್ಲೇ ನಿರತರಾದ ವ್ಯಕ್ತಿಗಳ ರಂಗುರಂಗಿನ ಛಾಯಾಚಿತ್ರಗಳು, ಅಭಿಪ್ರಾಯಗಳು, ಹೇಳಿಕೆಗಳು, ಉಪದೇಶಗಳು ಅತಿರಂಜಿತವಾಗಿ ವರ್ಣಿತವಾಗುತ್ತಿರುವ ಜತೆಯಲ್ಲೆ, ಗಂಭೀರವಾದ ಸುದ್ದಿಗಳು ಎಲ್ಲೋ ಮೂಲೆಯಲ್ಲಿ ವರದಿಯಾಗುವ ಅಥವಾ ವರದಿಯೇ ಆಗದಿರುವ ಪ್ರಕ್ರಿಯೆ ಮುಂದುವರಿದಿದೆ. ಫೆಬ್ರವರಿ 26 ರಂದು ದೆಹಲಿಯಲ್ಲಿ ನಡೆದ ಕಾರ್ಮಿಕರ ಪಾರ್ಲಿಮೆಂಟ್ ಚಲೋ ಕಾರ್ಯಕ್ರಮವನ್ನು ರಾಜಧಾನಿಯ ಎಲ್ಲಾ ಪತ್ರಿಕೆಗಳು, (ಪರಸ್ಪರ ಕಲಹದಲ್ಲಿ ತೊಡಗಿದ್ದ ಎರಡು ಪತ್ರಿಕೆಗಳೂ ಸೇರಿ) ಅತ್ಯಂತ ಕ್ಷುಲ್ಲಕವಾಗಿ ಚಿತ್ರಿಸುವ ಪ್ರಯತ್ನ ನಡೆಸಿದವು. ಮೂರು ಲಕ್ಷಕ್ಕೂ ಹೆಚ್ಚು ದುಡಿಯುವ ಜನ ತಮ್ಮನ್ನು ಕಾಡಿಸುತ್ತಿರುವ ಸಮಸ್ಯೆಗಳ ಸರಮಾಲೆಯನ್ನು ಹೊತ್ತು ದೇಶದ ಮೂಲೆ ಮೂಲೆಗಳಿಂದ ದೆಹಲಿಯವರೆಗೂ ಸಾಗಿ ಬಂದು ನಡೆಸಿದ ಪ್ರದರ್ಶನವನ್ನು ಈ ಪತ್ರಿಕೆಗಳು, ಈ ಪ್ರದರ್ಶನದಿಂದಾಗಿ ರಾಜಧಾನಿಯ ಸಂಚಾರ ವ್ಯವಸ್ಥೆ ಅಸ್ತವ್ಯಸ್ತವಾಯಿತು ಎಂಬುದನ್ನೇ ಪ್ರಧಾನವಾಗಿಟ್ಟುಕೊಂಡು ಚಿತ್ರಿಸಿದವು. ಕಾರ್ಮಿಕ ಅಹವಾಲುಗಳಾಗಲಿ, ಸಮಸ್ಯೆಗಳಾಗಲಿ ಸುದ್ದಿಗೆ ಯೋಗ್ಯವಿಲ್ಲ ಎಂದೇ ಅವು ನಿರ್ಧರಿಸಿದ್ದವು. "ಸಹಸ್ರಾರು (ಲಕ್ಷಗಟ್ಟಲೆ ಅಲ್ಲ) ಜನ ಎಡ ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರು ದೆಹಲಿಯ ಬಡನಾಗರೀಕರನ್ನು ತಾಸುಗಟ್ಟಲೇ ಸಂಕಷ್ಟಕ್ಕೆ ಗುರಿ ಮಾಡಿದರು" ಎಂದು ಹಿಂದೂ ಪತ್ರಿಕೆ ತನ್ನ 27-2-03 ರ ಸಂಚಿಕೆಯಲ್ಲಿ ವರದಿ ಮಾಡಿತು.

ಫರೂಕಿಯವರ ಲೇಖನ ಮುಂದುವರಿದು ಮಾಧ್ಯಮದ ಮುಖ್ಯವಾಹಿನಿಗಳಾಗಿರುವ ಪತ್ರಿಕೆಗಳ ಇಬ್ಬಂದಿತನವನ್ನು, ಜನವಿರೋಧಿ ನಿಲುವುಗಳನ್ನು ಬಯಲಿಗೆಳೆಯುತ್ತಿದೆ.

ಜಾಗತೀಕರಣದ ಪ್ರಕ್ರಿಯೆ ತೀವ್ರಗೊಳ್ಳುತ್ತಿರುವ ಈ ಕಾಲಘಟ್ಟದಲ್ಲೇ ಅಂತಹ ಪ್ರಕ್ರಿಯೆಗೆ ಪ್ರೇರಕ ಶಕ್ತಿಯಾಗಿ ಮಾಧ್ಯಮ ಕೆಲಸ ಮಾಡುತ್ತಿದೆ. ಜಾಗತೀಕರಣ ತಂದೊಡ್ಡಿರುವ ಸಮಸ್ಯೆಗಳು, ಸಂಕಷ್ಟಗಳನ್ನು ಆಳುವ ವರ್ಗ ಯಾವ ರೀತಿ ನಿರ್ಲಕ್ಷಿಸುತ್ತದೋ, ಅಂತಹ ಉಪೇಕ್ಷೆ ಮತ್ತು ನಿರಾಸಕ್ತಿಗಳನ್ನು ಮಾಧ್ಯಮವೂ ಮೈಗೂಡಿಸಿಕೊಂಡಿದೆ.

ಡೆಕ್ಕನ್ ಹೆರಾಲ್ಡ್ ಪತ್ರಿಕೆ ಇತ್ತೀಚೆಗೆ ಸುದ್ದಿಯೊಂದನ್ನು ವಿಶೇಷ ಅಂಕಣದಲ್ಲಿ ಪ್ರಕಟಿಸಿತು. ವಿಮಾನ ಪ್ರಯಾಣಿಕರೊಬ್ಬರ ಮೇಲೆ ಬಿಸಿ ಕಾಫಿ ಬಿದ್ದು, ಅವರಿಗೆ ಸುಡುಗಾಯಗಳಾದವು. ಅವರಿಗೆ ಚಿಕಿತ್ಸೆ ನೀಡಲಾಯಿತು, ಇತ್ಯಾದಿ ವಿವರಗಳನ್ನು ಅದರಲ್ಲಿ ಪ್ರಕಟಿಸಲಾಗಿತ್ತು. ಇದೊಂದು ಬಹು ಪ್ರಮುಖವಾದ ಘಟನೆಯೇನೋ ಎಂಬಂತೆ ಆ ಸುದ್ದಿಯನ್ನು ಬಿಂಬಿಸಿದ ಪತ್ರಿಕೆಗೆ, ಆಂಧ್ರ ಪ್ರದೇಶವೊಂದರಲ್ಲೇ ಸುಮಾರು 1300 ಕ್ಕೂ ಹೆಚ್ಚು ಜನ ಬಡಪಾಯಿಗಳು ಬಿಸಿಲಿನ ಝಳಕ್ಕೆ ಬಲಿಯಾಗಿದ್ದು ಅಂತಹ ಮಹತ್ವದ ಸುದ್ದಿಯೇನೂ ಆಗುವುದಿಲ್ಲ. ಒಂದು ಪ್ರದೇಶದಲ್ಲಿ ಬಿದ್ದ ಮಳೆಯ ಪ್ರಮಾಣ ಅಥವಾ ಒಂದು ಜಲಾಶಯದಲ್ಲಿ ಉಳಿದಿರುವ ನೀರಿನ ಮಟ್ಟದ ವಿವರಗಳನ್ನು ನೀಡುವ ರೀತಿಯಲ್ಲೇ ಈ ಮರಣಗಳ ಅಂಕಿ ಅಂಶಗಳನ್ನು ನೀಡಿ, ಪತ್ರಿಕೆ ತೆಪ್ಪಗಾಯಿತು. ಇದೇ ಆಂಧ್ರದಲ್ಲಿ ಸಾವಿರಾರು ಸಂಖ್ಯೆಯಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡಿರುವ ಮತ್ತು ಈಗಲೂ ಮಾಡಿಕೊಳ್ಳುತ್ತಿರುವ ಘಟನೆಗಳ ಬಗ್ಗೆ ಬಂದ ವರದಿಗಳೂ ಹೀಗೆಯೇ. ಬಿಸಿಲಿನ ಝಳಕ್ಕೆ ಜನ ನೊಣಗಳಂತೆ ಸಾಯಬೇಕಾದ ಅಥವಾ ಸಾವಿರಾರು ಸಂಖ್ಯೆಯಲ್ಲಿ ರೈತಾಪಿ ಜನ ಆತ್ಮಹತ್ಯೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಯಾಕಾಗಿ ಬಂತು ಎಂಬುದನ್ನು ವಿವರಿಸುವ, ವಿಶ್ಲೇಷಿಸುವ ಗೋಜಿಗೆ ಪತ್ರಿಕೆಗಳು ಹೋಗುವುದಿಲ್ಲ.

ಇಂಗ್ಲೆಂಡಿನ ಅವಿವಾಹಿತ ತಾರಾಮಣಿಯೊಬ್ಬಳು ಮಗು ಹೆತ್ತಿದ್ದು, ಅಮೇರಿಕೆಯ ಅಧ್ಯಕ್ಷರ ಪತ್ನಿ ತನ್ನ ನಾಯಿಯೊಂದಿಗೆ ವಾಯುವಿಹಾರ ಹೊರಟಿದ್ದು; ಪ್ರಧಾನಿಯವರ ಸಾಕುಮಗಳು ಚೀನಾಗೆ ಹೊರಟು ನಿಂತಾಗ (ಸರ್ಕಾರಿ ವೆಚ್ಚದಲ್ಲಿ) ಕೇಂದ್ರದ ವಾರ್ತಾಸಚಿವೆ ಆತ್ಮೀಯವಾಗಿ ಆಲಂಗಿಸಿ ಬೀಳ್ಕೊಟ್ಟಿದ್ದು; ರಾಜ್ಯದ ಮುಖ್ಯಮಂತ್ರಿಗಳು ಉಪಾಹಾರ ಗೃಹವೊಂದಕ್ಕೆ ತೆರಳಿ ದೋಸೆ ತಿಂದಿದ್ದು-ಇತ್ಯಾದಿ ಮಾಮೂಲಿ ಸಂಗತಿಗಳು ಛಾಯಾಚಿತ್ರಸಹಿತ ವಿವರವಾಗಿ ಪ್ರಕಟವಾಗುತ್ತವೆ. ಸಾವಿರಾರು ಜನ ಅಂಗನವಾಡಿ ಕಾರ್ಯಕರ್ತೆಯರು ಅನಿರ್ಧಿಷ್ಟಾವಧಿಯ ಧರಣಿ ನಡೆಸಿದ್ದಾಗಲಿ, ಲಕ್ಷಾಂತರ ಕೃಷಿ ಕೂಲಿಕಾರರು ಹೋರಾಟ ನಡೆಸಿದ್ದಾಗಲೀ ಸುದ್ದಿಯಾಗುವುದಿಲ್ಲ. ಕನಿಷ್ಠ ವೈದ್ಯಕೀಯ ಸೌಲಭ್ಯಗಳೇ ಇಲ್ಲದಿರುವ ಕೋಟ್ಯಾಂತರ ಬಡಪ್ರಜೆಗಳ ಬಗ್ಗೆ ಏನನ್ನೂ ಬರೆಯದ ಪತ್ರಿಕೆಗಳು, ಕ್ರಿಕೆಟ್ ಆಟಗಾರನೊಬ್ಬನ ಬೆರಳಿನ ಶಸ್ತ್ರ ಚಿಕಿತ್ಸೆಯ ಬಗ್ಗೆ ಅತ್ಯಂತ ವಿಸ್ತೃತವಾಗಿ ಪ್ರಕಟಿಸುತ್ತಾರೆ.

ಜನಾಭಿಪ್ರಾಯಕ್ಕೆ ಮನ್ನಣೆ, ಜನಪರವಾದ ಕಾಳಜಿ ಇತ್ಯಾದಿ ಆದರ್ಶಗಳನ್ನು ನಿರಂತರವಾಗಿ ಪ್ರತಿಪಾದಿಸುತ್ತಲೇ, ವಾಸ್ತವದಲ್ಲಿ ಜನ ಸಮುದಾಯದ ಬದುಕಿನ ಬವಣೆಗಳನ್ನು ನಿರ್ಲಕ್ಷಿಸುವ ಮಾಧ್ಯಮದ ಢೋಂಗಿತನ ಇದರಿಂದ ಬಯಲಾಗುತ್ತದೆ. ದುಡಿಯುವ ವಿಶಾಲ ಜನಸ್ತೋಮದ ಹಿತಾಸಕ್ತಿಗಳನ್ನು ಸಮಗ್ರವಾಗಿ ಬಿಂಬಿಸುವ ಹಾಗೂ ಜನಪರವಾದ ಪರ್ಯಾಯ ಮಾಧ್ಯಮವನ್ನು ಬೆಳೆಸುವ ಮೂಲಕ ಮಾತ್ರವೇ ಆಳುವ ಜನರ ಮುಖವಾಣಿಗಳನ್ನು ಕಸದ ತೊಟ್ಟಿಗೆ ಎಸೆಯಲು ಸಾಧ್ಯ.

- ಎಂ.ಆರ್. ಶೆಣೈ

ಬಿಸಿಯೂಟದ ಅವಾಂತರಗಳು....

ಟ 8 ರಿಂದ

ಪಾಲಕರು, ಸಾರ್ವಜನಿಕರು ತಮ್ಮ ಮಕ್ಕಳಿಗೆ ್ಷೆ ಶಿಕ್ಷಣ ಕೊಡ್ರಿ. ಈ ಬಿಸಿ ಊಟ ಬ್ಯಾಡವೆಂದು ಳುತ್ತಿದ್ದಾರೆ. ಮೊದಲಿನ ಹಾಗೆ 3 ಕೆ.ಜಿ ಅಕ್ಕಿ ಡಿರಿ, ಬೇಕಾದರೆ 5 ಕೆ.ಜಿ.ಕೊಡಿರಿ ಎಂದು ್ಮ ಮಕ್ಕಳಿಗೆ ನಾವೇ ಬೇಯಿಸಿ ಹಾಕುತ್ತೇವೆಂದು ಳುತ್ತಿದ್ದಾರೆ. ಶಿಕ್ಷಕ ವೃಂದದಲ್ಲಿ ಬಿಸಿಯೂಟಕ್ಕೆ ್ರೆ ಪ್ರತಿಕ್ರಿಯೆ ಇಲ್ಲ. ಶಾಲೆ ಕಲಿಸುವುದು ಬಿಟ್ಟು ಊಟದ ವ್ಯವಸ್ಥೆ ಮಾಡಬೇಕಾಗಿದೆ ಎಂದು ಳುತ್ತಿದ್ದಾರೆ.

ಡಾಯದ ನೆಲಕ್ಕೆ ಎಸ್.ಎಂ.ಕೃಷ್ಣ.

ರೀಕ್ಷಿತ ಭೆಟ್ಟಿ

ಜುಲೈ 5 ರಂದು ಮುಖ್ಯಮಂತ್ರಿ .ಎಂ.ಕೃಷ್ಣರವರು ಯಾವುದೇ ಮುನ್ಸೂಚನೆ ೀಡದೆ, ಸ್ಥಳೀಯ ಶಾಸಕರಿಗೆ, ಮಂತ್ರಿಗಳಿಗೆ, ಕಾರಿಗಳಿಗೆ ತಿಳಿಸದೆ, ಬರಗಾಲದ ನೆಪ ಹೇಳಿಕೊಂಡು ಧಿಡೀರನೆ ನವಲಗುಂದ - ನರಗುಂದಕ್ಕೆ ಬೆಟ್ಟಿ ನೀಡಿ ಊಟದ ವ್ಯವಸ್ಥೆ ಬಗ್ಗೆ ಪರಿಶೀಲಿಸಿದ್ದಾರೆ. ಅಧಿಕಾರಿಗಳಿಗೆ ಈ ಬಿಸಿ ಊಟದ ವ್ಯವಸ್ಥೆ ಸರಿಪಡಿಸಲು ಎಚ್ಚರಿಸಿದ್ದಾರೆ.

ಈ ಅನಿರೀಕ್ಷಿತ ಭೇಟಿಯ ಉದ್ದೇಶವಾದರೂ ಏನು? ಇದರ ಹಿಂದಿರುವ ಮರ್ಮವಾದರೂ ಏನು? ಸತತ ಮೂರನೇ ವರುಷ ಮುಂದುವರೆದಿರುವ ಬರಗಾಲ, ಇದುವರೆಗೆ, ಶಾಸಕರು, ಅಧಿಕಾರಿಗಳು ಮಂತ್ರಿಗಳನ್ನು ಹೊರತುಪಡಿಸಿದರೆ ರಾಜ್ಯದ ಮುಖ್ಯಮಂತ್ರಿಗಳು ಒಮ್ಮೆಯು ಬೆಟ್ಟಿ ನೀಡಿಲ್ಲ ಜನ ಬರಗಾಲ ಕಾಮಗಾರಿಗೆ ಒತ್ತಾಯಿಸಿ ದೊಡ್ಡ ಚಳುವಳಿ ನಡೆಸಿದ್ದರೂ, ತಿರುಗಿ ನೋಡದ ಮುಖ್ಯಮಂತ್ರಿಗಳು ಧಿಡೀರನೆ ಬರಗಾಲ ಕಾಮಗಾರಿ ವೀಕ್ಷಣೆಯ ನೆಪ ಮಾಡಿಕೊಂಡು ಬಂದಿರುವುದು ಜನಕ್ಕೆ ಅಶ್ಚರ್ಯ ಮೂಡಿಸಿದೆ.

ಅಧಿಕಾರ ಕಳೆದುಕೊಳ್ಳುವ ಭೀತಿಯೆ?

1981 ರಲ್ಲಿ ಇದೇ ಕಾಂಗ್ರೆಸ್ ಸರಕಾರದ ಗುಂಡುರಾವ್ ರೈತರ ಮೇಲೆ ಹೇರಿದಾಗ, ನರಗುಂದ ನವಲಗುಂದದಲ್ಲಿ ನಡೆದ ರೈತ ಬಂಡಾಯ ಇಡೀ ರಾಜ್ಯಕ್ಕೆ ಹರಡಿ ಅಧಿಕಾರ ಕಳೆದುಕೊಳ್ಳಬೇಕಾಯಿತು. ಈಗೂ ಹಾಗೇ ಆದಿತು ಎಂಬ ಭಯವೇ? ಕೃಷ್ಣರವರು ಅಧಿಕಾರ ಕಳೆದುಕೊಳ್ಳಲೂಬಹುದು, ಬಿಸಿ ಊಟದ ಸಮಸ್ಯೆ ಜನತೆಗೆ ಮೂಲಭೂತವಾಗಿ ಭಾದಿಸದ ಸಮಸ್ಯೆಯಾಗಿರಬಹುದು, ಆದರೆ ಕಾಂಗ್ರೆಸ್ ಸರಕಾರದ ದುರಾಡಳಿತದಿಂದ ಜನ ರೋಸಿ ಹೋಗುತ್ತಿದ್ದಾರೆ. ಜನ ತುಂಬಾ ಸಂಕಷ್ಟಕ್ಕೆ ಒಳಗಾಗುತ್ತಿದ್ದಾರೆ. ಜನ ದಿನೆ ದಿನೆ ಕುದಿಯಲಾರಂಭಿಸಿದ್ದಾರೆ. ಯಾವದೇ ಗಳಿಗೆಯಲ್ಲಿ ರೊಚ್ಚಿಗೆದ್ದು ಇನ್ನೊಂದು ಬಂಡಾಯಕ್ಕೆ ಸಜ್ಜುಗೊಂಡು ಕಾಂಗ್ರೆಸ್ ಸರಕಾರಕ್ಕೆ ಮಣ್ಣು ಮುಕ್ಕಿಸುವ ಕಾಲ ದೂರವಿಲ್ಲ.

ಜುಲೈ 1 ಕ್ಕೆ ಏಕೆ? ಬಿಸಿ ಊಟ ಪ್ರಾರಂಭ


ಇಷ್ಟೊಂದು ಅವ್ಯವಸ್ಥೆಯಿಂದ ತರಾತುರಿ ಬಿಸಿ ಊಟದ ಯೋಜನೆ ಜುಲೈ 1 ರಿಂದಲೇ ಏಕೆ ಪ್ರಾರಂಭಿಸಬೇಕಾಗಿತ್ತು. ಇದರ ಹಿನ್ನೆಲೆಯಾದರೂ ಏನು? ಎಲ್ಲಾ ಸರಿಪಡಿಸಿಕೊಂಡು ಧವಸಧಾನ್ಯ, ಪಾತ್ರೆಗಳು, ಗ್ಯಾಸ್, ಒಲೆ, ಶುದ್ಧ ನೀರಿನ ವ್ಯವಸ್ಥೆ. ಅಡುಗೆ ಮಾಡುವವರ ನೇಮಕಾತಿ, ಅವರಿಗೆ ತರಬೇತಿ ನೀಡಿದ ಬಗ್ಗೆ, ಎಲ್ಲವೂ ಸರಿಯಾಗಿ ಸರಬರಾಜು ಆಗಿದೆ ಎಂದು ಶಾಲಾ ಮುಖ್ಯಸ್ಥರಿಂದ ವರದಿ ಬಂದ ನಂತರ ಪ್ರಾರಂಭಿಸಬೇಕಾಗಿತ್ತು. ಜುಲೈ 1 ನೇ ತಾರೀಖನ್ನೇ ಏಕೆ ಸರಕಾರ ಆಯ್ಕೆ ಮಾಡಿಕೊಂಡಿತು ಎಂಬುದು ನಿಗೂಢ.

ಇಷ್ಟೇಕೆ ಆತುರ ತೋರಿ ಕೊಂಡು ಹೇಳಬೇಕು. ಜನರಿಗೆ ಮಕ್ಕಳಾಗಿ ಹೆಚ್ಚಿನ ಅನುಕೂಲವಾಗುವ ಮಹತ್ವದ ಯೋಜನೆಯನ್ನು ಸೂಕ್ತ ಸಿದ್ಧತೆ, ಕಾಳಜಿ, ಜಾಗೃತಿ ಇಲ್ಲದೇ ಜಾರಿಗೆ ತಂದು ಇಷ್ಟೆಲ್ಲಾ ಅವಾಂತರ ಸೃಷ್ಟಿಸುವ ಹೊಣೆಯನ್ನು ಎಸ್.ಎಂ. ಕೃಷ್ಣರವರು, ಕೇಂದ್ರದ ವಾಜಪೇಯಿಯವರು ಹೊರಬೇಕು.

○



ಬೆಳಿಗ್ಗೆ ಶಾಲೆಗೆ ಹೋಗುವ ಮಕ್ಕಳು ಗಂಜಿಯುಂಡು ಶಾಲೆಗೆ ಹೋದರೆ ಮಧ್ಯಾಹ್ನ ಕೇವಲ ನೀರು ಕುಡಿದು ಹಸಿವು ಇಂಗಿಸಿಕೊಳ್ಳುವ ಮಕ್ಕಳು, ಶಾಲೆ ಬಿಟ್ಟರೂ ಬಿಡದ ಮಳೆ, ಮಳೆಯಲ್ಲಿ ನೆನೆದು ಮನೆ ಸೇರಿ 'ಗಂಜಿ ಇಕ್ಕಿ' ಎಂದ ಕಥೆಯ ನಾಯಕ, ಇಲ್ಲವೆಂದು ಹೇಳಿದ ಮೀನಾಕ್ಷಕ್ಕ, ಅವಳ ಬಗೆಗಿನ ಅಭಿಪ್ರಾಯ ಈ ಬಗ್ಗೆ ಓದಿರುವಿರಿ. ಮುಂದೆ....



ಕರ್ಕಟಕ

ಎಂ.ಟಿ.ವಾಸುದೇವನ್ ನಾಯರ್

ಕನ್ನಡಕ್ಕೆ
ಡಾ. ಮೋಹನ್ ಕುಂಬಾರ್

'ಏಯ್ ತಾಳೆಬೆಲ್ಲ ಇದ್ದರೆ ಅವನಿಗೊಂದು ಗ್ಲಾಸು ನೀರು ಮಾಡಿಕೊಡು. ಬೆಳಿಗ್ಗೆ ಗಂಜಿಯುಂಡು ಹೋದವನಲ್ಲವೆ?'

ಮೀನಾಕ್ಷ್ಯಕ್ಕ ಅದನ್ನು ಕೇಳಿಸಿಕೊಂಡಂತೆ ಕಾಣಲಿಲ್ಲ.

ನಾನು ಚಾವಡಿಗೆ ಹೋದೆ. ಚಿಕ್ಕಮ್ಮ ವರಾಂಡದಲ್ಲಿ ಪಡುದಿಕ್ಕಿನ ಕಂಬದ ಬಳಿ ಕೂದಲು ಸಿಕ್ಕುಬಿಡಿಸಿಕೊಂಡು ಕಾಲು ನೀಡಿ ಕುಳಿತಿದ್ದಳು.

'ಚಂದ್ರನೆಲ್ಲಿ!'

'ಅವರಿಬ್ಬರೂ ಪೇರಶ್ಯನೂರಿಗೆ ಹೋದರು'?

ಚಂದ್ರ ಮತ್ತು ಕಮಲರ ಅಪ್ಪನ ಮನೆಯಿರುವುದು ಪೇರಶ್ಯನೂರಿನಲ್ಲಿ. ಚಿಕ್ಕಪ್ಪ ತೀರಿಕೊಂಡು ಮೂರು ವರ್ಷಗಳಾದುವು. ಕುಟುಂಬದ ಆಸ್ತಿಯಲ್ಲಿ ಸೋದರಿಯರಿಗೂ ಪಾಲುಕೊಟ್ಟು ಬಂದು ಇಲ್ಲಿ ನೆಲೆಸಿದ್ದರು. ಬಳಿಕ ಇಲ್ಲಿಯೇ ತೀರಿಕೊಂಡರು.

'ನಾನು ಅಲ್ಲಿಗೇ ಹೋಗಿ ಎಂದು ಹೇಳುವೆನೆ? ನಾಲ್ಕೇ ದಿವಸ ಎಂದರೆ ಬರೇ ನಾಲ್ಕು ದಿವಸವಾದರೂ ಅಲ್ಲಿದ್ದು ಬರಲಿ.'

ಬಡಕ್ಕೋಣೆಯ ಒಳಗಿನಿಂದ ಅಜ್ಜಿಯ ಗೂರಲು ಕೆಮ್ಮು ಕೇಳಿಸಿತು. ಜೊತೆಗೆ ಒಂದು ಕರೆ:

'ಮೀನಾಕ್ಷ್ಯ!'

ಮೀನಾಕ್ಷ್ಯಕ್ಕನಿಗೆ ಅದು ಕೇಳಿಸಲಿಲ್ಲ.

'ಕೆರೆಯ ಬಳಿಗೆ ಹೋಗುವುದಾದರೆ ಕೊಂಡು ಹೋಗಲು ನಂದೊಂದು ಬೈರಾಸಿದೆ. ಚಿಕ್ಕಮ್ಮ ಅದನ್ನು ಕೇಳಿಸಿಕೊಂಡರು.

'ಮುದುಕಿಗೆ ಅದನ್ನು ಸ್ವಲ್ಪ ಆಗಲೇ ಹೇಳಬಹುದಿತ್ತಲ್ಲ. ಎಲ್ಲರದೂ ಒಗೆಯುವುದು, ಮೀಯುವುದು ಮುಗಿದ ಸಮಯ ನೋಡಿ ಹೇಳಿದರೆ ಸಾಕು. ಆದರೆ ಬರುವವರಲ್ಲಿ ಹೋಗುವವರಲ್ಲಿ ಅದನ್ನೇ ಹೇಳುತ್ತಿರಬಹುದಲ್ಲ. 'ನನಗೆ ಒಂದು ಬೈರಾಸು ಒಗೆದುಕೊಡುವುದಕ್ಕೂ ಕೂಡಾ ಇಲ್ಲಿ ಜನ ಇಲ್ಲ'.

ಅಜ್ಜಿಯ ನಡುಗುವ ದನಿಯನ್ನು ಅನುಕರಿಸುತ್ತಾ ಚಿಕ್ಕಮ್ಮ ಈ ಮಾತುಗಳನ್ನು ಹೇಳಿದರು.

ಚಾವಡಿಯ ಒರಗು ಮಂಚದಲ್ಲಿ ಇಡೀ ಲೋಕದ ಮೇಲೆ ಸಿಟ್ಟುಗೊಂಡು ಕುಳಿತೆ. ಆಗ ತೆಂಕಣ ಅಂಗಳದಲ್ಲಿ ಅಮ್ಮ ನಡೆದುಕೊಂಡು ಬರುತ್ತಿದ್ದರು. ಬಣ್ಣದ ಒಂದು ಬೈರಾಸು ಭುಜದ ಮೇಲಿದೆ. ಹಾಗಾದರೆ ತೆಕ್ಕೇಲೆಗಾಗಿರಲಿಕ್ಕಿಲ್ಲ. ಸ್ವಲ್ಪ ದೂರ ಬೇರೆಲ್ಲಿಗಾದರೂ ಹೋಗಿದ್ದಿರಬೇಕು.

ಒಂದು ಕಡ್ಡಿ ತುಂಡಿನಿಂದ ನೆಲದಲ್ಲಿ ಬರೆದು ಗುರುತು ಮಾಡುತ್ತಾ ಮುಖವೆತ್ತದೆ ಕುಳಿತೆ. ಏನಾದರೂ ಹೇಳಿ ದರೆ ಸಿಡಿದೇಳ ಬೇಕೆಂದು ಕಾಯುತ್ತಿದ್ದೆ.

'ಒದ್ದೆಯಾದ ಚಡ್ಡಿ ಕಳಚಿ ಒಂದು ಬೈರಾಸು ಸುತ್ತಿಕೊಳ್ಳಲಾಗಲಿಲ್ಲವೇನೋ?'

ನಾನು ಮಾತನಾಡಲಿಲ್ಲ.

'ಮೀನಾಕ್ಷ್ಯ!'

ಅಮ್ಮ ಅಂಗಳಕ್ಕೆ ಕಾಲು ಇಳಿಬಿಟ್ಟು ವರಾಂಡದಲ್ಲಿ ನನಗೆದುರಾಗಿ ಕುಳಿತರು. ಮೀನಾಕ್ಷ್ಯಕ್ಕ ಬಂದಾಗ ಅಮ್ಮ ಕೇಳಿದರು.

'ಕಾಫಿ ಹುಡಿ ಉಳಿದಿದೆಯೇನೆ!'

'ಇದ್ದುದನ್ನು ಅಡಿಕೆರೆದಲ್ಲವೆ ಮಧ್ಯಾಹ್ನ ನೀರು ಕುದಿಸಿದ್ದು?'

'ಆ ಮಾಪ್ಪೆಯ ಅಂಗಡಿಯಿಂದ ಸಾಮಾನು ತರುವುದು ನಿಲ್ಲಿಸಿದರೇ ಸರಿಯಾದೀತು' ಅಮ್ಮ ತನ್ನಷ್ಟಕ್ಕೆ ಹೇಳಿಕೊಂಡರು.

ಅಬ್ದುವಿನ ಅಂಗಡಿಗೆ ಹೋದಾಗ ಲೆಕ್ಕ ತೀರಿಸದೆ ಪುಸ್ತಕದಲ್ಲಿ ಸಾಮಾನುಗಳನ್ನು ಕೊಂಡೊಯ್ಯುವುದು ಬೇಡವೆಂದು ಅವನು ಹೇಳಿದ್ದು ಎರಡು ದಿವಸಗಳಿಗೆ ಹಿಂದೆ.

'ಅಚ್ಯುತ ಬಂದನೆ?'

ಅಚ್ಯುತ ನನ್ನ ಸೋದರ ಮಾವ. ಅಮ್ಮನ ಬೆನ್ನಿನ ತಮ್ಮ.

'ನೋಡಲಿಲ್ಲ'

'ಚಹಾ ದಂಗಡಿಯಲ್ಲಿ ನೀರು ಸಾಲ ಸಿಗುವವರೆಗೆ ಗಂಡಸರು ಅಡುಗೆ ಕೋಣೆಯ ಬಗ್ಗೆ ವಿಚಾರಿಸಲಾರರು. ಮೀನಾಕ್ಷಿ ನೀನು ಆ ವಡಕ್ಕೇಲದ ಕಲ್ಯಾಣಿಯನ್ನು ಒಮ್ಮೆ ಕೂಗು'

'ನಂಬೂದಿರಿ ಮನೆಯ ಕುಞಾತ್ತೋಲು ಏನು ಹೇಳಿದರಕ್ಕ?'

'ನಾಡಿದು ನೋಡೋಣ ಎಂದು ಹೇಳಿದರು, ಕೊಟ್ಟಾರು'

'ಕೊಯ್ದ ಕೈಗೆ ಉಪ್ಪೂ ಹಾಕಲಾರಳು. ಆ ಪಿಸುಣೆ!'

'ಆದರೂ ನನ್ನಲ್ಲಿ ತುಂಬಾ ಪ್ರೀತಿ ತೋರಿಸುತ್ತಾಳೆ. ನಾನೊಂದು ಮೂಟೆ ಭತ್ತ ಕೇಳಿದರೆ ಕೊಡದಿರಲಾರಳು! ಒಳ್ಳೆಯ ಕೆಲಸ!' ಹೊಸ್ತಿಲಲ್ಲಿ ನಿಂತು ಮೀನಾಕ್ಷ್ಯಕ್ಕ ನೆನಪಿಸಿದರು.

'ಇವತ್ತೇನು ಮಾಡುವುದು? ಗೋಪಾಲಣ್ಣನಲ್ಲಿಗೆ ಜನ ಕಳುಹಿಸಿದರೋ'?

'ಫುಹ್! ಅಮ್ಮನ ಬಾಯಿಂದ ಸಿಡಿದ ಒಂದು ತಿರಸ್ಕಾರದ ದನಿ. ಗೋಪಾಲಣ್ಣ! ಹಾಗೆ ತಿನ್ನಬೇಕಾಗಿಲ್ಲ. ಅವನೆಲ್ಲ ಹೇಗೆ ಶ್ರೀಮಂತನಾದುದು. ಅಲ್ಲಿನ ಹೆಂಗಸರ ದೊಡ್ಡಸ್ತಿಕೆ ಏನು? ನಿನ್ನೆತನಕ ಮೇನೋನ್‌ನ ಮನೆಯಲ್ಲಿ ಬಟ್ಟೆ ಒಗೆಯುತ್ತಿರಲಿಲ್ಲವೆ?'

ಶಾಂತರಾದಾಗ ಅಮ್ಮ ಮತ್ತೆಯೂ ನೆನಪಿಸಿಕೊಂಡರು:

'ನೀನು ಆ ಕಲ್ಯಾಣಿಯನ್ನು ಕೂಗು'

ಮೀನಾಕ್ಷ್ಯಕ್ಕ ಹೋದಾಗ ಆಲೋಚಿಸಿದೆ. ಇನ್ನು ನಾನು ಊಟ ಮಾಡಿದ್ದೇನಾ ಎಂದು ಅಮ್ಮ ಕೇಳಬಹುದು. ಆದರೆ ಅಮ್ಮ ಗಮನಿಸುವುದೇ ಇಲ್ಲ. ವರಾಂಡದ ಪಡುದಿಕ್ಕಿನಲ್ಲಿ ಬೆನ್ನು ಹಾಕಿ ಕುಳಿತು ತಲೆಯ ಸಿಕ್ಕು ಬಿಡಿಸುತ್ತ ಬೆರಳುಗಳಲ್ಲಿ ಕೂದಲು ಸುತ್ತುತ್ತಿರುವ ಚಿಕ್ಕಮ್ಮನತ್ತ ನೋಡುತ್ತಿದ್ದರು.

ಹೇಳಿದ್ದು ಕೇಳದ ಹೆಂಗಸರಿದ್ದರೆ ದಾರಿದ್ರ್ಯವಲ್ಲದೆ ಮತ್ತೇನು? ಯಾವಾಗಲೂ ಚಾವಡಿಯಲ್ಲಿ ಕುಳಿತು ತಲೆ ಬಾಚುವುದು. ಅಂಗಳದಲ್ಲೆಲ್ಲ ಕೂದಲು ಹರಡಿರುತ್ತದೆ.

ಚಿಕ್ಕಮ್ಮ ಅಭ್ಯಾಸದಂತೆ ಅದನ್ನು ಕೇಳಿಸಿಕೊಂಡಂತೆ ಕಾಣಲಿಲ್ಲ. ಬಳಿಕ ನನ್ನ ಸರದಿಯೆಂದು ಭಾವಿಸಿ ನಾನೂ ನಿಂತಿದ್ದೆ.

'ನೀನು ಮೀಯಲಿಲ್ಲವೇ?' ತಿಳಿಯದಂತೆ ಅಮ್ಮನ ದನಿಗುಂದಿತು:

'ಇವತ್ತಿಲ್ಲಿ ಮಧ್ಯಾಹ್ನ ಅಡುಗೆ ಮಾಡಿಲ್ಲ ಮಗುವೇ. ಅಲ್ಲದೆ ಮಾಡಿ ತಿಂಗಿದಿಡಲು ಮರೆತಿದ್ದೇನಲ್ಲ. ಮಿಂದು ಬರುವಷ್ಟರಲ್ಲಿ ರಾತ್ರಿಯೂಟದ ಅಕ್ಕಿ ಕುದಿದೀತು'.

ನಾನು ಅಲುಗಾಡದೆ ಕುಳಿತಿರುವುದನ್ನು ಕಂಡು ಅಮ್ಮ ಹೇಳಿದರು: -

'ಓಡಿ ಬಾ!'

ಸಿಟ್ಟು, ಹಸಿವು ಉರಿದು ಆರಿದ್ದುವು. ಒಳಗೆ ಹೋಗಿ ಬೈರಾಸು ಹುಡುಕುತ್ತಿದ್ದಾಗ ಅಮ್ಮ ಹೇಳುತ್ತಿದ್ದರು.

'ಇವನ ಅಪ್ಪ ಪರವೂರಿಗೆ ಹೋಗಿ ಕಷ್ಟಪಟ್ಟರೂ ಪ್ರಯೋಜನವೇನು?'

ಪಕ್ಕದ ಮನೆಯವರ ತೋಟದಲ್ಲಿ ಬಾವಿ. ವೃಷಭ ಮಾಸ ಅರ್ಧ ಕಳೆದರೆ ಮುಂಗಾರಿಗೆ ಬಾವಿ ತುಂಬಿ ಗದ್ದೆಗೆ ಹರಿಯುತ್ತದೆ.ಬದಿಯ ಮಣ್ಣು ಜರಿದು ಬಿದ್ದು ಬಾವಿಯ ವಿಸ್ತಾರ ಹೆಚ್ಚಿದೆ. ಸುತ್ತಲೂ ಇದ್ದ ಕೇಪಳ ಹೂಗಳೆಲ್ಲ ನೀರಲ್ಲಿವೆ.

ಮಿಂದು ಬಂದ ಸವೆದ ಸಾಬೂ[…] ಇಡುವುದೆಲ್ಲಿ ಎಂದು ಕೇಳುವ ನೆಪದಲ್ಲಿ ಅ[…] ಕೋಣೆಗೆ ಹೋಗಿ ನೋಡಿದೆ. ಆಗ ಒಲೆ[…] ಬೆಂಕಿ ಉರಿಯುತ್ತಿದೆ. ದೊಡ್ಡ ಮಡಕೆಯಲ್ಲಿ [...] ಕುದಿಯುತ್ತಿದೆ. ಮೀನಾಕ್ಷ್ಯಕ್ಕ ಅಡುಗೆ ಕೋ[…] ವರಾಂಡದಲ್ಲಿ ಕುಳಿತು ಅಕ್ಕಿ ತೊಳೆಯುತ್ತಿ[…] ಹತ್ತಿರ ಕಲ್ಯಾಣಿಕುಟ್ಟಿ ಇದ್ದಾಳೆ.


'ಈ ಮೂಟೆ ಅಕ್ಕಿ ತುಂಬಾ ವಾಸನೆ!'

ಕಲ್ಯಾಣಿಕುಟ್ಟಿ ಹೇಳುತ್ತಿದ್ದಳು. ಚಿಕ್ಕ ಬಿ[…] ಪಾತ್ರೆಗೆ ಮೀನಾಕ್ಷ್ಯಕ್ಕ ತೊಳೆದು ಹಾಕ[…] ಅಕ್ಕಿಯನ್ನು ಕಂಡಾಗ ಮನಸ್ಸಿಗೆ ಸಂತೋಷವೆನಿ[…]

'ರಾತ್ರಿಯದು ಹೀಗಾದರೂ ಆಯಿ[…] ನಾಳೆಯೋ?'

ಮೀನಾಕ್ಷ್ಯಕ್ಕ ಕೇಳುತ್ತಿದ್ದಾರೆ.

ಸಾರಣೆ ಮಾಡದ ಗೋಡೆಯ ಕಿಂಡಿ[…] ನಾಯಿಯ ನಾಲಗೆಯಂತೆ ತೆಳುವಾದ ಸಾಬೂ[…] ಇರಿಸಿ ಅಂಗಳಕ್ಕಿಳಿದೆ. ಮಳೆನೀರು ಅಲ್ಲಲ್ಲಿ ತ[…] ನಿಂತಿದೆ. ಹಟ್ಟಿಯ ಜಗಲಿಯಲ್ಲಿ ಮಲ[…] ಹಸುಕರು ಮೆಲುಕಾಡುತ್ತಿದೆ. ಅದರ ಕಣ್ಣಿನ ಕೆ[…] ಗಾಯದ ಸುತ್ತಲೂ ನೊಣಗಳು ಹಾರಾಡು[…] ಕಳೆದ ಮಳೆಗಾಲದಲ್ಲಿ ಅದರ ತಾಯಿ ಹ[…] ಬಿದ್ದುಸತ್ತಿತ್ತು. ಬೆಳಿಗ್ಗೆ ಕರೆದುಬಿಟ್ಟ [...] ಸಂಜೆಯಾದರೂ ಹಿಂತಿರುಗಿ ಬಂದಿರ[…] ಮೊದಲು ಮೀನಾಕ್ಷ್ಯಕ್ಕ ಹೋಗಿ ಹು[…] ನೋಡಿದರು. ಮತ್ತೆ ಅಚ್ಯುತ ಮಾವ ಬೆಳಿಗ್ಗೆ ಚ[…] ಜನ ಕಳುಹಿಸಿದರು. ಗಿಡಮೂಲಿಕೆಗಳನ್ನು ತ[…] ಚಕ್ಕನಿಗೆ ಗುಡ್ಡದಲ್ಲಿ ಪರಿಚಯವಿಲ್ಲದ ಸ್ಥಳ[…]



ಚಕ್ಕನ್ ಸಂಜೆಗೆ ಬಂದು ಹೇಳಿದಾಗ ಅಜ್ಜಿ ಸ[…] ಎಲ್ಲರೂ ಅತ್ತುಬಿಟ್ಟರು. ಚಿಕ್ಕಪ್ಪ ಬಡಕ್ಕೋಣೆ[…] ಶವವಾಗಿ ಮಲಗಿದ ದಿವಸ ಕೂಡಾ ಮನೆ[…] ಯಾರಿಗೂ ಇಷ್ಟು ದುಃಖವಾಗಿರಲಿಲ್ಲ.

ಹಟ್ಟಿಯ ಹಿಂದುಗಡೆಯ ಬಾಳೆಯ ಹಿಂ[…] ಸುಮ್ಮನೆ ತುಂಬಾಹೊತ್ತು ಕಲ್ಲುಹೊಡೆದು ಅಲ್ಲ[…] ಸುತ್ತಾಡಿ ಚಾವಡಿಗೆ ಬಂದೆ.

ಅಮ್ಮ ಆಗಲೂ ವರಾಂಡದಲ್ಲಿ ಕುಳಿತಿ[…] ಹೊಲೆಯ ಕಣಕ್ಕರಾಯಿ ಅಂಗಳದ ಅಂ[…] ಹಾವಸೆ ಹಿಡಿದ ಗೋಡೆಗೆ ಕೈಯಿಟ್ಟು ನಿಂತಿ[…]

'ಈ ಬಾರಿಯ ಬೆಳೆ ಹೋದ ಹಾಗೆ ಆ[…] ಮಳೆ ಬಿಡದೆ ಇದ್ದರೆ ಕದಿರೆಲ್ಲ ಜಳ್ಳೆ'.

'ನಾಲ್ಕು ತಿಂಗಳು ಊಟ ಮಾಡಲಿಕ್ಕಾಗು[…] ಭತ್ತ ಬೇಸಾಯದಿಂದ ಬರುತ್ತಿದ್ದ ಕಾಲ [...] ಹೋಯಿತು'.

(ಮುಂದುವರಿಯು[…]

.......ವಿದ್ಯಾರ್ಥಿ-ಪೋಷಕರ ಬವಣೆ

ಪುಟ 7 ರಿಂದ

ಏರಿಕೆ ನೀತಿಯನ್ನು ಬೀದಿಗಿಳಿದು ಪ್ರತಿಭಟಿಸಿದ್ದಾರೆ.

ಪದವಿ ಶುಲ್ಕ ಏರಿಕೆಯು ಏಣಿ ಆಕಾಶದ ಕಡೆಗೆ

ರಾಜ್ಯದಲ್ಲಿ ಜನಸಾಮಾನ್ಯರು ಪಡೆಯುತ್ತಿರುವ ಉನ್ನತ ಶಿಕ್ಷಣದ ಕತೆಯನ್ನು ಮುಗಿಸಿಯೇ ಬಿಡಬೇಕೆಂದು ರಾಜ್ಯ-ಕೇಂದ್ರ ಸರ್ಕಾರಗಳು ದೃಢವಾಗಿ ತೀರ್ಮಾನಿಸಿದಂತಿವೆ. ಕರ್ನಾಟಕ ರಾಜ್ಯದಲ್ಲಿ ಸರ್ಕಾರವು ಪದವಿ ಶಿಕ್ಷಣ ಶುಲ್ಕವನ್ನು ಏರಿಸಲು ತೀರ್ಮಾನಿಸಿದೆ. ಎಷ್ಟು ಎಂಬುದು ಪ್ರಶ್ನೆ. ಪ್ರತಿ ವರ್ಷವೂ ಶೇ. 10 ರಷ್ಟು ಶುಲ್ಕ ಏರಿಕೆ ಮಾಡಬೇಕೆಂದು ಸರ್ಕಾರ ನಿರ್ದೇಶಿಸಿದೆ. ಕಳೆದ ವರ್ಷ ಶೇ. 10 ರಷ್ಟು ಏರಿಕೆ. ಈ ವರ್ಷವೂ ಶೇ. 10 ಶುಲ್ಕ ಏರಿಕೆಯಾಗಿದೆ. ಜೊತೆಗೆ ಸರ್ಕಾರಿ ಪದವಿ ಕಾಲೇಜಿನಲ್ಲಿ ತಲಾ ವಿದ್ಯಾರ್ಥಿಯಿಂದ 100 ರೂ ಕಾಲೇಜು ಅಭಿವೃದ್ಧಿ ಶುಲ್ಕ ವಸೂಲಿಮಾಡಲು ನಿರ್ಧರಿಸಿದೆ. ಇದರಿಂದ ವಿಶ್ವ ವಿದ್ಯಾಲಯ ನಿಗದಿಪಡಿಸುವ ಶುಲ್ಕಗಳಲ್ಲದೆ ಸರ್ಕಾರಕ್ಕೆ ಕಟ್ಟುವ ಶುಲ್ಕ 859 ರೂ ನಿಂದ ಈಗ 1080 ರೂಗಳಿಗೆ ಏರಿದೆ. ಪ್ರತಿ ವರ್ಷ ಶೇ. 10 ಏರಿಕೆ ಎಂದರೆ ಉನ್ನತ ಶಿಕ್ಷಣ ಶುಲ್ಕಗಳ ಏರಿಕೆ ಏಣಿ ಏರಿ ಆಕಾಶದತ್ತ ನೆಗೆಯುತ್ತಿದೆ ಎಂದೇ ಅರ್ಥ. ಈ ರೀತಿಯಲ್ಲಿ ಶುಲ್ಕಗಳು ಏರಬೇಕೆಂದು ಆಜ್ಞೆ ನೀಡುತ್ತಿರುವ ಐ.ಎಂ.ಎಫ್. ವಿಶ್ವಬ್ಯಾಂಕ್, ಅಮೇರಿಕಾ ಧಣಿಗಳಿಗೇನೋ ನಮ್ಮ ದೇಶದ ರೈತ ಮಕ್ಕಳ, ಕೂಲಿಕಾರರ, ಬಡವರ ಕಷ್ಟಗಳು ಅರ್ಥವಾಗುವುದು ಕಷ್ಟ. ಆದರೆ, ಇದೇ ರೈತ ಕೂಲಿಕಾರರ, ಕಾರ್ಮಿಕ, ಬಡವರ ಓಟು ಪಡೆದು ಗದ್ದುಗೆ ಏರಿದ ಜನರಿಗೆ ಅರ್ಥವಾಗುವುದಿಲ್ಲವಾದರೆ ಮತ್ತೆ ಯ[…] ಅರ್ಥವಾಗುತ್ತದೆ? ಲಾಭವೇ ಚಾಲಕ ಶಕ್ತಿ[…] ಬಂಡವಾಳಶಾಹಿ ವ್ಯವಸ್ಥೆಯ ಚಿಂತನೆಗಳು ಯ[…] ಮುಖಮಾಡಿವೆ ಎಂದು ಅರ್ಥಮಾಡಿಕೊ[…] ಇದಕ್ಕಿಂತ ಉತ್ತಮ ಉದಾಹರಣೆ ಮತ್ತೆ[…] ಬೇಕಿಲ್ಲ.

ಭಾರತ ವಿದ್ಯಾರ್ಥಿ ಫೆಡರೇ[…] (ಎಸ್‌ಎಫ್‌ಐ) ಸಂಘಟನೆಯು ಈ ನಿ[…] ವಿರುದ್ಧ ಹಲವು ಹಂತಗಳ ಚಳ[…] ಯೋಜಿಸಿಕೊಂಡು ಪ್ರತಿಭಟನೆಗೆ ಇಳಿದಿದ[…]

ನತಾ ಚಳುವಳಿಗಳ ಸಂಗಮವೇ ಅಮೆರಿಕದ ಅಧಿಪತ್ಯಕ್ಕೆ ಮದ್ದು

ಇತ್ತೀಚೆಗೆ (ಜೂನ್ 19-20) ಮಹತ್ವದ ಅಂತರ್ರಾಷ್ಟ್ರೀಯ ಸಭೆಯೊಂದು ಡೆಯಿತು. ಗ್ರೀಸ್‌ನ ರಾಜಧಾನಿ ನ್ಸ್‌ನಲ್ಲಿ. ಇದು ಕಮ್ಯುನಿಸ್ಟ್ ಗಳ ಸಭೆಯಾಗಿತ್ತು. ಸಭೆಯ ಯು 'ಯುದ್ಧ ಮತ್ತು ವಾಳಶಾಹಿ ಜಾಗತೀಕರಣದ ದ್ಧ ಚಳುವಳಿಗಳು ಮತ್ತು ್ಯನಿಸ್ಟರು' ಆಗಿತ್ತು. ಸಿಪಿಐ(ಎಂ) ನ ನಿಧಿಯಾಗಿ ಸೀತಾರಾಂ ಯೆಚೂರಿ ಸಭೆಯಲ್ಲಿ ಭಾಗವಹಿಸಿದ್ದರು. ಯೆಚೂರಿಯವರು ಸಭೆಯಲ್ಲಿ ಮಂಡಿಸಿದ ಪ್ರಬಂಧದ . ಪ್ರಮುಖ ಭಾಗಗಳು.

ತಿಕ ಸ್ಪಷ್ಟತೆ ಅಗತ್ಯ

... ನಾವು ಇಲ್ಲಿ ಸೇರಿರುವವರೆಲ್ಲಾ ೀಕರಣ ಮತ್ತು ಇರಾಕ್ ಮೇಲೆ ಅಮೆರಿಕದ ದ ವಿರುದ್ಧ ಜನತಾ ಚಳುವಳಿಗಳ ಸಂಗಮ ಮಾಡಲು ಕೆಲಸ ಮಾಡುತ್ತಿರುವವರು. ಸಂಗಮದ ಐಕ್ಯ ಶಕ್ತಿ ಮಾತ್ರ ಅಮೆರಿಕದ ತ್ಯವನ್ನು ನಿಲ್ಲಿಸಬಲ್ಲದು: ಮಾತ್ರವಲ್ಲ, ್ರಸಬಲ್ಲದು.

ರೆ ಇದಕ್ಕೆ ಎರಡು ವಿಷಯಗಳ ಬಗ್ಗೆ ತಿಕ ಸ್ಪಷ್ಟತೆ ಅಗತ್ಯ. ಮೊದಲನೆಯದು ವಿರುದ್ಧ ಅಮೆರಿಕದ ಆಕ್ರಮಣ-ಯದ್ಧ, ದ ನಾಯಕತ್ವದಲ್ಲಿ ಹರಿಯಬಿಡಲಾಗಿರುವ ೀಕರಣಕ್ಕೆ ಸಂಬಂಧಪಟ್ಟಿದ್ದು. ಯದಾಗಿ, ಇವೆರಡರಲ್ಲೂ ಮಾನವ ಕುಲದ ವಿರುದ್ಧ ನಡೆಸಲಾಗುತ್ತಿರುವ ಅಪರಾಧಗಳನ್ನು ತಡೆಯಲು ಬೇಕಾಗಿರುವುದು ಜಾಗತಿಕ ಬಂಡವಾಳ ಶಾಹಿ ವ್ಯವಸ್ಥೆಗೆ ಬದಲಿ ಸಾಮಾಜಿಕ -ಆರ್ಥಿಕ ವ್ಯವಸ್ಥೆಯ ನಿರ್ಮಾಣದತ್ತ ಚಳುವಳಿ. ಇಂತಹ ಬದಲಿಗೆ ಚಳುವಳಿ ಬಲಗೊಂಡಷ್ಟು ಜಾಗತೀಕರಣದ ದಾಳಿಗೆ ತಡೆ ಪ್ರಬಲವಾಗಿರುತ್ತದೆ...."

ಜಾಗತೀಕರಣ ಸದಾಕಾಲ ಮುಂದುವರೆಯಲಾರದು

"ಅಸಮಾನತೆಗಳು ತೀವ್ರವಾಗಿ ಹೆಚ್ಚುತ್ತಿರುವುದು........ ಜಗತ್ತಿನಾದ್ಯಂತ ವ್ಯಾಪಕ ಹಸಿವು ಮತ್ತು ಬಡತನಕ್ಕೆ ಕಾರಣವಾಗಿದೆ. ಇದರರ್ಥ ಜಗತ್ತಿನ ಬಹುಸಂಖ್ಯಾತ ಬಡವರು ಜಾಗತೀಕರಣಗೊಂಡ ಆರ್ಥಿಕ ವ್ಯವಸ್ಥೆ ಉತ್ಪಾದಿಸುವ ಸರಕುಗಳನ್ನು ಕೊಳ್ಳಲಾರರು. ಆದ್ದರಿಂದ ಜಾಗತೀಕರಣದ ವ್ಯವಸ್ಥೆ ಹೀಗೆ ಮುಂದುವರಿಯುವುದು ಸಾಧ್ಯವಿಲ್ಲ.

ಸದಾ ಕಾಲ ಮುಂದುವರೆಸಲು ಸಾಧ್ಯವಿಲ್ಲದಿರುವ ಇಂತಹ ಶೋಷಕ ವ್ಯವಸ್ಥೆಯನ್ನು ಮಿಲಿಟರಿ ಮತ್ತು ರಾಜಕೀಯ ಅಧಿಪತ್ಯ ಹೊರಿಸುವುದರಿಂದ ಮಾತ್ರವೇ ನಡೆಸಲು ಸಾಧ್ಯ...."





ಥೆಸ್ಸಾ ಲೊನಿಕೆ ಎಂಬ ಗ್ರೀಸ್ ನಗರದಲ್ಲಿ ಜಾಗತೀಕರಣ-ಪ್ರತಿಭಟನಾ ಪ್ರದರ್ಶನ. ಸಾವಿರಾರು ಜನ ಭಾಗವಹಿಸಿದ ಈ ಪ್ರದರ್ಶನದಲ್ಲಿ ಸಿಪಿಐ(ಎಂ) ಪ್ರತಿನಿಧಿ ಸೀತಾರಾಂ ಯೆಚೂರಿ ಸೇರಿದಂತೆ ಅಂತರ್ರಾಷ್ಟ್ರೀಯ ಸಭೆಗೆ ಬಂದ 48 ದೇಶಗಳ 60 ಪಕ್ಷಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಇದು 'ಆಕ್ಷನ್ ಥೆಸ್ಸಾಲೋನಿಕೆ 2003' ಎಂಬ ವರ್ಷಪೂರ್ತಿ ಕಾರ್ಯಕ್ರಮದ ಕೊನೆಯ ಭಾಗವಾಗಿತ್ತು. ಇದು ಯುರೋಪಿನ ಎಡ ಸಂಘಟನೆಗಳ ಜಂಟಿ ಕಾರ್ಯಾಚರಣೆಯಾಗಿತ್ತು

ಸಮಾಜವಾದ ಅಥವಾ ಬರ್ಬರತೆ

".....ಹಲವು ದಶಕಗಳ ಹಿಂದೆ ರೋಸಾ ಲಿಕ್ಸಂಬರ್ಗ್ ಹೇಳಿದಂತೆ ಈಗ ಮನುಕುಲದ ಮುಂದಿರುವ ಆಯ್ಕೆ - ಸಮಾಜವಾದ ಅಥವಾ ಬರ್ಬರತೆ. ಫಿಡೆಲ್ ಕ್ಯಾಸ್ಟ್ರೋ ಸಹ ಇತ್ತೀಚೆಗೆ ಅದನ್ನು ಪುನರುಚ್ಚರಿಸಿದ್ದಾರೆ.

ಎಲ್ಲಾ ಯುದ್ಧ ವಿರೋಧಿ, ಜಾಗತೀಕರಣ - ವಿರೋಧಿ ಜನತಾ ಚಳುವಳಿಗಳ ಸಂಗಮ ಮನುಕುಲ ಬರ್ಬರತೆಯತ್ತ ಜಾರಿ ಹೋಗುವುದನ್ನು ತಡೆಯಬಲ್ಲ ಒಂದು ಪ್ರಮುಖ ಬೆಳವಣಿಗೆ...."

ಪ್ರಭುತ್ವ ಅಥವಾ ಸಾಮಾಜಿಕ ನಿಯಂತ್ರಣ?

"..... ನಾವು ಕಮ್ಯುನಿಸ್ಟರು ಜಾಗತೀಕರಣ-ವಿರೋಧಿ ಚಳುವಳಿಗಳ ನಡುವೆ ಎದ್ದಿರುವ ಹಲವು ಪ್ರಮುಖ ಪ್ರಶ್ನೆಗಳಿಗೆ ಉತ್ತರ ಹುಡುಕಬೇಕು. ಇಂತಹ ಒಂದು ಪ್ರಶ್ನೆ ಸಂಪನ್ಮೂಲಗಳ ನಿಯಂತ್ರಣದ ಪ್ರಶ್ನೆ. ಸಂಪನ್ಮೂಲಗಳ ಮೇಲೆ ಕಂಪನಿಗಳ ಹಾಗೂ ಪ್ರಭುತ್ವದ ನಿಯಂತ್ರಣ ಕಿತ್ತುಹಾಕಿ ಸಾಮಾಜಿಕ ನಿಯಂತ್ರಣ ಸಾಧಿಸಬೇಕು, ಚಳುವಳಿಯ ಗುರಿಯಾಗಬೇಕು ಎಂಬುದು ಇಂತಹ ಒಂದು ಪ್ರಶ್ನೆ. ಹಲವು ಬಾರಿ ಈ ಧೋರಣೆ ಪ್ರತಿನಿಧಿಸುವವರ ಇಂಗಿತ ಚಳುವಳಿ ಬಂಡವಾಳಶಾಹಿ ಮತ್ತು ಸಮಾಜವಾದ ಎರಡನ್ನೂ ನಿರಾಕರಿಸಬೇಕು. ಸೋವಿಯತ್ ಒಕ್ಕೂಟ ಮತ್ತು ಪೂರ್ವಯುರೋಪಿನ ದೇಶಗಳ ಅನುಭವದ ಆಧಾರದ ಮೇಲೆ ಸಂಪನ್ಮೂಲಗಳ ಮೇಲೆ ಪ್ರಭುತ್ವದ ನಿಯಂತ್ರಣ ಬಂಡವಾಳಶಾಹಿಗೆ ಬದಲಿ ಅಲ್ಲ ಎಂದು ಇವರ ವಾದ.

ಶರತ್‌ಚಂದ್ರ

ಇಂತಹ ವಾದದಿಂದ ಎರಡು ಧೋರಣೆಗಳು ಹುಟ್ಟಬಲ್ಲದು. ಸಮಾಜವಾದ ಈಗಾಗಲೇ ವಿಫಲವಾಗಿರುವುದರಿಂದ ಜಾಗತೀಕರಣಕ್ಕೆ ಬದಲಿಯೇ ಇಲ್ಲ ಎಂಬುದು ಮೊದಲನೆಯದು. ಸಂಪನ್ಮೂಲಗಳ ಮೇಲೆ ಜನತಾ (ಅಥವಾ ಸಾಮಾಜಿಕ) ನಿಯಂತ್ರಣ ಸಾಧಿಸಬೇಕು ಅಂತ ಎರಡನೆಯದು. ಸಂಪನ್ಮೂಲಗಳ ಮೇಲೆ ಸಾಮಾಜಿಕ ಅಥವಾ ಜನತಾ ನಿಯಂತ್ರಣ ಇಂತಹ ನಿಯಂತ್ರಣಗಳನ್ನು ಕಾನೂನುಬದ್ಧ ಎಂದು ಒಪ್ಪಿಕೊಳ್ಳುವ ಸಾಮಾಜಿಕ ವ್ಯವಸ್ಥೆಯಲ್ಲಿ ಮಾತ್ರ ಸಾಧ್ಯ ಎಂಬುದು ಎಲ್ಲರೂ ನೆನಪಿನಲ್ಲಿಟ್ಟು ಕೊಳ್ಳಬೇಕು. ಜನರ ನಿಯಂತ್ರಣವನ್ನು ಸಂಪನ್ಮೂಲಗಳ ಮೇಲೆ ಒಪ್ಪುವ ಏಕಮಾತ್ರ ಸಾಮಾಜಿಕ ವ್ಯವಸ್ಥೆ ಸಮಾಜವಾದ. ನಿಜವಾದ ಜನತಾ ನಿಯಂತ್ರಣ ಸಮಾಜವಾದದಲ್ಲಿ ಮಾತ್ರ ಸಾಧ್ಯ.

ಜಾಗತಿಕ ಸಮಾಜವಾದದ ಹಿನ್ನಡೆಯ ನಂತರದ ಅನುಭವ ನಮ್ಮ ಮುಂದಿದೆ. ಈ ಅನುಭವಗಳ ಸಾರ ಎಂದರೆ ಸಮಾಜವಾದಿ ಆದರ್ಶಗಳು ತಪ್ಪಲ್ಲ. ಅಥವಾ ಮಾರ್ಕ್ಸ್‌ವಾದ-ಲೆನಿನ್ ವಾದ ಸೃಜನಾತ್ಮಕ ವಿಜ್ಞಾನವೂ ತಪ್ಪಲ್ಲ. ತಪ್ಪಾಗಿರುವುದು ಈ ಆದರ್ಶಗಳು ಮತ್ತು ವಿಜ್ಞಾನದಿಂದ ದೂರ ಹೋದ ಅದನ್ನು ತಪ್ಪಾಗಿ ಅರ್ಥೈಸಿದ್ದರ ಫಲ. ಆದ್ದರಿಂದ ಕಮ್ಯುನಿಸ್ಟರ ಉತ್ತರ ಈ ಚರ್ಚೆಯಲ್ಲಿರಬೇಕಾದ್ದು "ಸಮಾಜವಾದವೇ ಬರಲಿ..."

ಜಗತ್ತಿನ ಬಹುಸಂಖ್ಯಾತ ಹಸಿದವರ ನಾಡು ಇಂಡಿಯಾ

ಇಂಡಿಯಾ ಜಗತ್ತಿನ ಬಹುಸಂಖ್ಯಾತ ಹಸಿದವರ ನಾಡು ಆಗಿದೆ. ಸರಾಸರಿ 2.33 ಕೋಟಿ ಜನ ಇಂಡಿಯಾದಲ್ಲಿ ಹಸಿವಿನಿಂದ ಬಳಲುತ್ತಿದ್ದಾರೆ. ಇದು ನಾವು ಹೇಳುತ್ತಲೇ ಬಂದಿರುವ ಸತ್ಯ. ಇದನ್ನು 2003 ರ ಮಾನವ ಅಭಿವೃದ್ಧಿ ವರದಿ (ವಿಶ್ವಸಂಸ್ಥೆ ಸಿದ್ಧಪಡಿಸುವ ವರದಿ) ಖಚಿತಪಡಿಸಿದೆ. ಇಂಡಿಯಾದ ಬೆಳವಣಿಗೆ ದರ ಇಲ್ಲಿನ ಜನತೆಯ ಅಗತ್ಯಗಳನ್ನು ಪೂರೈಸುವಷ್ಟಿಲ್ಲ. ಇದು ಸಾಲದೆಂಬಂತೆ ಬಡವ-ಬಲ್ಲಿದರ ನಡುವೆ ಬೆಳೆಯುತ್ತಿರುವ ಅಂತರ ಇದಕ್ಕೆ ಕಾರಣ. ಬೆಳೆಯುತ್ತಿರುವ ನಿರುದ್ಯೋಗ ಮತ್ತು ಸರಾಸರಿ ಆಯುಷ್ಯ ಕಡಿಮೆಯಾಗಿರುವುದರ ಬಗೆಗೂ ವರದಿ ಆತಂಕ ವ್ಯಕ್ತಪಡಿಸಿದೆ.

3 ವರದಿ ಪ್ರಕಾರ ಹಿಂದಿನ ವರದಿಯಿಂದ ಅಭಿವೃದ್ಧಿ ಸೂಚಕದ ರ್‍ಯಾಂಕ್‌ನಲ್ಲಿ 3 ಸ್ಥಾನಗಳಷ್ಟು ಕೆಳಗೆ ಹೋಗಿದೆ. 124ನೇ ಸ್ಥಾನದಲ್ಲಿದ್ದದ್ದು 127 ನೇ ಹೋಗಿದೆ. ಬೋಸ್ನಿಯಾ, ಹರ್ಜೆಗೋವಿನಾ ಮತ್ತು ಪ್ಯಾಲೆಸ್ಟೇನ್ ಆಕ್ರಮಿತ ಪ್ರದೇಶಗಳನ್ನು ಪಟ್ಟಿಗೆ ಸೇರಿಸಲಾಗಿದ್ದು, ಅವು ಇಂಡಿಯಾಗಿಂತ ಮೇಲೆ ಇವೆ. ಆಕ್ರಮಿತ ಪ್ಯಾಲೆಸ್ಟೇನ್ ಇಂಡಿಯಾಕ್ಕಿಂತ ಮಾನವ ಅಭಿವೃದ್ಧಿ ಸೂಚಕದಲ್ಲಿ ಮುಂದಿದೆ ಎಂದರೆ, ನಮ್ಮ ದುಸ್ಥಿತಿ ಬಗ್ಗೆ ಹೆಚ್ಚಿಗೆ ಹೇಳಬೇಕಾಗಿಲ್ಲ!


ನಿಜವಾಗಿಯೂ ಪರಿಸ್ಥಿತಿ ಇನ್ನಷ್ಟು ಕೆಟ್ಟದಿದೆ. ವಿಶ್ವಸಂಸ್ಥೆ ವರದಿ 2001 ರ ಅಂಕಿ-ಸಂಖ್ಯೆಗಳ ಮೇಲೆ ಆಧಾರಿತವಾದ್ದು. 2002-03 ರಲ್ಲಿ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ. ಇಂಡಿಯಾದ ಬೆಳವಣಿಗೆ ದರ ಕೇವಲ ಶೇಕಡಾ 4.3 ಆಗಿತ್ತು. ವಾಜಪೇಯಿ ಸರ್ಕಾರ ಕೊಚ್ಚಿಕೊಳ್ಳುತ್ತಿದ್ದ ಶೇಕಡಾ 8 ರ ದೇಶದ ಅರ್ಧದಷ್ಟು ಬೆಳವಣಗೆಯ ದರ ಕಳೆದ ಮೂರು ವರ್ಷಗಳಲ್ಲಿ ಶೇಕಡಾ 6 ನ್ನೂ ದಾಟಿಲ್ಲ. 80ರ ದಶಕದ ಮಧ್ಯಭಾಗದಲ್ಲಿ ಕೆಲವು ವರ್ಷಗಳಾದರೂ ಬೆಳವಣಿಗೆ ದರ ಶೇಕಡಾ 7 ದಾಟಿತ್ತು. ಆದರೆ ಈ ಬೆಳವಣಿಗೆಯ ಅತ್ಯಂತ ಹೆಚ್ಚಿದ ಅಸಮಾನತೆ ಜತೆ ಆಗಿತ್ತು ಎಂದು ಮರೆತು ಬಿಡಬಾರದು.

ಅಧಿಕೃತ ಸಮಜಾಯಿಷಿ ಇದಕ್ಕೆ - ಕಳೆದ ವರ್ಷ ಬರ ಬಿದ್ದಿತ್ತು ಅಂತ. ಆದರೆ ಬರ ಬಂದಿದ್ದು, ಕಳೆದ ಮೂರು ವರ್ಷಗಳಲ್ಲಿ ಅತ್ಯಂತ ನಿಕೃಷ್ಟ ಕೃಷಿ ಬೆಳವಣಿಗೆ ಸಂದರ್ಭದಲ್ಲಿ. ಕಳೆದ ವರ್ಷ ಕೃಷಿಯಿಂದ ಸೃಷ್ಟಿಯಾದ ಮೌಲ್ಯ ಶೇಕಡಾ 3 ರಷ್ಟು ಕಡಿಮೆಯಾಯಿತು. ಗ್ರಾಮೀಣ ಪ್ರದೇಶದಲ್ಲಿ ಹಣ ಹೂಡಿಕೆಯ ಅಭಾವದಿಂದ ಆಹಾರ ಧಾನ್ಯ ಉತ್ಪಾದನೆ ಶೇಕಡಾ 14 ರಷ್ಟು ಕಡಿಮೆಯಾಗಿದೆ.

ತಲಾ ಆಹಾರ ಧಾನ್ಯಗಳ ಲಭ್ಯತೆ ಈ ವರ್ಷ, ಎರಡನೇ ಮಹಾಯುದ್ಧದಲ್ಲಿದ್ದಕ್ಕಿಂತ ಕಡಿಮೆ ಇತ್ತು. (ಇದು ಕುಖ್ಯಾತ ಬಂಗಾಳ ಕ್ಷಾಮಕ್ಕೆ ಎಡೆಕೊಟ್ಟಿತ್ತು ಎಂದು ಇಲ್ಲಿ ನೆನಪಿಸಿ ಕೊಳ್ಳಬಹುದು). ಜಾಗತೀಕರಣ, ಪ್ರಮಾಣಾತ್ಮಕ ನಿರ್ಬಂಧಗಳ ಸಡಿಲಿಸಿಕೆ ಮತ್ತು ಕೃಷಿಯಲ್ಲಿ ಬಂಡವಾಳ ಹೂಡಿಕೆ ಅಭಾವ-ಕೃಷಿಯನ್ನು ನಾಶ ಮಾಡಿದೆ. ಈ ಅಂಶಗಳನ್ನು ನಿವಾರಿಸದೆ ಶೇಕಡಾ 8 ಬೆಳವಣಿಗೆ ದರ ಬರಿ ಕನಸಿನ ಮಾತು. ಕೈಗಾರಿಕಾ ಉತ್ಪಾದನಾ ಸೂಚಕವೂ ಇಳಿಮುಖವಾಗಿದೆ.

ವಿದೇಶಿ ವಿನಿಮಯ ಭಂಡಾರ ಶ್ರೀಮಂತವಾಗಿರುವುದರ ಬಗ್ಗೆ ಸರ್ಕಾರ ಬಹಳ ಹೇಳಿಕೊಳ್ಳುತ್ತದೆ. ಈಗ ಇದೆ ಎಂದು ಹೇಳಲಾದ 17 ಶತಕೋಟಿ ಡಾಲರುಗಳ ವಿದೇಶಿ ವಿನಿಮಯ ಭಂಡಾರದಲ್ಲಿ ಅರ್ಧದಷ್ಟು ಅನಿವಾಸಿ ಭಾರತೀಯರಿಂದ ಬಂದಿದ್ದು. ಇದರಲ್ಲಿ ಹೆಚ್ಚಿನದ್ದು ವಿದೇಶಿ ಹಣ ತರಲು ಇದ್ದ ನಿರ್ಬಂಧಗಳನ್ನು ಸಡಿಲಿಸಿದ್ದರಿಂದ, ಕಾನೂನುಬಾಹಿರವಾಗಿ ವಿದೇಶಿಗಳಲ್ಲಿ ಇಡಲಾಗಿದ್ದ ಹಣ ವಾಪಸು ಬರುತ್ತಿದೆ ಅಷ್ಟೇ: ಇದು ಆರ್ಥಿಕದ ಬಲ ಸೂಚಕವಂತೂ ಅಲ್ಲ.

ವಿಶ್ವಸಂಸ್ಥೆಯ ಮಾನವ ಅಭಿವೃದ್ಧಿ ವರದಿ 2003 ಇನ್ನೊಮ್ಮೆ ಇಂಡಿಯಾದ ಈಗಿನ ಜಾಗತೀಕರಣ




ಪರ ಜನ-ವಿರೋಧಿ ನೀತಿಗಳನ್ನು ಬದಲಿಸದೆ, ಪರಿಸ್ಥಿತಿ ಹದಗೆಡುತ್ತಾ ಹೋಗುತ್ತದೆ ಎಂದು ಇನ್ನೊಮ್ಮೆ ನೆನಪಿಸಿದೆ.

ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ ವಿಕೇಂದ್ರೀಕರಣ ಮಾನವ ಅಭಿವೃದ್ಧಿ ಸೂಚಕದಲ್ಲಿ ಉತ್ತಮ ಬದಲಾವಣೆಗಳನ್ನು ತಂದಿದೆ ಎಂದೂ ವರದಿ ತಿಳಿಸಿದೆ. ಕೇರಳದ ಮಾನವ ಅಭಿವೃದ್ಧಿ ಸೂಚಕ ಅಮೆರಿಕಕ್ಕಿಂತಲೂ ಹೆಚ್ಚಿನದು. ಅಮೆರಿಕದ ತಲಾ ಆದಾಯದ ಶೇಕಡಾ 1 ರಷ್ಟು ಮಾತ್ರ ಕೇರಳದಲ್ಲಿದ್ದರೂ, ಇದು ಸಾಧ್ಯವಾಗಿರುವುದು, ಎಡ ಸರ್ಕಾರಗಳು ಮೂಲಭೂತ ಸೌಕರ್ಯದಲ್ಲಿ ಮಾಡಿದ ಬಂಡವಾಳ ಹೂಡಿಕೆ ಎನ್ನುವುದು ಸ್ಪಷ್ಟ.

ಯಾರ್ದೋ ದುಡ್ಡಲ್ಲಿ ಯಲ್ಲಮ್ಮನ ಜಾತ್ರೆ ಮಾಡುವವರು

ಇದು ಭಾರತೀಯ ಬ್ಯಾಂಕುಗಳಿಂದ ಸಾಲ ಪಡೆದವರ ಕತೆ. ಈ ಕಟ್ಟುಬಾಕಿದಾರರಿಂದ ಸುಲಭ ರೀತಿಯಲ್ಲಿ ಸಾಲ ವಸೂಲು ಮಾಡಬೇಕೆಂದು ಭಾರತೀಯ ರಿಸರ್ವ್ ಬ್ಯಾಂಕ್ ಈಗಾಗಲೇ ನಾಲ್ಕು ಒಂದವಕಾಶದ ರಾಜೀ ಯೋಜನೆಗಳನ್ನು ತಂದಿತು. ಹತ್ತು ಕೋಟಿ ರೂಪಾಯಿಗಳವರೆಗೆ ಸಾಲ ಪಡೆದವರಿಗೆ ಅನ್ವಯವಾಗುವಂತ ಯೋಜನೆಗಳು ಇವು.

ದೊಡ್ಡ ದೊಡ್ಡ ತಿಮಿಂಗಿಲಗಳು ಪಡೆದ ಸಾಲವನ್ನು ಮರುಪಾವತಿಸುವುದೇ ಇಲ್ಲ. ಬ್ಯಾಂಕಿನಿಂದ ಪಡೆದ ದುಡ್ಡಿನಿಂದ ಲಾಭ ಮಾಡಿಕೊಳ್ಳುತ್ತಿರುತ್ತಾರೆ. ಬ್ಯಾಂಕುಗಳು ತಮ್ಮ ಕೈಯಿಂದ ಹಣ ಖರ್ಚು ಮಾಡಿಕೊಂಡು ವಸೂಲಿಗಾಗಿ ಕೋರ್ಟಿಗೆ ಹೋಗಬೇಕು. ಹೀಗೆ ಕೋರ್ಟಿಗೆ ಹೋದರೆ ಕೇಸು ನಿರ್ಣಯವಾಗಲು ಹತ್ತಾರು ವರ್ಷಗಳೇ ಬೇಕಾಗುತ್ತದೆ. ಈ ಸಮಯದಲ್ಲಿ ಸಾಲಗಾರ ತನ್ನ ಲಾಭದಲ್ಲಿ ಮುಳುಗಿರುತ್ತಾನೆ.



ಇದನ್ನು ಗಮನದಲ್ಲಿಟ್ಟುಕೊಂಡು ಭಾರತೀಯ ರಿಸರ್ವ್ ಬ್ಯಾಂಕ್ ರಾಜೀ ಯೋಜನೆಗಳನ್ನು ಜಾರಿಗೆ ತಂದಿತು. (ಸಣ್ಣ ಸಾಲಗಾರರಿಗೆ ಮಾತ್ರ) ಈ ಯೋಜನೆಗಳಾವೂ ಸಫಲವಾಗಿಲ್ಲ. ಒಟ್ಟು 23,355 ಕೋಟಿ ರೂಪಾಯಿಗಳು ಸಾಲ ಬಾಕಿ ಇರುವಲ್ಲಿ ಈ ಯೋಜನೆಗಳಡಿ ಬರುವಂತಹವು) ಬರೀ 335 ಕೋಟಿ ರೂಪಾಯಿಗಳು ಮಾತ್ರ ವಸೂಲಿಯಾಗಿವೆಯಂತೆ.

ಮೊದಲು ದೊಡ್ಡ ಬಂಡವಾಳಿಗರಿಂದ ಮುಲಾಜಿಲ್ಲದೆ ವಸೂಲಿ ಕ್ರಮಗಳನ್ನು ಕೈಗೊಂಡಿದ್ದರೆ ಸಣ್ಣ ಸಾಲಗಾರರಲ್ಲಿ ಬಹುತೇಕ ಜನ ಸಾಲ ಮರುಪಾವತಿ ಮಾಡುತ್ತಿದ್ದರು. ಅದರೆ ಅವರನ್ನು ಹಾಗೇ ಬಿಟ್ಟಿರುವಾಗ ಬರೀ ಸಣ್ಣ ಸಾಲಗಾರರಿಂದ ವಸೂಲಾತಿ ಬಯಸಿದರೆ ಅದು ಸಾಧ್ಯವಾದೀತೆ?

ಎಲ್‌ಐಸಿ ಮೇಲೆ ಕಣ್ಣು- ಖಾಸಗೀಯವರಿಗೆ ಲಾಭ?

ಕೇಂದ್ರದ ಹಣಕಾಸು ಮಂತ್ರಾಲಯು ಎಲ್‌ಐಸಿಯ ಆರೋಗ್ಯದ ಬಗೆಗೆ ವರದಿ ಕೇಳಿದೆ ಎಂಬುದು ದೊಡ್ಡ ಸುದ್ದಿಯಾಗಿದೆ. ಇದರಲ್ಲೇನು ವಿಶೇಷ ಎಂದಿರಾ? ವಿಶೇಷವಿರುವುದೇ ಇಲ್ಲಿ. ಎಲ್‌ಐಸಿ ಸರ್ಕಾರಿ ಸ್ವಾಮ್ಯದ ಸಂಸ್ಥೆ. ಅದರ ಪರಿಸ್ಥಿತಿಯ ಬಗ್ಗೆ ಸರ್ಕಾರಕ್ಕೆ ಚೆನ್ನಾಗಿ ಗೊತ್ತಿರಲೇಬೇಕು. ಹಣಕಾಸು ವಲಯದಲ್ಲೇ ದೊಡ್ಡ ಪಾತ್ರ ಹೊಂದಿರುವ ಈ ಸಂಸ್ಥೆ ಇಂದು ನಿನ್ನೆಯದೇನಲ್ಲ. ಅದರ ಆರೋಗ್ಯದ ಬಗ್ಗೆ ಸಂದೇಹ ಬರಲು ಸಾಧ್ಯವಿಲ್ಲ. ಹಾಗಿರುವಾಗ ಸರ್ಕಾರ ಇಂತ ವರದಿ ಕೇಳುತ್ತಿರುವುದೇಕೆ ಮತ್ತು ಅದು ದೊಡ್ಡ ಸುದ್ದಿಯಾಗುವುದೇಕೆ?

ಒಂದೇ ಇಂದು ತಾಂತ್ರಿಕ ತೊಂದರೆ ಇಲ್ಲಿದೆ. ಎಲ್‌ಐಸಿಯ ಬಂಡವಾಳ ಬರೀ 5 ಕೋಟಿ ರೂಪಾಯಿಗಳು. ಆದರೆ ಅದರ ಆಸ್ತಿ ಸಹಸ್ರಾರು ಕೋಟಿ ರೂಪಾಯಿಗಳು. ಬಂಡವಾಳ ಬೆಂಬಲ 10 ಸಾವಿರ ಕೋಟಿ ರೂಪಾಯಿಗಳು.

ವಿಮಾ ನಿಯಂತ್ರಣ ಪ್ರಾಧಿಕಾರದ ಪ್ರಕಾರ ವಿಮಾ ಕಂಪನಿಯೊಂದರ ಬಂಡವಾಳ 100 ಕೋಟಿ ರೂಪಾಯಿಗಳಿಗೂ ಕಡಿಮೆ ಇರಬಾರದು ಎಲ್‌ಐಸಿಯ ಬಂಡವಾಳ ಐದು ಕೋಟಿ ರೂಪಾಯಿಗಳು ಮಾತ್ರವಾದರೆ ಈ ನಿಯಮಕ್ಕೆ ವಿರುದ್ದವಲ್ಲವೆ? ಆದರೆ ಎಲ್‌ಐಸಿ ವಿಮಾ ನಿಯಂತ್ರಣ ಪ್ರಾಧಿಕಾರಕ್ಕಿಂತ ಬಹಳ ಹಳೆಯದು.

ಮುಖ್ಯವಾಗಿ ಎಲ್‌ಐಸಿಯ ಬಗ್ಗೆ ಊಹಾಪೋಹಗಳನ್ನು ಎಬ್ಬಿಸುವುದರಲ್ಲಿ ರಾಜಕೀಯವಿದೆ. ಇಂದು ವಿಮಾರಂಗ ಖಾಸಗಿಯವರಿಗೆ ತೆರೆದಿದೆ. ಆದರೆ ಎಲ್‌ಐಸಿಯ ಮುಂದೆ ಖಾಸಗಿ ಕಂಪನಿಗಳ ವ್ಯವಹಾರ ಏನೇನೂ ಅಲ್ಲ. ಸರ್ಕಾರೀ ಸ್ವಾಮ್ಯದ್ದಾದ್ದರಿಂದ ಅದು ಜನಪರವೂ ಹೌದು. ಆದ್ದರಿಂದಲೇ ಎಲ್‌ಐಸಿಯ ಹೆಸರಿಗೆ ಮಸಿ ಬಳಿಯುವ ಪ್ರಯತ್ನ.

ಉದಾರೀಕರಣ ತಮ್ಮ ಪ್ರತಿಸ್ಪರ್ಧಿಗಳ ಹೆಸರಿಗೆ ಮಸಿ ಬಳಿಯುವ ಅವಕಾಶವನ್ನೂ ಖಾಸಗಿಯವರಿಗೆ ನೀಡಿದೆ. ಅದರ ಬಳಕೆ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ವಿರುದ್ದ ಮಾಡಲಾಗುತ್ತಿದೆ.

ಹೇಗಿದೆ ಈ ಕಾರ್ಯತಂತ್ರ?

ಪ್ರಶ್ನೆ: ಅಮೇರಿಕ, ಪಾಕಿಸ್ತಾನದ ಗಡಿಯಾಚೆಗಿನ ಭಯೋತ್ಪಾದನೆಯ ಬಗೆಗಿನ ನಿಲುವನ್ನು ಬದಲಾಯಿಸುತ್ತದೆ ಎಂದು ನಿಮಗೆ ಅನಿಸುತ್ತದೆಯೇ?

ಉತ್ತರ: ಸಾಧ್ಯವೇ ಇಲ್ಲ. ನಿರಂತರ ಆತಂಕ ಪರಿಸ್ತಿತಿ ಅಮೇರಿಕಕ್ಕೆ ಲಾಭದಾಯಕ. ಇಲ್ಲದಿದ್ದರೆ ಅದು ತನ್ನ ಶಸ್ತ್ರಾಸ್ತ್ರಗಳನ್ನು ಯಾರಿಗೆ ಮಾರುತ್ತದೆ.

- ಸಂಜಯ್ ಕುಮಾರ್

ಉತ್ತರ 2: ಸಾಧ್ಯವಿಲ್ಲ. ಆತಂಕ ಪರಿಸ್ಥಿತಿಯನ್ನು ಜೀವಂತವಾಗಿಟ್ಟು ಅದನ್ನು ವಾಣಿಜ್ಯ ಮತ್ತು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುವುದೇ ಅಮೇರಿಕದ ತಂತ್ರ.

ಇಂಡಿಯಾ ಟುಡೆಯಿಂದ

ಸಾಹುಕಾರನಿಗೆ ಸಾಲಗಾರನಿಂದ ಸಾಲ?

ಭಾರತ ಐಎಂಎಫ್‌ಗೆ ಸಾಲ ನೀಡುತ್ತಿದೆಯಂತೆ ನಂಬುತ್ತೀರಾ? ಹೌದು ಭಾರತ ಐಎಂಎಫ್‌ಗೆ ಸಾಲ ನೀಡುತ್ತಿದೆ.

ಆದರೆ ಭಾರತ ಐಎಂಎಫ್‌ಗೆ ಯಾವುದೇ ಷರತ್ತು ಹಾಕುವಂತಿಲ್ಲ. ಬದಲಿಗೆ ಐಎಂಎಫ್ ಭಾರತವನ್ನೂ ತನಗೆ ಸಾಲ ನೀಡುವ ದೇಶಗಳ ಪಟ್ಟಿಗೆ ಸೇರಿಸಿಕೊಂಡಿದೆಯಂತೆ. ಸಾಲ ಯಾರೇ ಕೊಡಲಿ ಷರತ್ತುಗಳು ಐಎಂಎಫ್‌ನದೇ.

ವ್ಯಾಪಾರ ಬಾಕಿಯ ಉತ್ತಮ ಪರಿಸ್ಥಿತಿ ಇರುವ ಮತ್ತು ವಿದೇಶೀ ವಿನಿಮಯದ ಶಿಲ್ಕು ಇರುವ ದೇಶಗಳನ್ನು ಐಎಂಎಫ್ ತನಗೆ ಸಾಲ ನೀಡಬಲ್ಲ ದೇಶಗಳೆಂದು ಗುರುತಿಸಿದೆ. ಆದ್ದರಿಂದಲೇ ಭಾರತಕ್ಕೆ ಈ ಸ್ಥಾನ.

ನಮ್ಮ ಪರಿಸ್ಥಿತಿ ಬಿಗಡಾಯಿಸಿದರೆ ಆಗ ಐಎಂಎಫ್ ನಮಗೆ ಸಾಲ ನೀಡುತ್ತದೆ. ನಮ್ಮ ಅಧಿಕಾರಕ್ಕೆ ಹಾನಿ ಮಾಡುವ ಷರತ್ತುಗಳನ್ನು ಅದು ಹೇರುತ್ತದೆ.

ಖಾಸಗಿ ಬ್ಯಾಂಕುಗಳ ಗೋಳು

ಭಾರತದ ಖಾಸಗಿ ಬ್ಯಾಂಕುಗಳು ಈಗಾಗಲೇ ಗೋಳಾಡತೊಡಗಿವೆ. ಗ್ಲೋಬಲ್ ಟ್ರಸ್ಟ್ ಬ್ಯಾಂಕು ತನ್ನ 2002-03 ನೇ ಸಾಲಿನ ಆಯ-ವ್ಯಯ ತಖ್ತೆಯನ್ನು ನೀಡಲು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಸಮಯಾವಕಾಶ ಪಡೆದುಕೊಂಡಿದೆ. ಹಲವು ರೀತಿಯ ಆಂತರಿಕ ಸಮಸ್ಯೆಗಳನ್ನು ಎದುರಿಸುತ್ತಿರುವ ಈ ಬ್ಯಾಂಕು ಈ ಸಮಸ್ಯೆಗಳನ್ನು ಹೇಗೆ ಪರಿಹರಿಸಿಕೊಳ್ಳುತ್ತದೋ ಕಾದು ನೋಡಬೇಕು.

ದೇಶದ ಮುಖ್ಯ ಹಣಕಾಸು ಸಂಸ್ಥೆಯಾಗಿದ್ದು ಈಗ ಖಾಸಗಿ ಬ್ಯಾಂಕಾಗಿರುವ ಐಸಿಐಸಿಐ ಬ್ಯಾಂಕು ನಷ್ಟ ತೋರಿಸಿದೆ. ಈ ನಷ್ಟ ಅಮೇರಿಕದ ಲೆಕ್ಕಪತ್ರ ನಿಯಮಗಳ ಪ್ರಕಾರ ಎನ್ನಲಾಗಿದೆಯಾದರೂ ಅದು ಯಾಕೆ ಹಾನಿ ಮಾಡಿತು ಎಂಬುದು ಪ್ರಶ್ನೆ.

ಉದಾರೀಕರಣ ಬ್ಯಾಂಕಿಂಗ್ ವ್ಯವಸ್ಥೆಯನ್ನು ಬಲಪಡಿಸುತ್ತದೆ ಎನ್ನುತ್ತಿದ್ದವರು ಇದನ್ನು ಗಮನಿಸುತ್ತಿರುವರೇ?

ಅಂಕಿ ಸಂಖ್ಯೆ

2002 - 2003 ರಲ್ಲಿ	ಸಾರ್ವಜನಿಕ ಉದ್ದಿಮೆ	ಖಾಸಗಿ ಉದ್ದಿಮೆ
ಸರ್ಕಾರಕ್ಕೆ ನೀಡಿದ ಡಿವಿಡೆಂಡ್		
ಓಎನ್‌ಜಿಸಿ	16,492 ಕೋಟಿ ರೂ.	10,000 ಕೋಟಿ ರೂ.(ರಿಲೆಯನ್ಸ್ ಗ್ರೂಪ್)
ಐಓಸಿ	33,007 ಕೋಟಿ ರೂ.	
ವೇತನ (ತಿಂಗಳಿಗೆ)	ಓನ್‌ಜಿಸಿಯ ಮುಖ್ಯಾಧಿಕಾರಿ ಸುಬಿರ್ ರಾ ಅವರಿಗೆ ರೂ. 50,000	ರಿಲೆಯನ್ ಗುಂಪಿನ ಮುಖೇಶ್ ಅಂಬಾನಿಗೆ ರೂ. 1.015 ಕೋಟಿ ರೂ. ಮತ್ತು 12 ಮಳಿಗೆಗಳ ಬಂಗಲೆ ಅನಿಲ್ ಅಂಬಾನಿಗೆ ರೂ. 1.0124 ಕೋಟಿ ರೂ. ಮತ್ತು 12 ಮಳಿಗೆಗಳ ಕಟ್ಟಡ

ಸಾರ್ವಜನಿಕ ಉದ್ದಿಮೆ ಲಾಭ ಗಳಿಸಿದರೆ, ಅದರ ಲಾಭ ಸರಕಾರಗಳಿಗೆ ಹಾಗೂ ದೊಡ್ಡ ಸಂಖ್ಯೆಯಲ್ಲಿ ನೌಕರರನ್ನು ಹೊಂದಿರುವುದರಿದ ಅವರ ಕುಟುಂಬಕ್ಕೆ

ಖಾಸಗಿ ಉದ್ದಿಮೆ ಲಾಭ ಗಳಿಸಿದರೆ ಅದರ ಮಾಲಿಕನ ಆಸ್ತಿ ಹೆಚ್ಚಾಗುತ್ತದೆ. ಉದ್ಯೋಗ ರಹಿತ ಬೆಳವಣಿಗೆಯ ಇಂದಿನ ದಿನಗಳಲ್ಲಿ ಉದ್ಯೋಗವೂ ಸಿಗುವುದಿಲ್ಲ

(ಮೂಲ : ಇಕಾನಾಮಿಕ್ ಟೈಮ್ಸ್ - 4.7.03)

ಬಿಸಿ ಊಟದಲ್ಲೂ ಅಸ್ಪೃಶ್ಯತೆ

ಸಂ-ಸ್ಮ

ಕರ್ನಾಟಕ ರಾಜ್ಯವು ಕೈಗಾರಿಕೆ, ಐ.ಟಿ ಮೊದಲಾದ ಕ್ಷೇ
ಮುಂದಿದೆ ಎಂದು 'ಹೈಟೆಕ್' ಬಡಾಯಿ ಕೊಚ್ಚಿಕೊ
ಗ್ರಾಮೀಣ ಪ್ರದೇಶದಲ್ಲಿ ಅಸ್ಪೃಶ್ಯತೆ ಇನ್ನೂ ಮುಂದುವ
ಎಂಬುದು ನಾಚಿಕೆಗೇಡಿನ ಸಂಗತಿ. ಅಸ್ಪೃಶ್ಯತೆ ಎ
ಪಾಳೇಗಾರಿ ಮೌಲ್ಯದ ಸಂಕೇತ ಎಂದು ವಿಶ್ಲೇಷಿಸಿ ತೆಪ್ಪಗಿರಬ
ಅದರೆ ಇದರಿಂದ ಉಂಟಾಗಿದ್ದ ಸಾಮಾಜಿಕ ಅಸಮ
ಶೋಷಣೆ, ಅಶಾಂತಿ, ನಾಗರಿಕ ಸಮಾಜವನ್ನು ತಲೆ ತಗ್ಗಿ

ಅಸ್ಪೃಶ್ಯತೆ ಸಂವಿಧಾನ ವಿರೋಧಿ ಮಾತ್ರವಲ್ಲದೆ, ಪ್ರಜಾ
ಮೌಲ್ಯಗಳ ನಾಶಕ್ಕೆ ಕಾರಣವಾಗುತ್ತದೆ. ಪ್ರಜಾಸತ್ತಾತ್ಮಕ
ಬೆಳವಣಿಗೆಗೂ ಕಂಟಕಪ್ರಾಯವಾಗಿದೆ. ಬಿಸಿಯೂಟ
ಇಂತಹ ಘೋರ ಅಸ್ಪೃಶ್ಯತೆ ಮನೆ ಮಾಡಿದೆ ಎಂದರೆ, ಗ್ರಾ
ಪ್ರದೇಶದಲ್ಲಿ ಯಾವ ಪ್ರಮಾಣದಲ್ಲಿ ಇದು ಬೇರೂರಿದೆ ಎ
ಸ್ಪಷ್ಟವಾಗುತ್ತದೆ.

1ನೇ ತರಗತಿಯಿಂದ 5ನೇ ತರಗತಿಯವರೆಗೆ ಓದು
ಮಕ್ಕಳಿಗೆ ಮಧ್ಯಾಹ್ನ ಬಿಸಿಯೂಟ ನೀಡಬೇಕೆಂದು ಸರಕಾರ
ಹೊರಡಿಸಿದೆ. ಅಡಿಗೆ ತಯಾರಿಗಾಗಿ 3 ಜನರನ್ನು
ಮಾಡಬೇಕೆಂದು ಆದೇಶ ಹೊರಡಿಸಿದ್ದು ಅದರಲ್ಲಿ
ಒಬ್ಬರಾದರೂ ಪರಿಶಿಷ್ಟ ಜಾತಿ / ಪಂಗಡಗಳಿಗೆ ಸೇ
ಇರಬೇಕೆಂದು ಹೇಳಲಾಗಿದೆ. ಇದು ಸ್ವಾಗತಾರ್ಹ.

ಪರಿಶಿಷ್ಟ ಜಾತಿ / ಪಂಗಡಗಳಿಗೆ ಸೇರಿದವರು
ಮಾಡುತ್ತಾರೆ ಎಂಬ ಕಾರಣಕ್ಕಾಗಿ, ಸವರ್ಣೀಯರು ತಮ್ಮ
ಊಟಕ್ಕೆ ಕಳಿಸದೆ ಇರುವುದು, ಅಡಿಗೆ ತಯಾರಿಕೆ ಪ
ಪರಿಶಿಷ್ಟ ಜಾತಿಯವರಿದ್ದರೆ ಅವರು ಅಡಿಗೆ ಕೆಲಸ ಮಾ
ನೋಡಿಕೊಳ್ಳುವ ಪಿತೂರಿ ನಡೆಯುತ್ತಿದೆ ಎಂದು ವ
ಬರುತ್ತಿವೆ.

ರಾಜ್ಯ ಸರಕಾರದ ಬೇಜವಾಬ್ದಾರಿತನ, ಕೇಂದ್ರಸ
ಗೋದಾಮುಗಳಲ್ಲಿನ ಕೊಳೆತ ಆಹಾರ ಸಾಮಗ್ರಿಗ
ಕೆಲವೊಂದು ಕಡೆಗಳಲ್ಲಿ ಮಕ್ಕಳ ಅಸ್ವಸ್ಥತೆಗೆ ಕಾರಣವಾದರೆ,
ಜಾತಿಯವರು ಅಡಿಗೆ ಮಾಡುವುದರಿಂದಲೇ ಈ ರೀತಿ
ಎಂದು ಮೂಢನಂಬಿಕೆಯನ್ನು ಪ್ರಚಾರಿಸುವ ಅಂಧ
ಗ್ರಾಮೀಣ ಪ್ರದೇಶದಲ್ಲಿ ತುಂಬಿ ಹೋಗಿದ್ದಾರೆ. ಸ
ವೈಫಲ್ಯಗಳನ್ನು ರಾಜಕೀಯವಾಗಿ ಎದುರಿಸಬೇಕು. ರಾ
ಲಾಭಕ್ಕಾಗಿ ಮೂಢ ನಂಬಿಕೆಯನ್ನು ಪ್ರಚಾರಿಸುವು
ಸಾಮಾಜಿಕ ಅಶಾಂತಿಯನ್ನು ಬೆಳೆಸುವುದಾಗಲಿ ಸಲ್ಲ
ಸಂದರ್ಭದಲ್ಲಿ ಸಮಾಜಕ್ಕಾಗಿ ಚಿಂತಿಸುವ ಎಲ್ಲಾ ರಾ
ಪಕ್ಷಗಳು, ಪ್ರಗತಿಪರ ಸಂಘಟನೆಗಳು ಒಂದಾಗಿ ಪ್ರತಿಕ್ರಿಯಿ
ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರ ಸಂವಿಧಾನಬದ್ಧ
ಎತ್ತಿ ಹಿಡಿಯಬೇಕು. ಸ್ವಾತಂತ್ರ್ಯ ಬಂದು 56 ವರ್ಷಗಳ
ಅಸ್ಪೃಶ್ಯತೆ ಮುಂದುವರಿಯುತ್ತಿರುವುದರ ವಿರುದ್ದ ಸಮರ ಸಾ

ಜುಲೈ 10 ರ ಜನವಾಹಿನಿ ಪತ್ರಿಕೆಯಲ್ಲಿ ಮುಖ
ಪ್ರಕಟವಾದ 'ದಲಿತ ಮಕ್ಕಳಿಗೆ ಬಿಸಿಯೂಟ ನಿರಾಕರಣೆ'
7ನೇ ಪುಟದಲ್ಲಿ ಪ್ರಕಟವಾದ 'ಬಿಸಿಯೂಟ ಉಂ
ಗೋಮೂತ್ರ ಸ್ನಾನ' ಘಟನೆಗಳು ಮನಕಲಕುವ ಘಟನೆ
ನಾಗರೀಕ ಸಮಾಜವನ್ನು ತಲೆ ಎತ್ತದಂತೆ ಮಾಡಿದೆ. 19
ಅಂತರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ (ಐ
ಭಾಗವಹಿಸಿದ್ದ ಮಹಾರಾಷ್ಟ್ರದ ಕಮ್ಯುನಿಸ್ಟ್
ಆರ್.ಬಿ.ಮೋರೆ, ಕಾರ್ಮಿಕರ ನಡುವೆ ಇರುವ ಅಸ್ಪೃಶ್ಯತೆಯ
ಜಗತ್ತಿನ ಗಮನ ಸೆಳೆದಿದ್ದರು. ಆದರೆ ಭಾರತದಲ್ಲಿ
ಚಳುವಳಿಯು ಪ್ರಬಲವಾಗಿರುವ ರಾಜ್ಯಗಳನ್ನು ಬಿಟ್ಟು
ರಾಜ್ಯಗಳಲ್ಲಿ ಅಸ್ಪೃಶ್ಯತೆ ಇನ್ನೂ ತೀವ್ರವಾಗಿ ಕಾಡುತ್ತಿದೆ.

ಇಂತಹ ಸಂದರ್ಭದಲ್ಲಿ ಪ್ರಜಾಸತ್ತಾತ್ಮಕ, ಪ್ರಗತಿಪರ
ಮಧ್ಯ ಪ್ರವೇಶ ತೀರಾ ಅವಶ್ಯ. ಇಲ್ಲವಾದಲ್ಲಿ, ಜಾತಿ
ಕೋಮುವಾದಿ ಸಂಘಟನೆಗಳು, ಪಕ್ಷಗಳು ಇದರ ಲಾಭ
ಸಮಾಜದಲ್ಲಿ ಅಶಾಂತಿಯನ್ನು ಉಂಟು ಮಾಡಿ
ಮಾತ್ರವಲ್ಲದೆ, ರಾಜಕೀಯ ಲಾಭ ಪಡೆದು ಅಧಿ
ವಿಜೃಂಭಿಸಲು ಪ್ರಯತ್ನಿಸುತ್ತವೆ.

- ಬಾಲಕೃ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH